
# ಫ. ಗು. ಹಳಕಟ್ಟಿ

ಡಾ. ದೇವೇಂದ್ರಕುಮಾರ ಹಕಾರಿ



K
891.481 409 2
H 128 H

K
891.481 409
2
H 128 H

ಒಳಪುಟದಲ್ಲಿರುವ ಶಿಲ್ಪಕಲಾದೃಶ್ಯದಲ್ಲಿ ಮಾಯಾದೇವಿ ಕಂಡ ಕನಸಿನ ಫಲವನ್ನು ರಾಜ ಶುದ್ಧೋಧನನಿಗೆ ಭವಿಷ್ಯವಾದಿಗಳು ವಿವರಿಸುತ್ತಿರುವುದು. ಅವರ ಕೆಳಭಾಗದಲ್ಲಿ ಕುಳಿತಿರುವವರು ಆ ವಿವರಣೆಯನ್ನು ಬರೆದುಕೊಳ್ಳುತ್ತಿದ್ದಾರೆ. ಬರವಣಿಗೆಯನ್ನು ಚಿತ್ರಿಸುವ ಮೊದಲ ಭಾರತೀಯ ಶಿಲ್ಪ ಬಹುಶಃ ಇದೇ ಆಗಿರಬಹುದು.
ನಾಗಾರ್ಜುನ ಬೆಟ್ಟದ ಶಿಲ್ಪಗಳು: ಕ್ರಿ.ಶ.ಎರಡನೆಯ ಶತಮಾನ
ಕೃಪೆ: ರಾಷ್ಟ್ರೀಯ ವಸ್ತು ಸಂಗ್ರಹಾಲಯ, ಹೊಸದೆಹಲಿ

ಭಾರತೀಯ ಸಾಹಿತ್ಯ ನಿರ್ಮಾಣಕಾರರು

# ಫ. ಗು. ಹಳಕಟ್ಟಿ

ಲೇಖಕರು

ಡಾ. ದೇವೇಂದ್ರಕುಮಾರ ಹಕಾರಿ

ಸಾಹಿತ್ಯ ಅಕಾದೆಮಿ

*F. G. Halakatti* - A monograph in kannada by
Devendrakumara Hakari, Sahitya Akademi, New Delhi. 1996
Rs. 15

ISBN 81-7201-587-9

K
891.481 4092
H 128 H

© ಸಾಹಿತ್ಯ ಅಕಾದೆಮಿ

ಪ್ರಥಮ ಮುದ್ರಣ 1996

ಸಾಹಿತ್ಯ ಅಕಾದೆಮಿ

ಪ್ರಧಾನ ಕಾರ್ಯಾಲಯ

ರವೀಂದ್ರ ಭವನ, ೩೫, ಫಿರೋಜ್‌ಷಹಾ ರಸ್ತೆ, ಹೊಸ ದೆಹಲಿ-೧೧೦ ೦೦೧.
'ಸ್ವಾತಿ', ಮಂದಿರ್‌ಮಾರ್ಗ, ನವದೆಹಲಿ -೧೧೦ ೦೦೧
೧೦೯, ಜೆ. ಸಿ. ರೋಡ್, ಬೆಂಗಳೂರು-೫೬೦ ೦೦೨
ಜೀವನ್ ತಾರಾ ಬಿಲ್ಡಿಂಗ್, ४ ನೇ ಮಹಡಿ, ಡೈಮಂಡ್ ಹಾರ್ಬರ್ ರೋಡ್
ಕಲ್ಕತ್ತಾ -೭೦೦ ೦೫೩
೧೭೨, ಬೊಂಬಾಯಿ ಮರಾಠಿ ಗ್ರಂಥ ಸಂಗ್ರಹಾಲಯ ರಸ್ತೆ, ದಾದರ್,
ಬೊಂಬಾಯಿ-೪೦೦ ೦೧೪
ಗುಣ ಬಿಲ್ಡಿಂಗ್ಸ್, ಎರಡನೆ ಮಹಡಿ, ೩೦೪-೩೦೫, ಅಣ್ಣಾ ಸಾಲೈ
ಮದ್ರಾಸ್-೬೦೦ ೦೧೮

Library IIAS, Shimla
K 891.481 409 2 H 128 H
00117211

Indian Institute of Advanced Study
117211
10.12.04
SHIMLA

ಅಕ್ಷರ ಜೋಡಣೆ
ಮುದ್ರಾ ಪ್ರಿಂಟ್ಸ್
ನಂ ೫೬, ಡಿ.ವಿ.ಜಿ. ರಸ್ತೆ, ಬಸವನಗುಡಿ,
ಬೆಂಗಳೂರು-೫೬೦ ೦೦೪

ಮುದ್ರಕರು
ಲಿಪಿ ಮುದ್ರಣ, ಬ್ಯೂಗಲ್ ರಾಕ್ ರಸ್ತೆ, ಬೆಂಗಳೂರು - ४

# ಲೇಖಕನ ಮಾತು

ಕೇಂದ್ರ ಸಾಹಿತ್ಯ ಅಕಾಡಮಿ **ಫ.ಗು. ಹಳಕಟ್ಟಿ** ಅವರನ್ನು ಕುರಿತು ಒಂದು ಕೃತಿ ರಚಿಸುವ ಅವಕಾಶವನ್ನು ನನಗೆ ಕಲ್ಪಿಸಿಕೊಟ್ಟದ್ದಕ್ಕೆ ಕೃತಜ್ಞನಾಗಿದ್ದೇನೆ.

19.3.1996 **ದೇವೇಂದ್ರಕುಮಾರ ಹಕಾರಿ**

# ಪರಿವಿಡಿ


| | |
|---|---|
| ೧. ಪೀಠಿಕೆ | 7 |
| ೨. ಜೀವನ | 13 |
| ೩. ವಚನ ಸಾಹಿತ್ಯ ಸಂಶೋಧನ ಪಿತಾಮಹ | 27 |
| ೪. ಅವಿಸ್ಮರಣೀಯ ಸಂವಹನಕಾರ | 49 |
| ೫. ವಿವಿಧ ಸೇವಾ ನೆಲೆಗಳು | 71 |
| ೬. ವ್ಯಕ್ತಿ- ವೈಶಿಷ್ಟ್ಯ- ಘನತೆ | 76 |
| ಗ್ರಂಥಋಣ | 81 |

# ೧. ಪೀಠಿಕೆ

'ಸ್ವಭಾವೋದ್ಭಟಾಃ ಕರ್ನಾಟಾಃ' 'ಕರ್ನಾಟಕದವರು ಸ್ವಭಾವತಃ ಶೂರರು' ಎನ್ನುವ ಪ್ರಶಂಸೆಗೆ ಒಳಗಾಗಿದ್ದ ಕನ್ನಡಿಗರು, ಉದಾರ ಹೃದಯಿಗಳು ಕೂಡ. ವಿವಿಧ ಮತ ಧರ್ಮಗಳನ್ನು ಒಪ್ಪಿಕೊಂಡ ಅವರು, ಧರ್ಮಸಮನ್ವಯ ದೃಷ್ಟಿಯಿಂದ ಬಾಳುತ್ತ ಬಂದರು. ವಿಜಯನಗರದ ಅರಸರ ಕಾಲದಲ್ಲಿ ಕರ್ನಾಟಕಕ್ಕೆ ಬಂದ ಅನೇಕ ವಿದೇಶೀ ರಾಯಭಾರಿ, ಪ್ರವಾಸಿಗರು ಕರ್ನಾಟಕದ ವೈಭವವನ್ನು ಕಂಡು ಬೆರಗಾಗಿದ್ದಾರೆ. ಇಲ್ಲಿಯ ವಾಣಿಜ್ಯ, ಕಲೆ, ಸಾಹಿತ್ಯ ಸಂಸ್ಕೃತಿಗಳ ಹಿರಿಮೆಯನ್ನು ಮನವಾರೆ ಮೆಚ್ಚಿ ಬರೆದಿದ್ದಾರೆ. ವಿಜಯನಗರದ ಆಳ್ವಿಕೆ ಮುಗಿದು, ಆದಿಲ್ ಶಾಹಿಗಳ ಕೈಕೆಳಗೆ, ಬಳಿಕ 'ಸೂರ್ಯ ಮುಳುಗದ ಸಾಮ್ರಾಟ'ರೆಂದು ಹಿಂದೊಮ್ಮೆ ತಮ್ಮನ್ನು ತಾವೇ ಉತ್ಪ್ರೇಕ್ಷಿಸಿಕೊಂಡ ಆಂಗ್ಲರ ಅಧೀನವಾಗಿ ಮತ್ತೆ ಮರಾಠಾ ಪೇಶ್ವೆ ಮುಂತಾದವರ ಆಜ್ಞಾನುವರ್ತಿಗಳಾದ ಕನ್ನಡಿಗರು ತಮ್ಮತನವನ್ನು –ಅಪ್ರಜ್ಞಾಪೂರ್ವಕವಾಗಿ – ಕೆಲವೊಮ್ಮೆ ಅಸಹಾಯಕವಾಗಿ – ಕಳೆದುಕೊಳ್ಳುತ್ತ ಬಂದಂತೆ ಕಾಣುತ್ತದೆ. ಬೇರೆ ಬೇರೆ ಸಂಸ್ಥಾನಗಳಲ್ಲಿ ಹರಿದು ಹಂಚಿದ ಕನ್ನಡಿಗರು, ಕಿತ್ತೂರು ಸಂಸ್ಥಾನದ ಮೂಲಕ ೧೮೫೭ ರಷ್ಟು ಪೂರ್ವದಲ್ಲಿಯೇ ಪ್ರತಿಭಟನೆ ವ್ಯಕ್ತಪಡಿಸಿ, ತಮ್ಮ ಸ್ವಾತಂತ್ರ್ಯಕ್ಕಾಗಿ ಮೊಟ್ಟಮೊದಲು ಉಗ್ರಹೋರಾಟ ಮಾಡಿದರು. 'ಭಾರತ ಸ್ವಾತಂತ್ರ್ಯದ ಬೆಳ್ಳಿಚುಕ್ಕಿ' ಎಂದು ಖ್ಯಾತಳಾದ ಕಿತ್ತೂರು ರಾಣಿ ಚೆನ್ನಮ್ಮನ ಮೂಲಕ ಸ್ವಾತಂತ್ರ್ಯ ಸೂರ್ಯನ ಆಗಮನಕ್ಕೆ ನಾಂದಿ ಹಾಡಿದರು. ಆದರೆ ಬ್ರಿಟಿಷರು ತಮ್ಮ ಸಾಮ್ರಾಜ್ಯಶಕ್ತಿ, ರಾಜನೀತಿ ತಂತ್ರಗಳಿಂದಾಗಿ ದೇಸೀಯ ಸಂಸ್ಥಾನಗಳನ್ನು ಪರಸ್ಪರ ವಿರುದ್ಧ ಎತ್ತಿಕಟ್ಟಿ, ಹಲಗಲಿ ಬೇಡರು ಪ್ರತಿಭಟಿಸಿ ನಿಂತ ಸಾಮೂಹಿಕ ಜನಪದ ಬಂಡಾಯವನ್ನು ನಿರ್ನಾಮ ಮಾಡಿ, ಒಂದು ಕಡೆ ಪೇಶ್ವೆ ಮತ್ತೊಂದು ಕಡೆ ನಿಜಾಮ, ಮಗದೊಂದು ಕಡೆ ಮೈಸೂರು, ಇನ್ನೊಂದೆಡೆ ತಮಿಳರ ಆಳರಸರು ಹೀಗೆ ವಿವಿಧ ಭಾಗಗಳಲ್ಲಿ ಕನ್ನಡ ಪ್ರದೇಶಗಳು ಹರಿದು ಹಂಚಿಹೋಗುವ ರೀತಿಯಲ್ಲಿ ತಮ್ಮ ಆಡಳಿತಜಾಲವನ್ನು ಹರಡಿದರು. ಒಂದು ಕಡೆ ಮೊಗಲ ಆಳರಸರ ಉರ್ದೂ ಫಾರಸಿ ಪ್ರಭಾವ, ಇನ್ನೊಂದೆಡೆ ಪೇಶ್ವೆ ಮಹಾರಾಜರ ಮರಾಠಿ ದಬ್ಬಾಳಿಕೆ, ಮತ್ತೊಂದು ನಿಟ್ಟಿನಿಂದ ತಮಿಳು ತೆಲುಗು ಆಳರಸರ ಒತ್ತಡ. ಹೀಗೆ ಅಲ್ಲಲ್ಲಿಯೇ ಇದ್ದ ಕನ್ನಡ ಜನ, ತಮ್ಮ ಭಾಷೆ ಸಂಸ್ಕೃತಿಗಳ ಸಹಜ ಜೀವನ ಸ್ವರೂಪದಿಂದ ದೂರ ಸರಿಯುತ್ತ, ಪರಭಾಷಾ,

ಅನ್ಯಸಂಸ್ಕೃತಿಗಳ ಪ್ರಭಾವಕ್ಕೆ ಸಿಲುಕುತ್ತ ಬಂದರು. ಸಾಮಾನ್ಯವಾಗಿ ಈ ಸ್ಥಿತಿ ಭಾರತದ ಅನೇಕ ಭಾಷಾಪ್ರದೇಶಗಳಿಗೆ ಅನ್ವಯಗೊಳ್ಳುವಂಥದೇ. ಆದರೆ ಈ ಮಾತು ಉತ್ತರಕರ್ನಾಟಕದ ರಾಯಚೂರು, ಬಳ್ಳಾರಿ, ಧಾರವಾಡ, ಬೆಳಗಾವಿ, ಬಿಜಾಪುರ, ಗುಲ್ಬರ್ಗಾ, ಬೀದರ ಭಾಗಗಳಿಗೆ ಹೆಚ್ಚು ಅನ್ವಯಗೊಳ್ಳುತ್ತದೆ. ಅದರಲ್ಲೂ ವಿಶೇಷತಃ ಧಾರವಾಡ, ಬೆಳಗಾವಿ, ಬಿಜಾಪುರ ಪ್ರದೇಶಗಳು: ಇಲ್ಲಿ ಮತ್ತು ಅದಕ್ಕೆ ಹೊಂದಿಕೊಂಡ ಕನ್ನಡ ಭಾಷಿಕ ನೆಲೆಗಳಲ್ಲಿ ಅನೇಕ ಮರಾಠಾ ಸಾಮಂತರು ತಲೆಯೆತ್ತಿದರು. ತಮತಮಗೆ ಸಿಕ್ಕಷ್ಟು ಭಾಗಗಳನ್ನು ದೋಚಿ, ಬಾಚಿ ನಮ್ಮ 'ರಾಜ' 'ಮಹಾರಾಜ'ರಾದರು. ಪಟವರ್ಧನ, ಶಾಹು, ಮೊದಲಾದ ಮನೆತನಗಳು ರಾಜಮನೆತನ ಎನ್ನಿಸಿಕೊಂಡವು. ಜಮಖಂಡಿ, ಸಾಂಗ್ಲಿ, ಮುಧೋಳ, ಮಿರಜ, ಜತ್ತ, ಔಂಧ, ಕುರಂದವಾಡ, ಸವಣೂರ, ರಾಮದುರ್ಗ ಮುಂತಾದ ಅನೇಕ ಸಂಸ್ಥಾನಗಳು ಹುಟ್ಟಿಕೊಂಡವು. ಆಡಳಿತದ ಅಧಿಕಾರ ರಾಜಮನೆತನದ ಸಂಬಂಧಿಕರ ಕೈಗೆ ದಕ್ಕಿತು. ವಾಣಿಜ್ಯ ವ್ಯಾಪಾರದ ಮೇಲೆ ಈ ಮನೆತನಗಳವರು ಅಧಿಕಾರ ಚಲಾಯಿಸಿದರು. ಸ್ಥಳೀಯ ಪ್ರದೇಶದ ಜನತೆ ಕೇವಲ ಊಳಿಗಕ್ಕೆ ಬಾಗಬೇಕಾಯಿತು. ತಮ್ಮದಲ್ಲದ ಭಾಷೆ, ಅನ್ಯ ನಡವಳಿಕೆ, ಅಪರಿಚಿತ ರೀತಿ ರಿವಾಜುಗಳ ಹೇರಿಕೆ, ಹೀಗೆ ಕನ್ನಡದ ಮಕ್ಕಳು ಕನ್ನಡ ನೆಲದಲ್ಲಿಯೇ ತಮ್ಮ ಮೂಲ ಸಂಸ್ಕೃತಿ ಸಾಹಿತ್ಯಗಳಿಂದ ದೂರ ಸರಿಯುತ್ತ ಹೋಗಿದ್ದರು. ಜನ ಒಂದು ವಿಧದ ವಿಸ್ಮೃತಿಯಲ್ಲಿ ಬಾಳುವಂಥ ಪರಿಸ್ಥಿತಿ ನಿರ್ಮಾಣವಾಗಿತ್ತು.

## ಶಿಕ್ಷಣ– ಭಾಷೆ

ಹೆಚ್ಚಾಗಿ ಮರಾಠಿ ಮತ್ತು ಮೋಡಿ ಭಾಷಿಕರೇ ಆಡಳಿತಗಾರರು. ಅವರ ಕೈಸನ್ನೆ ಕಾನೂನು; ಮರಾಠಿ, ಕೋರ್ಟು ಕಚೇರಿಗಳ ಭಾಷೆಯಾಯಿತು; ವಾಣಿಜ್ಯ ವ್ಯವಹಾರದಲ್ಲಿ ಕೂಡ ಅದರದೇ ಬಳಕೆ. ಖಾತೆ ಕಿರ್ದಿ ಎಲ್ಲ ಮೋಡಿ ಮತ್ತು ಮರಾಠಿ ಭಾಷೆಯಲ್ಲಿ. ಕನ್ನಡ ಭಾಷೆ ಕೇವಲ ಮನೆಯಲ್ಲಿ ಮಾತ್ರ ಬಳಸುವ ವೈಚಿತ್ರ್ಯ ತಲೆದೋರಿತು. ಸಂಸ್ಥಾನಿಕರು, ಅವರ ಸಂಬಂಧಿಕರು ಮತ್ತು ಮೇಲುದರ್ಜೆಯ ಅಧಿಕಾರಿ ವ್ಯಾಪಾರಿಗಳ ಮಕ್ಕಳು ಪುಣೆ ಮುಂಬೈಗಳಂಥ ದೊಡ್ಡ ದೊಡ್ಡ ನಗರಗಳಿಗೆ ಹೋಗಿ ಶಿಕ್ಷಣ ಪಡೆದು ಬರುತ್ತಿದ್ದರು. ಅಗ್ರಹಾರ, ಮಠಮಾನ್ಯಗಳಲ್ಲಿದ್ದ ಶಾಲೆಗಳಲ್ಲಿ, ಪಾಠಕ್ರಮಗಳಲ್ಲಿ ಸಂಸ್ಕೃತ ಭಾಷೆಯ ಜೊತೆಗೆ ಒಂದಷ್ಟು ಕನ್ನಡದ ಅಭ್ಯಾಸ. ಕನ್ನಡಿಗರ ಪರಂಪರೆ, ಭಾಷೆ, ಸಾಹಿತ್ಯ ಸಂಸ್ಕೃತಿಗಳ ಹಿರಿಮೆಯಾಗಲಿ, ಘನತೆಯಾಗಲಿ ಜನತೆಗೆ ಕನ್ನಡಿಗರಿಗೆ ಪರಿಚಯವಾಗುವ ಅವಕಾಶಗಳು ಕುಗ್ಗುತ್ತ ನಡೆದವು. ಕನ್ನಡ ಕಲಿಕೆ ಅಪರೂಪವಾಗುತ್ತ ಬಂದಿತು. ಆಂಗ್ಲಮೂಲದ ಕೆಲವು ಅಧಿಕಾರಿಗಳು ಕನ್ನಡ, ಜನರ ಭಾಷೆ; ಅದರಲ್ಲಿಯೇ ಆಡಳಿತ ನಡೆಯಬೇಕೆಂದು ಒಂದು ವಾಸ್ತವಿಕ ಧೋರಣೆಗೆ ಒತ್ತುಕೊಟ್ಟರೂ, ಮರಾಠಿ ಭಾಷೆಯ ಪ್ರಾಬಲ್ಯಕ್ಕೆ ಚ್ಯುತಿ ಬರಲಿಲ್ಲ. ಉತ್ತರ ಕರ್ನಾಟಕ ಇತರ ಭಾಗಗಳ

ಮಾತು ಒಂದು ಕಡೆಗಿರಲಿ; ಕನ್ನಡದ ಗಂಡುಮೆಟ್ಟಿನ ನೆಲ ಅಥವಾ ಅಚ್ಚಗನ್ನಡದ ನೆಲ ಎಂದುಕೊಳ್ಳುವವ ಧಾರವಾಡ ಮತ್ತು ಸುತ್ತಮುತ್ತಣ ತಾಲೂಕಾ ಇತ್ಯಾದಿ ಸ್ಥಳಗಳಲ್ಲಿ ಕೂಡ ಕನ್ನಡ ಕಲಿಕೆ, ಶಿಕ್ಷಣ ತುಂಬಾ ಮಂಕಾಗಿತ್ತು. ಒಳ್ಳೆಯ ಶಾಲೆ ಪ್ರಾರಂಭವಾಗಬೇಕಾದರೂ ಧಾರವಾಡ ೧೮೨೬ರ ವರೆಗೆ ನಿರೀಕ್ಷಿಸಬೇಕಾಯಿತು. ತಮಾಷೆಯೆಂದರೆ ಆ ವರ್ಷ ಧಾರವಾಡದಲ್ಲಿ ಆರಂಭಗೊಂಡ ಎರಡೂ, ಮರಾಠಿ ಶಾಲೆಗಳು. ಪಟವರ್ಧನ ಶಾಹು ಮುಂತಾದ ಸಂಸ್ಥಾನಿಕರ ಹಿಡಿತದಲ್ಲಿದ್ದ ಜಮಖಂಡಿ, ಮುಧೋಳ, ಸವಣೂರ ಮುಂತಾದ ಕಡೆಗೆ ಕನ್ನಡ ಕಲಿಕೆಗೆ ಗಾಂವಠಿ ಶಾಲೆಗಳೇ ಗತಿ. ಉದಾಹರಣೆಗೆ ಜಮಖಂಡಿ ಸಂಸ್ಥಾನದ ವಿವರ ಗಮನಿಸಿದರೆ ಈ ಮಾತು ಸ್ಪಷ್ಟವಾಗುತ್ತದೆ. ೧೮೮೨–೮೩ ರ ಕಾಲಾವಧಿಗೆ ಜಮಖಂಡಿ ಸಂಸ್ಥಾನದಲ್ಲಿ ಒಟ್ಟು ಶಾಲೆ ೨೪. ಅವುಗಳಲ್ಲಿ ೧ ಆಂಗ್ಲೋ ವರ್ನ್ಯಾಕ್ಯುಲರ್, ೧ ಹಿಂದೂಸ್ಥಾನಿ ಶಾಲೆ, ೧ ಹೆಣ್ಣುಮಕ್ಕಳ ಶಾಲೆ (ಮರಾಠಿ ಮಾಧ್ಯಮ), ೪ ಕನ್ನಡ–ಮರಾಠಿ ಶಾಲೆಗಳು. ಇವುಗಳಲ್ಲಿ ತೋರಿಕೆಗೆ ಮಾತ್ರ ಕನ್ನಡ; ವಾಸ್ತವವಾಗಿ ಮರಾಠಿಯ ಪ್ರಭಾವ ಅಧಿಕ. ಒಟ್ಟು ೧೭ ಮರಾಠಿ ಶಾಲೆಗಳು. ಇನ್ನು ಗ್ರಾಮೀಣ ಭಾಗದ ಗಾಂವಠಿ ಶಾಲೆಗಳಲ್ಲಿ ಮಕ್ಕಳು ಎಷ್ಟು ಕನ್ನಡ ಕಲಿಯುತ್ತಿದ್ದರೋ ಅಷ್ಟೇ ಕನ್ನಡ ಶಿಕ್ಷಣ. ಇದರಿಂದ ಮರಾಠಿ ವ್ಯಾಮೋಹ ಒಂದು ನೆಲೆಯಲ್ಲಿ ಹೆಚ್ಚುತ್ತ ನಡೆಯಿತು. ಕನ್ನಡದ ಸ್ಥಾನಮಾನ ಕುಗ್ಗುತ್ತ ನಡೆದ ಕಾಲ ಅದು.

## ಸಾಮಾಜಿಕ–ಧಾರ್ಮಿಕ–ರಾಜಕೀಯ

ಸಾಮಾಜಿಕ – ಕೃಷಿಕ ಮತ್ತು ಧಾರ್ಮಿಕ, ರಾಜಕೀಯ - ಸ್ಥಿತಿಗಳಂತೂ ಹೇಳಲಿಕ್ಕಿಲ್ಲ; ಎಲ್ಲವೂ ಅಸ್ತವ್ಯಸ್ತ.

ಪಂಗಡ ಒಳಪಂಗಡಗಳಲ್ಲಿ ಹಂಚಿಹೋದ ಸಮಾಜದ ವಿವಿಧ ಗುಂಪುಗಳು; ಒಕ್ಕಲುಕನದ ಉತ್ಪನ್ನಗಳನ್ನು ತಮ್ಮ ಹಿಡಿತದಲ್ಲಿಯೇ ಇಟ್ಟುಕೊಂಡು, ಊಳಿಗಮಾನ್ಯ ಪದ್ಧತಿಯಿಂದ ಕೃಷಿಕ–ಕೃಷಿಕಾರ್ಮಿಕರನ್ನು 'ಜೀಯಾ' ಎಂದು ಸದಾ ಕೈಯೊಡ್ಡುವಂತೆ, ಡೊಗ್ಗಿ ಸಲಾಮು ಹೊಡೆಯುವಂತೆ, ಬಂದ ಚೂರುಪಾರು ಬೆಳೆಗಳನ್ನು ತಮ್ಮ 'ಅಚೆ'ಗಾಗಿ ಪೇಟೆಗೆ ಬಂದು ಮಾರಿ ದಲ್ಲಾಳಿಗಳ ಹಿಂದೆ ಸದಾ ಅಲೆಯುವಂತೆ ಮಾಡಿದ ಜಮೀನ್ದಾರಿ, ದಲ್ಲಾಲಿ ವ್ಯಾಪಾರ ಪದ್ಧತಿಗಳ ಉರವಣಿಗೆಯಲ್ಲಿ ನಲುಗಿಹೋಗುತ್ತಿದ್ದ ರೈತ, ಕೂಲಿ ಜೀತದಾಳುಗಳು. ಇವೆಲ್ಲ ಆರ್ಥಿಕ ಮುಗ್ಗಟ್ಟುಗಳಲ್ಲಿಯೂ ಅಷ್ಟಷ್ಟು ನೀತಿಪಾಲನೆ ಮಾಡುತ್ತ, ಧಾರ್ಮಿಕ ಪುರಾಣ ಕೀರ್ತನೆ ಕೇಳಿ ಭಕ್ತಿಯ ಅಮಲು ತುಂಬಿದ ತಲೆ, ಬರಿದಾದ ಹೊಟ್ಟೆಗಳ ನಡುವೆ ನೂರಾರು ಬಗೆಯ ಮೂಢನಂಬಿಕೆಗಳಿಗೆ ಬಲಿಯಾಗಿ ಜನರು ಮೌಢ್ಯಗಳನ್ನು ಅರ್ಥಶೂನ್ಯ ಆಚರಣೆಗಳನ್ನು ಧರ್ಮ ಎಂದು ಭಾವಿಸತೊಡಗಿದ್ದರು. ಬಸವತತ್ವಾನುಯಾಯಿಗಳೇ – ಬಹುಸಂಖ್ಯೆಯಲ್ಲಿರುವ ಉತ್ತರ ಕರ್ನಾಟಕದ

ಬಹುತರ ಪ್ರದೇಶಗಳು – ಧರ್ಮದ ನಿಜವಾದ ಅರ್ಥ ಮರೆತು, ಅಮಾನುಷ ಬಲಿ ಕಾಣಿಕೆ, ತಂತ್ರ ಮಂತ್ರಗಳ ಪೊಳ್ಳು ಆಚರಣೆಯಲ್ಲಿ ತೊಡಗಿದ್ದರು.

ರಾಜಕೀಯವಾಗಿ ಭಾರತವೇ ಸ್ವಾತಂತ್ರ್ಯದ ಬೆಳಕು ಕಂಡಿರಲಿಲ್ಲ; ಅಲ್ಲದೆ ಕರ್ನಾಟಕ, ವಿವಿಧ ಪ್ರದೇಶಗಳಲ್ಲಿ ಹಂಚಿಹೋಗಿ ***ಕರ್ನಾಟಕ ಏಕೀಕರಣ***ಕ್ಕಾಗಿ ಕನವರಿಸುತ್ತಿತ್ತು. ಆಡಳಿತದಲ್ಲಿ, ರಾಜ್ಯದ ಅಧಿಕಾರಸೂತ್ರದಲ್ಲಿ ಕನ್ನಡಿಗರಿಗೆ ಯಾವುದೇ ವಿಧವಾದ ಮನ್ನಣೆ ದೊರೆಯುತ್ತಿರಲಿಲ್ಲ. ಒಂದರ್ಥದಲ್ಲಿ ಪುಣೆ, ಉತ್ತರ ಕರ್ನಾಟಕದ ರಾಜಕೀಯ ಚಟುವಟಿಕೆಗಳ, ಭಾಷಿಕ, ಸಾಂಸ್ಕೃತಿಕ ಜಾಗೃತಿಯ ಕೇಂದ್ರವಾಗಿದ್ದು, ಈ ಪ್ರದೇಶದ ಮೇಲುಮಟ್ಟದ ಎಲ್ಲ ಬಗೆಯ ಕಾರ್ಯಗಳೂ ಅಲ್ಲಿಂದಲೇ ನಿಯಂತ್ರಿಸಲ್ಪಡುತ್ತಿದ್ದುವು. ಕನ್ನಡಿಗರ ಕೆಲವು ಭಾಗ ನೈಜಾಮರ ಅಧೀನ; ಕೆಲವು ಭಾಗ ದಕ್ಷಿಣ ಮಹಾರಾಷ್ಟ್ರ ಮತ್ತೆ ಕೆಲವೊಂದು ಪ್ರದೇಶಗಳು ತೆಲಂಗಾಣ, ಆಂಧ್ರ ಮತ್ತು (ತಮಿಳು) ಮದ್ರಾಸ ರಾಜ್ಯದಲ್ಲಿ ಹಂಚಿಹೋದದ್ದರಿಂದ ಕನ್ನಡ ಪ್ರದೇಶಕ್ಕೆ ಒಂದು ರಾಜಕೀಯ ಅಸ್ತಿತ್ವ ಸಾಧ್ಯವಾಗದೆ, ಕನ್ನಡಿಗರು ಒಂದು ಬಗೆಯ ರಾಜಕೀಯ ಶೂನ್ಯಸ್ಥಿತಿಯಲ್ಲಿ ತೊಳಲಾಡುವಂತಾಗಿತ್ತು.

ಭಾರತದಂಥ ದೇಶದಲ್ಲಿ ಧರ್ಮ ಸಾಹಿತ್ಯ ಸಂಸ್ಕೃತಿಗಳು ಪರಸ್ಪರ ಒಡನಾಡಿಗಳಾಗಿ, ಪರಸ್ಪರ ಪೂರಕವಾಗಿ ಬೆಳೆದುಬಂದಿರುವುದು ನಿಜ. ಆದರೆ ೧೯ ನೆಯ ಶತಮಾನದಲ್ಲಿ ಜನಜೀವನ ತಮ್ಮ ನಾಡಿನ ಸಾಹಿತ್ಯಾಧ್ಯಯನದಿಂದ ದೂರವಿದ್ದಿತೆಂದು ಹೇಳಿದರೆ ಅತಿಶಯೋಕ್ತಿಯಲ್ಲ. ೧೨ ನೆಯ ಶತಮಾನದ ಶಿವಶರಣರು, ದಾಸರು ಕನ್ನಡ ಸಾಹಿತ್ಯದಲ್ಲಿ ತಂದ ಅಭೂತಪೂರ್ವ ಬದಲಾವಣೆ, ಹೊಸ ಮಾನವ ಸಮಾಜನಿರ್ಮಾಣದ ಸಂಕಲ್ಪದಿಂದ ಹಮ್ಮಿಕೊಂಡ ಸಾಮಾಜಿಕ ಕ್ರಾಂತಿ, ಸಕಲ ಜೀವಾತ್ಮರಿಗೆ ಲೇಸ ಬಯಸುವ ಉದಾತ್ತ ಧ್ಯೇಯಗಳು ಮರೆಯಾಗಿದ್ದವು. ಸಾಮಾಜಿಕ ಸಮಾನತೆಯ ಹೊಸ ಮಾನವಧರ್ಮದ ಹರಿಕಾರರಾಗಿ ಬಂದ ಶರಣರ ವಚನಸಾಹಿತ್ಯ, ಅದರ ಮೂಲಕ ಶಿವಶರಣರು ಹುಟ್ಟು ಹಾಕಿದ ಸ್ತ್ರೀ ಸ್ವಾತಂತ್ರ್ಯ ಅಥವಾ ಸ್ತ್ರೀ ಸಮಾನತೆಯ ವಿನೂತನ ವಿಚಾರಗಳು ಕೇವಲ ೭೦೦ ವರ್ಷಗಳ ಅವಧಿಯಲ್ಲಿ ಜನತೆಯಿಂದ ಕಣ್ಮರೆಯಾಗಿದ್ದವು. ದೇವವಾಣಿಯ ಸಮಾನ ಗೌರವವನ್ನು ಕನ್ನಡ ಸಾಹಿತ್ಯಕ್ಕೆ ತಮ್ಮ ವಚನ ಕಾವ್ಯರಚನೆಗಳ ಮೂಲಕ ಅಗಣಿತ ಶರಣ ಶರಣೆಯರು, ಜಾತಿ ಜಾತಿಗಳ ಮೇಲುಕೀಳುಗಳನ್ನು ಅಲ್ಲಗಳೆದು ಎಲ್ಲ ವರ್ಗದ ಜನ ತಲೆಯೆತ್ತಿ, ಧಾರ್ಮಿಕ ಆಧ್ಯಾತ್ಮಿಕ ರೂಪ ಸ್ವರೂಪಗಳನ್ನು ಕುರಿತು ಚರ್ಚಿಸಿ, ತಮ್ಮ ತಮ್ಮ ವ್ಯಕ್ತಿತ್ವದಲ್ಲಿ ಬೇರು ಬಿಟ್ಟ ಆತ್ಮನಿಕೃಷ್ಟತಾ ಮನೋಭಾವವನ್ನು ನೀಗಿಕೊಂಡು, ಆತ್ಮಗೌರವ ಕಾಯಕನಿಷ್ಠೆ ಮತ್ತು ಸ್ವಾವಲಂಬನೆಗಳ ಜೀವನಕ್ಕೆ ಅಭಿಮುಖರಾಗಿದ್ದರೂ, ಈ ಕಾಲಾವಧಿಗೆ ಅದೆಲ್ಲ ಮಾಯವಾಗಿ ಮತ್ತೆ ಗಾಢ ಅಂಧಕಾರದಲ್ಲಿ ಮುಳುಗಿ

ಹೋಗುವಂತಿತ್ತು; ಸನಾತನ ಸಂಪ್ರದಾಯ, ಮೂಢನಂಬಿಕೆಗಳ ಸಂಕೋಲೆಯಿಂದ ಜನ ಬಂಧಿತರಾದಂತಿತ್ತು.

೧೨ ನೆಯ ಶತಮಾನದಿಂದ ಸುಮಾರು ೩೦೦ ವರ್ಷ ಅಜ್ಞಾತವಾಸದಲ್ಲಿದ್ದ, ಅಲ್ಲಲ್ಲಿಯ ಮಠಮಾನ್ಯಗಳಲ್ಲಿ ಈ ಸಾಹಿತ್ಯದ ಗುಪ್ತನಿಧಿ, ವಿಜಯನಗರದ ಪ್ರೌಢದೇವರಾಯ, ಜಕ್ಕಣ್ಣ, ಲಕ್ಕಣದಂಡೇಶರ ಜಾಗೃತ ವ್ಯಕ್ತಿತ್ವದಿಂದಾಗಿ, ಅವರ ಸಾಹಿತ್ಯ ಧರ್ಮಗಳ ವಿಶೇಷ ಆಸಕ್ತಿಗಳಿಂದಾಗಿ ಗುರುತಿಸಲ್ಪಟ್ಟು, ತೋಂಟದ ಸಿದ್ಧಲಿಂಗಯತಿ ಮತ್ತು ಆತನ ಅಗಣಿತ ಶಿಷ್ಯರ ಪರಿಶ್ರಮಗಳ ಫಲವಾಗಿ ಮತ್ತೆ ಜನರ ಹೃದಯಕ್ಕೆ ಮುಟ್ಟುವಂತಾಗಿತ್ತು. ಕಾಲಾನಂತರ ಈ ಅದ್ಭುತ ಕ್ರಾಂತಿಯ ಜನ ಜಾಗೃತಿಯ ಒಂದು ಮಹತ್ವದ ಘಟ್ಟ ಈ ನಾಡಿನಲ್ಲಿ ನಡೆದೇ ಇಲ್ಲವೇನೋ ಎನ್ನುವ ರೀತಿಯಲ್ಲಿ ಎಲ್ಲ ಸ್ತಬ್ಧವಾದಂತಿತ್ತು. ವಚನ ಸಾಹಿತ್ಯ, ಹರಿಹರ ರಾಘವಾಂಕಾದಿ ಕವಿಗಳ ಕಾವ್ಯಗಳ ಅಕ್ಷಯನಿಧಿಯನ್ನು ಮತ್ತೆ ಜನಕ್ಕೆ ತೆರೆದು ತೋರಿಸುವ ಅದರ ಧಾರ್ಮಿಕ ಆಧ್ಯಾತ್ಮಿಕ ಮತ್ತು ಸಾಹಿತ್ಯಿಕ ಹಿರಿಮೆ ಭವ್ಯತೆಗಳನ್ನು ವಿವರಿಸಿ ತೋರಿಸುವ, ಸಂಶೋಧಿಸಿ, ಸೋಸಿ ಆ ಸ್ವರ್ಣಯುಗದ ಸಂಸ್ಕೃತಿ ಪ್ರಕಾಶವನ್ನು ಸಮಾಜದಲ್ಲಿ ಹರಡುವ ಕಾರ್ಯಕ್ಕಾಗಿ ಟೊಂಕಕಟ್ಟಿ ನಿಲ್ಲುವ, ತ್ಯಾಗ ಶ್ರದ್ಧೆಗಳಿಂದ ಅಹರ್ನಿಶಿ ದುಡಿಮೆ ಕೈಕೊಂಡು ಶರಣರು ಬೋಧಿಸಿದ್ದ ಕಾಯಕ ತತ್ವದ ಔನ್ನತ್ಯವನ್ನು ತನ್ನ ಸ್ವಂತ ಆಚರಣೆಯಿಂದ ಸತ್ಯ ಮಾಡಿ ತೋರಿಸುವ, ಒಬ್ಬ ಅಪೂರ್ವ ವ್ಯಕ್ತಿಗಾಗಿ ಕಾಲ ಮತ್ತೆ ನಿರೀಕ್ಷೆಯಲ್ಲಿದ್ದಂತಿತ್ತು.

ನಾಡುನುಡಿಗಳ ಪುಣ್ಯದ ಫಲವಾಗಿ ಅಂಥ ಕಾರಣಪುರುಷರು, ಆಗಾಗ ಕರ್ನಾಟಕದ ವಿವಿಧ ಭಾಗಗಳಲ್ಲಿ ಹುಟ್ಟಿಬಂದಿದ್ದಾರೆ. ಕಾಲಕಾಲಕ್ಕೆ ಜನತೆಗೆ, ತಮ್ಮ ಸಾಹಿತ್ಯ ಸಂಸ್ಕೃತಿಗಳ ದರ್ಶನ ಮಾಡಿಸುವ ಮಹತ್ತರವಾದ ಕಾರ್ಯಕ್ಕೆ, ತಮ್ಮ ಜೀವನವನ್ನೇ ಮುಡಿಪಾಗಿಟ್ಟು ತಮ್ಮ ಸರ್ವಶಕ್ತಿಯನ್ನು ಕೆಲವರು ಧಾರೆಯೆರೆಯುತ್ತ ಬಂದಿದ್ದಾರೆ: ಮತ್ತು ಇಂಥ ವ್ಯಕ್ತಿಗಳು ಜನಸಾಮಾನ್ಯರ ಮಧ್ಯದಲ್ಲಿಯೇ ಹುಟ್ಟಿ ಬೆಳೆಯುತ್ತಾರೆ. ಬಳ್ಳಿಯೊಂದರ ಮೊಗ್ಗು ಅರಳಿ ಹೂವಾಗಿ ಪರಿಮಳ ಬೀರುವಂತೆ, ಕಾಯಾಗಿ ಹಣ್ಣಾಗಿ ಎಲ್ಲ ಸವಿಸುಖಗಳನ್ನು ಜನಹಿತಕ್ಕಾಗಿ ಹಂಚಿ, ಬೀಜವಾಗಿ ಸದ್ದುಗದ್ದಲವಿಲ್ಲದೆ ನೆಲದ ಬದುಕಿನಲ್ಲಿ ಚಿಗುರುತ್ತಾರೆ; ಮತ್ತೆ ಬೆಳಕಾಗಿ ಬಾನಲ್ಲಿ ಮಿಂಚುತ್ತಾರೆ. ತಮ್ಮ ಪವಾಡಸದೃಶ ಕಾರ್ಯ, ತ್ಯಾಗ ಸೇವೆಗಳ ಮೂಲಕ ನಾಡಿನ ಚರಿತ್ರೆಯಲ್ಲಿ ತಮ್ಮದೇ ಆದ ಸ್ಥಾನ ಹೊಂದಿ ಚರಿತ್ರೆಯ ಒಂದು ಭಾಗವೇ ಆಗುತ್ತಾರೆ. ಕನ್ನಡನಾಡಿನ ಅಂಥ ಕೆಲವೇ ಕಾರಣಪುರುಷರಲ್ಲಿ ಫ.ಗು.ಹಳಕಟ್ಟಿ ಒಬ್ಬರು.

ಫ.ಗು.ಹಳಕಟ್ಟಿ ಮಾಡಿದ ಸಂಶೋಧನೆ, ಸಂಪಾದನೆ ಮತ್ತು ಸಾಹಿತ್ಯಿಕ ಕಾರ್ಯಕ್ಕಾಗಿ ಜನ ಅವರನ್ನು ***ವಚನ ಪಿತಾಮಹ*** ಎಂದು ಕರೆದು ಗೌರವಿಸಿದರು. ಅವರು ಕೈಗೊಂಡ ಸತ್ಯನಿಷ್ಠುರ, ನ್ಯಾಯಪಕ್ಷಪಾತದೃಷ್ಟಿ ಧೋರಣೆಯ ವಕೀಲಿ

ವೃತ್ತಿಗಾಗಿ, ಅನುಪಮ ನ್ಯಾಯವಾದಿ ಎಂದು ಗುರುತಿಸಿದರು. ರೈತ, ಕೂಲಿ, ಕಾರ್ಮಿಕರಿಗಾಗಿ ಬ್ಯಾಂಕ್ ಸ್ಥಾಪಿಸಿ, ಬೆವರು ಸುರಿಸುವ ಜನರ ಆದರಕ್ಕೆ ಪಾತ್ರರಾದರು. ಸಹಕಾರ ಸಂಘಗಳನ್ನು ಕಟ್ಟಿ ಆರ್ಥಿಕ ಮುಗ್ಗಟ್ಟಿನಲ್ಲಿಯೇ ತೊಳಲಾಡುತ್ತಿದ್ದ ಜನರಿಗೆ ಹೊಸ ಆಸೆಗಳ ದಾರಿ ತೋರಿದರು. ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ, ಬೆಳೆಸಿ ಶಿಕ್ಷಣ ಪ್ರಸಾರದ ಹೊಣೆ ಹೊತ್ತರು. ಸಮೂಹ ಸಂವಹನ ಮಾಧ್ಯಮಗಳ ಮಹತ್ವವನ್ನು ಅರಿತು, ಹಿತಚಿಂತಕ ಮುದ್ರಣಾಲಯ ಸ್ಥಾಪಿಸಿ, ತಾವೇ ಸಂಪಾದಕರಾಗಿ ಮಾಸಿಕ ಮತ್ತು ವಾರಪತ್ರಿಕೆಗಳಿಗೆ ಹುಟ್ಟು ಹಾಕಿ, ಜನತೆಗೆ ವಿವಿಧ ಬಗೆಯ ಸುದ್ದಿ, ಮಾಹಿತಿಗಳನ್ನು ಒದಗಿಸುತ್ತ ಅವರಲ್ಲಿ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಹಿತ್ಯಿಕ ಜಾಗೃತಿಯ ಮಣಿಹ ಕೈಗೊಂಡರು. ವ್ಯಕ್ತಿಗತ ಜೀವನದಲ್ಲಿ ಒದಗಿಬಂದ ಅನೇಕ ಬಗೆಯ ವಿಪತ್ತು ಸಂಕಷ್ಟಗಳಿಂದ ವಿಚಲಿತರಾಗದೆ, ಬಂದುದೆಲ್ಲವನ್ನೂ ಸ್ವೀಕರಿಸುತ್ತ, ಸಮಾಧಾನಚಿತ್ತರಾಗಿದ್ದು, ಮಹತ್ತರ ಕಾರ್ಯಗಳನ್ನು ಸಾಧಿಸಿ, ಲೌಕಿಕ ಬವಣೆಗಳನ್ನು ಮೆಟ್ಟಿ, ಅಲೌಕಿಕ ಸಾಧನೆ ಮಾಡಿದರು. ಒಟ್ಟಾರೆ ಫ.ಗು. ಹಳಕಟ್ಟಿಯವರ ಜೀವನ, ಆದರ್ಶಗಳ ಅನುಸಂಧಾನ, ಆವಿಷ್ಕಾರಗಳಿಗೆ ಒಂದು ಅಪೂರ್ವ ಮಾದರಿ ಎನ್ನುವುದಕ್ಕೆ ಅವರ ಸಾರ್ಥಕ ಜೀವನ ಮತ್ತು ಕಾರ್ಯವಿಧಾನಗಳೇ ಸಾಕ್ಷಿ.

# ೨. ಜೀವನ

## ಮನೆತನದ ಸಂಸ್ಕಾರ: ಪರಿಸರ ಪ್ರಭಾವ

ಇಂದು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಖ್ಯಾತವಾಗಿರುವ ಧಾರವಾಡದ ನೇಕಾರ ಹಳಕಟ್ಟಿ ಕುಟುಂಬದ ಗುರುಬಸಪ್ಪ ದಾನಮ್ಮ ದಂಪತಿಗಳ ಪುತ್ರ ಫಕೀರಪ್ಪ ಹಳಕಟ್ಟಿ ಜನಿಸಿದ್ದು, ೧೮೮೦ರ ಜುಲೈ ಎರಡನೆಯ ದಿನಾಂಕ. ಇವರ ತಂದೆ ಗುರುಬಸಪ್ಪ ವೃತ್ತಿಯಿಂದ ಶಿಕ್ಷಕರು; ಪ್ರವೃತ್ತಿಯಿಂದ ಸಾಹಿತಿ. ೧೮೬೫ ರಿಂದ ಸುಮಾರು ೨೫ – ೩೦ ವರ್ಷಗಳ ದೀರ್ಘಾವಧಿಯ ಕಾಲ ಅವರು ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ, ಅಣ್ಣಿಗೇರಿ, ಧಾರವಾಡ ಟ್ರೇನಿಂಗ್ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿದ ಬಳಿಕ, ವಿದ್ಯಾ ಇಲಾಖೆಯಲ್ಲಿ ಸೇರಿಕೊಂಡು, ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದರು. ಶಿಕ್ಷಣ ಇಲಾಖೆಯ ಸೇವೆಗೆ ಮಾತ್ರ ಇವರ ಕಾರ್ಯ ಸೀಮಿತವಾಗಿರಲಿಲ್ಲ; ಜೊತೆಗೆ ಸಾಹಿತ್ಯ ಸೃಷ್ಟಿಯಲ್ಲಿಯೂ ತೊಡಗಿತ್ತು. ಕನ್ನಡ ಭಾಷೆ – ಸಾಹಿತ್ಯ ಬೋಧನೆಯ ಅನುಭವ ಅವರ ವಿವಿಧ ಪುಸ್ತಿಕೆಗಳ ರಚನೆಗೆ ಪ್ರೇರಕವಾಗಿರಬೇಕು. ಶ್ರೀ ಗುರುಬಸಪ್ಪ ರಚಿಸಿದ ಕೃತಿಗಳಲ್ಲಿ ಕೆಲವು ಇಂಗ್ಲಂಡ್ ದೇಶದ ಇತಿಹಾಸ, ಡ್ಯುಕ್ ಆಫ್ ವೆಲಿಂಗ್ಟನ್ ದೊರೆಯ ಚರಿತ್ರೆ, ನೆಪೋಲಿಯನ್ ಬೊನಾಪಾರ್ಟ್ ಚರಿತ್ರೆ, ಫ್ರಾನ್ಸ್ ದೇಶದ ರಾಜ್ಯಕ್ರಾಂತಿ, ಸಿಕಂದರ ಬಾದಶಹನ ಚರಿತ್ರೆ, ಏಕನಾಥ ಸಾಧುಗಳ ಚರಿತ್ರೆ, ನಿಜವಾದ ವೀರ ಅಥವಾ ಜಗಮಲ್ಲ, ಭೂಮಿತಿಯ ಪುಸ್ತಕಗಳು ಇತ್ಯಾದಿ.

ಹಳಕಟ್ಟಿ ಗುರುಬಸಪ್ಪನವರು, ಅಂದಿನ ಧಾರವಾಡದ ವಿವಿಧ ಸಾಮಾಜಿಕ ಸಾಂಸ್ಕೃತಿಕ ಜೀವನದ ಜೊತೆ ನಿಕಟಸಂಪರ್ಕ ಇಟ್ಟುಕೊಂಡಿದ್ದರು. ಅತ್ಯಂತ ಪ್ರಾಚೀನ ಸಾಹಿತ್ಯಿಕ ಸಂಸ್ಥೆಯಾದ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ, ಸಂಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿ ಮಹತ್ವದ ಪಾತ್ರ ವಹಿಸಿದರು. ೧೯೧೪ ರಿಂದ ೧೯೨೦ರ ವರೆಗೆ ಸರಕಾರೀ ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿ ಕಾರ್ಯ ಮಾಡುತ್ತ, ಅಂದಿನ ನಿಯತಕಾಲಿಕ ಪತ್ರಿಕೆ ಧಾರವಾಡ ವಿದ್ಯಾವರ್ಧಕ ಸಂಘದ 'ವಾಗ್ಭೂಷಣ', ಮೈಸೂರಿನ 'ಮೈಸೂರ ಸ್ಟಾರ್' ಮತ್ತು ಇತರೆಡೆಯ 'ಕರ್ನಾಟಕ ವೃತ್ತ',

'ಲೋಕಶಿಕ್ಷಣ' ಮುಂತಾದುವುಗಳಲ್ಲಿ ಅನೇಕ ವಿಚಾರಪೂರಿತ ಲೇಖನಗಳನ್ನು ಪ್ರಕಟಿಸಿ, ಶಿಕ್ಷಣ, ಸಮಾಜ ಸಾಹಿತ್ಯಗಳ ಬಗೆಗೆ ಜನ ಗಂಭೀರವಾಗಿ ಆಲೋಚಿಸುವ ಅಗತ್ಯತೆಯನ್ನು ಎತ್ತಿ ತೋರಿಸಿದರು. ಇದು, ಫಕೀರಪ್ಪ ತಂದೆಯಿಂದ ಸಹಜವಾಗಿ ಪಡೆದಿರುವ ಸಂಸ್ಕಾರದ ಹಿನ್ನೆಲೆಯಾದರೆ: ತಾಯಿ ದಾನಮ್ಮ ಫಕೀರಪ್ಪನನ್ನು ಹೆತ್ತ ಮೂರೇ ಮೂರು ವರ್ಷಗಳಲ್ಲಿ ದಿ. ೪.೭.೧೮೮೩ ರಂದು ಸ್ವರ್ಗಸ್ಥಳಾದಳು. ಈ ಮಗುವನ್ನು ತಾಯಿಯಂತೆ ಸಾಕಿ ಬೆಳೆಸಿ, ಪ್ರೀತಿ ವಾತ್ಸಲ್ಯಗಳ ಉಣಿಸನ್ನಿತ್ತು ಸಲಹಿದವರು, ಅಜ್ಜಿ ಬಸಮ್ಮ. ಅಜ್ಜಿಯ ಮಡಿಲಲ್ಲಿಯೇ ಹೆತ್ತಮ್ಮನ ಕರುಣೆ ಫಕೀರಪ್ಪನ ವಿಕಾಸಕ್ಕೆ ಒತ್ತಾಸೆಯಾಯಿತು. ಫಕೀರಪ್ಪನ ತಂದೆ ಗುರುಬಸಪ್ಪನಿಗೆ ತನ್ನ ಮಗ ಎಲ್ಲ ರೀತಿಯಿಂದ ಸಮರ್ಥ ವ್ಯಕ್ತಿಯಾಗಿ, ಆದರ್ಶ ನಾಗರಿಕನಾಗಿ ರೂಪುಗೊಳ್ಳಬೇಕು; ಸಾಹಿತ್ಯ ಸಂಸ್ಕೃತಿಗಳನ್ನು ಆಳವಾಗಿ ಅರ್ಥ ಮಾಡಿಕೊಳ್ಳಬೇಕು, ಸಾಮಾಜಿಕ ಧಾರ್ಮಿಕ ಸಂಗತಿಗಳನ್ನು ಅರಿತು ಬಾಳುವಂತಾಗಬೇಕು ಎನ್ನುವ ಹಂಬಲ. ಈ ಕಾರಣದಿಂದಾಗಿ ಫಕೀರಪ್ಪನ ಶಿಕ್ಷಣದ ವಿಷಯದಲ್ಲಿ ಅವರು ಹೆಚ್ಚು ಹೆಚ್ಚು ಮುತುವರ್ಜಿ ವಹಿಸಿದರು. ಫಕೀರಪ್ಪ ಪ್ರಾಥಮಿಕ ಶಾಲೆ ಸೇರಿದ ಬಳಿಕ, ಆತನಿಗೆ ತಂದೆಯಿಂದ ಅಗತ್ಯವಾದ ಶಿಸ್ತು, ನಿಯಮಿತತನಗಳ ತರಬೇತಿ ದೊರಕಿತ್ತು. ತಂದೆಯ ಜೊತೆ ಸೂರ್ಯೋದಯಪೂರ್ವದಲ್ಲಿ ಏಳುವುದು, ಬೆಳಗಿನ ವಾಯುವಿಹಾರ, ಯೋಗಾಭ್ಯಾಸ, ಸತತ ಪರಿಶ್ರಮದಿಂದ ಓದು ಬರೆಹ ಪಾಠಗಳ ನಿಯತ ಅಭ್ಯಾಸ ಮತ್ತು ಇತರ ವಿಷಯಗಳ ಗ್ರಹಿಕೆ, ಹೀಗೆ ಅರ್ಥಪೂರ್ಣವಾದ ರೀತಿಯಲ್ಲಿ ಫಕೀರಪ್ಪನ ದಿನಚರಿ ರೂಪುಗೊಂಡಿತು ಮತ್ತು ಇದರಿಂದ ಮಗನ ಶಾರೀರಿಕ ಮಾನಸಿಕ ವಿಕಾಸಕ್ಕೆ ಚ್ಯುತಿ ಬಾರದಂತೆ ಕಣ್ಣಲ್ಲಿ ಕಣ್ಣಿಟ್ಟು ಆತನನ್ನು ಗಮನಿಸುತ್ತಿದ್ದ ಗುರುಬಸಪ್ಪ, ಮಗ ಪ್ರಾಥಮಿಕ ಶಾಲೆಯ ಅಭ್ಯಾಸ ಪೂರೈಸಿ, ಧಾರವಾಡದ ಸರಕಾರೀ ಮಾಧ್ಯಮಿಕ ಶಾಲೆಯನ್ನು ಸೇರಿದಾಗ ತುಂಬ ಉತ್ಸಾಹಿತರಾದರು. ಮಾಧ್ಯಮಿಕ ಶಾಲೆಯಲ್ಲಿ ಅನೇಕ ವಿಷಯಗಳ ಜೊತೆಗೆ ಭಾಷೆ, ಸಾಹಿತ್ಯ, ಧರ್ಮ, ಸಮಾಜ ಕುರಿತ ಸಂಗತಿಗಳನ್ನೂ ಶಿಕ್ಷಕರು ಬೋಧಿಸುತ್ತಿದ್ದರು. ಮಾನಸಿಕವಾಗಿ ಆಗಲೇ ತನ್ನಲ್ಲಿ ವಿವೇಕ ಎಚ್ಚತ್ತಿದ್ದ ವಿದ್ಯಾರ್ಥಿ ಫಕೀರಪ್ಪನಿಗೆ, ಅಂದಿನ ಒಬ್ಬಿಬ್ಬ ಶಿಕ್ಷಕರ ಪಾಠಬೋಧನಾ ಕ್ರಮದಲ್ಲಿ ದೋಷ, ಮತೀಯ ದೃಷ್ಟಿ ಎದ್ದು ಕಾಣುವಂತಿತ್ತು. ಒಬ್ಬ ಶಿಕ್ಷಕರು ಪಾಠ ಬೋಧೆಯ ಮಧ್ಯದಲ್ಲಿಯೇ ಕೆಲವೊಮ್ಮೆ ಅನ್ಯಮತ ಧರ್ಮ ಸಾಹಿತ್ಯಗಳ ಹಿರಿಮೆಯನ್ನು ವಿವರಿಸುತ್ತ, ವೀರಶೈವ ಧರ್ಮ ಸಾಹಿತ್ಯಗಳ ಸರಿಯಾದ ಚಿತ್ರ ಕೊಡುವಲ್ಲಿ ವಿಫಲರಾಗುತ್ತಿದ್ದರು. ಅಷ್ಟೇ ಅಲ್ಲ, ಆಗಾಗ ಅದರಲ್ಲಿ ಅಂಥ ಗಮನಾರ್ಹ ತತ್ವ, ಗಂಭೀರ ಸಾಹಿತ್ಯಸೃಷ್ಟಿ ಕಂಡುಬರುವುದಿಲ್ಲ ಎಂದು ಮುಂತಾಗಿ ಅವಹೇಳನಕಾರಿಯಾಗಿಯೂ ಮಾತಾಡುತ್ತಿದ್ದರು. ಮನೆಯಲ್ಲಿ ತಂದೆ ಗುರುಬಸಪ್ಪನಿಂದ ಆಗೀಗ ವೀರಶೈವ ಸಾಹಿತ್ಯ ಕೃತಿಗಳ ವಾಚನ, ಅವರ ಮೆಚ್ಚುಗೆಯ ಮಾತುಗಳಿಂದ ಪ್ರಭಾವಿತನಾಗಿದ್ದ ಫಕೀರಪ್ಪನ ಮನಸ್ಸಿಗೆ, ಇದರಿಂದ ಒಂದು ರೀತಿಯ ಕಳವಳ ಉಂಟಾದರೂ, ಮುಂದೆ ತಾನು ಈ ಸಾಹಿತ್ಯದ ಆಳವಾದ ಅಧ್ಯಯನ, ಸಂಶೋಧನೆ ಮಾಡಬೇಕು; ಧರ್ಮ ಮತ್ತು

ಸಾಹಿತ್ಯಗಳಿಗಿರುವ ಗಾಢ ಸಂಬಂಧಗಳನ್ನು ಅರಿತುಕೊಳ್ಳಬೇಕು ಎನ್ನುವ ಸಂಕಲ್ಪ ಮೂಡಿ, ಮತ್ತೆ ಮುಂದಿನ ಅಭ್ಯಾಸದ ಕಡೆಗೆ ಲಕ್ಷ್ಯ ಕೊಡುತ್ತಿದ್ದ. ನಾಡುನುಡಿಗಳ ಮೇಲಿನ ವಿಶೇಷಾಭಿಮಾನ, ಸಾಮಾಜಿಕ ಧಾರ್ಮಿಕ ಶ್ರದ್ಧೆ, ಶಿಕ್ಷಣಾಭಿಮಾನ ಮುಂತಾದುವು ತಂದೆ ಗುರುಬಸಪ್ಪನಿಂದ ಫಕೀರಪ್ಪನಿಗೆ ಬಳುವಳಿಯಾಗಿ ಬಂದ ವಿಶಿಷ್ಟ ಗುಣಗಳು. ಒಬ್ಬ ಆದರ್ಶ ತಂದೆಯ ಶಿಸ್ತು ಸಂಯಮಗಳ ವೈಚಾರಿಕ ಆಸರೆಯಲ್ಲಿ ಬೆಳೆದ ಫಕೀರಪ್ಪನಿಗೆ, ದಿನಗಳೆದಂತೆ ಅಭ್ಯಾಸದ ಕಡೆಗೆ ಆಸಕ್ತಿ ಅಧಿಕವಾಗುತ್ತ ನಡೆಯಿತು. ಶಾಲೆಯಲ್ಲಿ ಗುರುಗಳು ಹೇಳುತ್ತಿದ್ದ ಮಹತ್ವದ್ದೆಂದು ತೋರಿದ ಚರಿತ್ರೆ ಧರ್ಮ ಸಾಹಿತ್ಯ ಸಮಾಜಕ್ಕೆ ಸಂಬಂಧಿಸಿದ ಬೋಧೆ, ವ್ಯಾಖ್ಯೆ ಟೀಕೆ ನಿರೂಪಣೆಗಳನ್ನು ತುಂಬ ಚಿತ್ತವಿಟ್ಟು ಕೇಳಿ, ಗ್ರಹಿಸಿ, ಟಿಪ್ಪಣಿ ಮಾಡಿಕೊಳ್ಳುತ್ತಿದ್ದ. ೧೮೯೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆ ಉತ್ತಮ ತರಗತಿಯಲ್ಲಿ ಉತ್ತೀರ್ಣನಾದ ಫಕೀರಪ್ಪ, ತನ್ನ ಉಚ್ಚ ಶಿಕ್ಷಣಕ್ಕಾಗಿ ಮುಂಬೈಯ ಸೇಂಟ್ ಝೇವಿಯರ್ ಕಾಲೇಜು ಸೇರಿದ. ಮುಂಬೈ ನಗರದ ಬಹುಭಾಷಿಕ, ವಾಣಿಜ್ಯ ವಿವಿಧ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳಿಂದ ಕೂಡಿದ ಸಂಕೀರ್ಣ ಜೀವನ, ಫಕೀರಪ್ಪನ ವ್ಯಕ್ತಿತ್ವಕ್ಕೆ ಹೊಸ ರೂಪ, ಹೊಸ ಜಾಗೃತಿ ನೀಡಿತು. ಧಾರವಾಡದಿಂದಲೇ ಬಂದ ತನ್ನ ಸಮವಯಸ್ಕ ಕನ್ನಡ ಸಂಸ್ಕೃತಿ, ನಾಡುನುಡಿಗಳ ಕಟ್ಟಾಳು– ಮುಂದೆ 'ಕನ್ನಡ ಕುಲಪುರೋಹಿತ' ಎಂದು ಖ್ಯಾತಿ ಪಡೆದ, ಆಲೂರು ವೆಂಕಟರಾಯ, ಫಕೀರಪ್ಪನ ಸಹಪಾಠಿಯಾಗಿ ಬಂದುದು ಒಂದು ಆಕಸ್ಮಿಕ ಯೋಗಾಯೋಗ.

ಸೇಂಟ್ ಝೇವಿಯರ್ ಕಾಲೇಜಿನಲ್ಲಿಯ ಅಧ್ಯಾಪಕರ ಬೋಧನಾಕ್ರಮ ಉನ್ನತ ಮಟ್ಟದ್ದಾಗಿದ್ದು ಫಕೀರಪ್ಪನಿಗೆ ಅವರ ಕ್ರಮಬದ್ಧತೆ, ಗಂಭೀರ ನಡವಳಿಕೆ, ಸಾಹಿತ್ಯ ಸಂಸ್ಕೃತಿಗಳಲ್ಲಿ ಅವರು ವಹಿಸುತ್ತಿದ್ದ ಆಸಕ್ತಿ, ನೀಡುತ್ತಿದ್ದ ಪ್ರೋತ್ಸಾಹಗಳು ತುಂಬ ಮೆಚ್ಚುಗೆಯಾದುವು. ಫಕೀರಪ್ಪ ರಸಾಯನಶಾಸ್ತ್ರ ಭೌತಶಾಸ್ತ್ರಗಳನ್ನು ಪದವಿ ತರಗತಿಗಳಲ್ಲಿ ಪ್ರಧಾನ ವಿಷಯವಾಗಿ ಅಭ್ಯಾಸ ಮಾಡುತ್ತ, ಮುಂಬೈ ನಗರದ ಮರಾಠಿ, ಗುಜರಾತಿ ಭಾಷಾ ಬಾಂಧವರು ಆಗಾಗ ನಡೆಸುತ್ತಿದ್ದ ಅನೇಕ ಬಗೆಯ ಸಂಸ್ಕೃತಿ ಸಾಹಿತ್ಯ ಕಲಾತ್ಮಕ ಕಾರ್ಯಗಳಲ್ಲಿಯೂ ಭಾಗವಹಿಸುತ್ತಿದ್ದ. ಕನ್ನಡ ಭಾಷೆಯ ಪ್ರಾಚೀನತೆ, ಕರ್ನಾಟಕ ರಾಜಮನೆತನಗಳು, ಕನ್ನಡ ಸಾಹಿತ್ಯದ ಹಿರಿಮೆ ಮುಂತಾದ ವಿಷಯಗಳ ಅಧ್ಯಯನವನ್ನು ಮುಂದುವರೆಸುತ್ತ, ತಮ್ಮ ಜೊತೆಗಾರ ಆಲೂರು ವೆಂಕಟರಾಯರನ್ನು ಕೂಡಿಕೊಂಡು, ಕನ್ನಡ ಜನರಿಗೆ ಒದಗಿರುವ ದುಸ್ಥಿತಿ, ಇತ್ಯಾದಿ ಕುರಿತು ಆಗಾಗ ಗಂಭೀರ ಚರ್ಚೆ ನಡೆಸುತ್ತಿದ್ದ. ಕನ್ನಡ ಸಾಹಿತ್ಯ ಸಂಸ್ಕೃತಿಗಳು ತಮ್ಮದೇ ಆದ ಸುದೀರ್ಘ ಭವ್ಯ ಪರಂಪರೆಯನ್ನು ಹೊಂದಿದ್ದರೂ, ಕನ್ನಡಿಗರಲ್ಲಿದ್ದ ಅಭಿಮಾನಶೂನ್ಯತೆ, ಅನೈಕ್ಯತೆ, ಮರಹು ಆಲಸ್ಯಗಳು ಫಕೀರಪ್ಪನನ್ನು ದಂಗು ಬಡಿಸುತ್ತಿದ್ದವು. ಕನ್ನಡಕ್ಕೆ ಹೋಲಿಸಿದಾಗ, ಕೇವಲ ಇತ್ತೀಚೆಗೆ ತಮ್ಮ ನೆಲೆಗಳನ್ನು ಗಟ್ಟಿಗೊಳಿಸಿಕೊಂಡ ಮರಾಠಿ, ಗುಜರಾತಿ ಮುಂತಾದ ಜನರಲ್ಲಿರುವ ಶಿಸ್ತು, ಸಂಘಟನೆ, ಅಧ್ಯಯನ ಸಂಶೋಧನೆಗಳ ಆಸಕ್ತಿಗಳನ್ನು ಕುರಿತು ಕಾಲೇಜಿನ

ಅಭ್ಯಾಸದಿಂದ ಬಿಡುವು ದೊರಕಿದಾಗಲೆಲ್ಲ, ಆಲೂರು ವೆಂಕಟರಾಯ ಮತ್ತು ಇತರ ಕನ್ನಡ ಸ್ನೇಹಿತರ ಜೊತೆ ಚರ್ಚಿಸಿದ್ದೇ ಚರ್ಚಿಸಿದ್ದು. ಕನ್ನಡೇತರ ಜನರಲ್ಲಿದ್ದ ತಮ್ಮ ತಮ್ಮ ಸಾಹಿತ್ಯ ಸಂಸ್ಕೃತಿಗಳ ಸ್ವಾಭಿಮಾನ ಶ್ರದ್ಧೆಗಳನ್ನು ಮನವಾರೆ ಮೆಚ್ಚಿಕೊಂಡ ಫಕೀರಪ್ಪನ ಮನಸ್ಸಿನಲ್ಲಿ, ಮುಂದೆ ತಾನು ಸಾರ್ಥಕವಾದ ರೀತಿಯಲ್ಲಿ ಕರ್ನಾಟಕ ಸಾಹಿತ್ಯ ಸಂಸ್ಕೃತಿ ಸಂವರ್ಧನೆಗಾಗಿ ದುಡಿಯುವ ಸಂಕಲ್ಪ ಮೂಡಿ, ಆತನ ಹೃದಯ ಸದಾ ಅದೇ ದಿಸೆಯತ್ತ ತುಡಿಯುತ್ತಿತ್ತು; ವಿವಿಧ ಬಗೆಯ ಸೇವೆ ಸಂಘಟನೆ ಸಂಶೋಧನೆಗಳ ಕಾರ್ಯವಿಧಾನಗಳನ್ನು ರೂಪಿಸಲು ಹಂಬಲಿಸುತ್ತಿತ್ತು. ಈ ಕಾರಣಗಳಿಂದ ಪದವಿ ತರಗತಿಗಳಿಗಾಗಿ ಅಭ್ಯಾಸ ಮಾಡುತ್ತಿದ್ದ ಫಕೀರಪ್ಪನನ್ನು, ಮುಂಬೈ ನಗರದ ಥಳುಕುಬಳುಕು, ವರ್ಣರಂಜಿತ ಮನರಂಜನೆ, ಪಾಶ್ಚಾತ್ಯ ಜೀವನ ಶೈಲಿಯ ಆಕರ್ಷಣೆ ವಿಲಾಸಗಳು ತಮ್ಮತ್ತ ಸೆಳೆದುಕೊಳ್ಳುವುದು ಸಾಧ್ಯವಾಗಲಿಲ್ಲ. ಆಗಾಗ ಮುಂಬೈಯಿಂದ ಧಾರವಾಡಕ್ಕೆ ಬಂದು ಹೋಗುತ್ತಿದ್ದ ಫಕೀರಪ್ಪ, ತನ್ನ ತಂದೆ ಗುರುಬಸಪ್ಪನವರ ಜೊತೆ ಕನ್ನಡ ಕಾವ್ಯಗಳ ಸತ್ವ ಸೊಬಗು, ಕವಿಗಳ ಕಲ್ಪನಾವಿಲಾಸ, ಕನ್ನಡನುಡಿಯ ಶಕ್ತಿ ವಿವಿಧ ಶೈಲಿಯ ಮನೋಹರತೆಗಳನ್ನು ಕುರಿತು ಗಂಭೀರ ಚರ್ಚೆ ನಡೆಸುತ್ತ, ತಾನು ಅಧ್ಯಯನಕ್ಕೆ ಆಯ್ದುಕೊಂಡ ಕಾವ್ಯಕೃತಿಗಳ ವೈಶಿಷ್ಟ್ಯಗಳನ್ನು, ಅವುಗಳಲ್ಲಿ ಹುದುಗಿರುವ ಧಾರ್ಮಿಕ ಸ್ವರೂಪವನ್ನು, ಸಾಮಾಜಿಕ ಸ್ಥಿತಿಗಳನ್ನು ಟಿಪ್ಪಣಿ ರೂಪದಲ್ಲಿ ಬರೆದಿಟ್ಟುಕೊಳ್ಳುತ್ತಿದ್ದ.

## ಫಕೀರಪ್ಪ ಹಳಕಟ್ಟಿ ಅವರ ರೂವಾರಿ:

ಈ ನಡುವೆ ಫಕೀರಪ್ಪನ ಮಾವ ಚಿಕ್ಕೋಡಿಯ ತಮ್ಮಣ್ಣಪ್ಪನವರ ಹಿತವಚನ, ಕನ್ನಡಾಭಿಮಾನ, ರಾಷ್ಟ್ರಸೇವೆ ಸಮಾಜದ ಹಿತಚಿಂತನೆ ಕುರಿತ ಪತ್ರಗಳು ಆತನಿಗೆ ಸದಾ ಹೊಸ ಸ್ಫೂರ್ತಿಯನ್ನು ನೀಡುತ್ತಿದ್ದುವು. ಮುಂಬೈಗೆ ಮರಳಿದ ನಂತರ ಅಲ್ಲಿಗೇ ನೇರವಾಗಿ ತಮ್ಮಣ್ಣಪ್ಪನವರು ಫಕೀರಪ್ಪನಿಗೆ ಬರೆಯುತ್ತಿದ್ದ ಆರ್ಥಿಕ, ಕೌಟುಂಬಿಕ ವಿಷಯದ ಪತ್ರಗಳಲ್ಲಿ ವ್ಯಕ್ತಿ ತನ್ನ ಎಲ್ಲ ಬಗೆಯ ಕಷ್ಟಕಾರ್ಪಣ್ಯಗಳನ್ನು ಮೆಟ್ಟಿ, ಉದಾತ್ತ ಧ್ಯೇಯ ರೂಪಿಸಿಕೊಂಡು, ನಿರಂತರ ಅಧ್ಯಯನಶೀಲನಾಗಿ ಸಮಾಜ ಸಾಹಿತ್ಯ ಸೇವೆಗಳಿಗಾಗಿ ಟೊಂಕಕಟ್ಟಿ ನಿಲ್ಲಬೇಕು ಇತ್ಯಾದಿ ಸಂದೇಶರೂಪದ ವಿಚಾರಗಳೇ ತುಂಬಿರುತ್ತಿದ್ದವು.

ಮುಂಬಯಿ ವಿದ್ಯಾರ್ಥಿ ಜೀವನ, ಫಕೀರಪ್ಪನ ಭವಿಷ್ಯ ಜೀವನಕ್ಕೆ ಅಗತ್ಯವಾದ ಜ್ಞಾನಪಿಪಾಸೆಯನ್ನು ಒದಗಿಸುವಲ್ಲಿ, ವ್ಯಕ್ತಿತ್ವದ ಧಾತುನಿರ್ಮಾಣದಲ್ಲಿ ಗಣನೀಯ ಪಾತ್ರ ವಹಿಸಿತು. ೧೯೦೧–೧೯೦೨ ರ ಕಾಲಾವಧಿಗೆ ಫಕೀರಪ್ಪ ಪದವೀಧರನಾದ. ಸಂತೋಷ ಅಭಿಮಾನಗಳಿಂದ ಧಾರವಾಡಕ್ಕೆ ಮರಳಿ, ತಂದೆಯ ಮತ್ತು ಧಾರವಾಡದ ತನ್ನ ನೆಚ್ಚಿನ ಅಧ್ಯಾಪಕರು ಬಂಧು ಬಳಗದ ಆಶೀರ್ವಾದ ಪಡೆದ. ಇದೇ ಅವಧಿಯಲ್ಲಿ ತಮ್ಮ ಮಗಳು ಭಾಗೀರಥಿಬಾಯಿಯನ್ನು ಫಕೀರಪ್ಪನಿಗೆ

ಧಾರೆಯೆರೆದು ಕೊಟ್ಟು, ತಮ್ಮ ಅಳಿಯ ಫಕೀರಪ್ಪನ ಉಜ್ವಲ ಭವಿತವ್ಯದ ಕನಸು ಕಾಣುತ್ತಿದ್ದ ಚಿಕ್ಕೋಡಿ ತಮ್ಮಣ್ಣಪ್ಪನವರು, ಫಕೀರಪ್ಪನ ತಂದೆ ಗುರುಬಸಪ್ಪನವರಿಗೆ ಬರೆದ ಪತ್ರವೊಂದು ಫಕೀರಪ್ಪನ ಕಣ್ಣಿಗೆ ಬಿತ್ತು. ಅದನ್ನು ವಿವರವಾಗಿ ಓದಿದ ಫಕೀರಪ್ಪನ ಹೃದಯದಲ್ಲಿ ಹತ್ತಾರು ಬಗೆಯ ಸಂಕಲ್ಪ ಮೂಡಿದುವು. ಹಾಗೆ ನೋಡಿದರೆ, ಕನ್ನಡ ಸಾಹಿತ್ಯ ಸಂಸ್ಕೃತಿಗಳ ಉಗ್ರ ಅಭಿಮಾನಿ ಚಿಕ್ಕೋಡಿ ತಮ್ಮಣ್ಣಪ್ಪ ತಮ್ಮ ಅಳಿಯ ಫಕೀರಪ್ಪನಿಗೆ ಅನೇಕ ಪತ್ರಗಳನ್ನು ಬರೆದಿರುವುದು ಸಹಜವಾದರೂ, ಫಕೀರಪ್ಪನ ತಂದೆ ಗುರುಬಸಪ್ಪನವರಿಗೆ ತಮ್ಮಣ್ಣಪ್ಪನವರು ಬರೆದ ಒಂದು ಪತ್ರ ಮಾತ್ರ, ಅಪ್ರತ್ಯಕ್ಷವಾಗಿ ಪದವೀಧರ ಫಕೀರಪ್ಪನ ವ್ಯಕ್ತಿತ್ವಕ್ಕೆ ಒಂದು ಕ್ರಿಯಾಶೀಲ ತಿರುವು ಕೊಟ್ಟಿತು ಎಂದು ಹೇಳಿದರೆ ಉತ್ಪ್ರೇಕ್ಷೆಯಲ್ಲ. ಹಳಕಟ್ಟಿ ಗುರುಬಸಪ್ಪನವರು ತಮ್ಮ ಮಗ ಫಕೀರಪ್ಪನಿಗೆ ತಮ್ಮಣ್ಣಪ್ಪ ಸಲ್ಲಿಸಿದ ಆರ್ಥಿಕ ನೆರವು, ತೋರಿದ ಪ್ರೀತಿ ವಾತ್ಸಲ್ಯಗಳ ಬಗೆಗೆ ಕೃತಜ್ಞತೆ ಸೂಚಿಸಿ ಬರೆದ ಪತ್ರಕ್ಕೆ ಚಿಕ್ಕೋಡಿ ತಮ್ಮಣ್ಣಪ್ಪನವರು ಬರೆದ ಉತ್ತರ ಹೀಗಿದೆ:

ಡಿಸೆಂಬರ್ ೧೯೦೧

ಗುರುಬಸಪ್ಪನಿಗೆ—

"ತಾವು ಆ ಪತ್ರದಲ್ಲಿ ಚಿ. ಫಕೀರಪ್ಪನಿಗೆ ನಾವು ಚೆನ್ನಾಗಿ ಸಹಾಯ ಮಾಡಿದೆವೆಂದು ಬರೆದಿರುವಿರಿ. ಆದರೆ ಚಿ. ಫಕೀರಪ್ಪನ ಅಭ್ಯಾಸಕ್ಕೆ ಅನುಕೂಲವನ್ನು ಮಾಡತಕ್ಕ ಭಾರವು ಹೆತ್ತವರಾದ ತಮ್ಮಷ್ಟೇ ನಮ್ಮ ಮೇಲೆಯೂ ಇರುತ್ತದೆಂದು ನಾನು ತಿಳಿಯುತ್ತೇನೆ... ಸಹಾಯವಲ್ಲ, ನಾವು ಕರ್ತವ್ಯವನ್ನು ಮಾಡಿದ್ದೇವೆ. ಆತನ ಶಾಂತ ಮತ್ತು ಸಾತ್ವಿಕ ಸ್ವಭಾವವೂ, ಜ್ಞಾನಸಂಪಾದನಾರ್ಥವಾಗಿ ಅವನಲ್ಲಿ ಜಾಗ್ರತವಾಗಿರುವ ಜಿಜ್ಞಾಸು ಪ್ರಾಬಲ್ಯವೂ, ಮುಂದಿನ ಆತನ ಅಭ್ಯುದಯಕಾಲದ ವೀರಶೈವ ಸಮಾಜದಲ್ಲಿ ಧುರಂಧರನಾಗಿ, ನಮ್ಮ ಹೀನದೆಸೆಗೆ ಬಂದ ಕನ್ನಡ ವಾಂಙ್ಮಯದಲ್ಲಿ ಉತ್ತಮೋತ್ತಮ ಗ್ರಂಥಗಳನ್ನು ಬರೆದು ಅಗ್ರಗಣ್ಯನಾಗಬೇಕೆಂದು ನಾನು ಬಯಸುತ್ತೇನೆ. ದೇವರು ನನ್ನ ಅಪೇಕ್ಷೆಯನ್ನು ಕೊನೆಗಾಣಿಸಿ ಕರ್ನಾಟಕದ ಅಭ್ಯುದಯವನ್ನು ನನ್ನ ಜೀವಮಾನ ಕಾಲದಲ್ಲಿಯೇ ಮಾಡಿದರೆ ಅದನ್ನು ನೋಡಿ ನಾನು ಸಾಯಬೇಕೆನ್ನುತ್ತೇನೆ. ಉಚ್ಚತರ ಶಿಕ್ಷಣವು ದೇಶಾಭಿವೃದ್ಧಿಯ ಸಲುವಾಗಿಯೇ ನಡೆಯಬೇಕಲ್ಲದೆ ಸ್ವಾರ್ಥದ ಸಲುವಾಗಿ ಕಲಿಯುವುದು ಯೋಗ್ಯವಲ್ಲವೆಂದು ನಾನು ತಿಳಿಯುತ್ತೇನೆ."

ಫಕೀರಪ್ಪನ ಮಾವ ಚಿಕ್ಕೋಡಿ ತಮ್ಮಣ್ಣಪ್ಪ ಕನ್ನಡ ನಾಡು ನುಡಿಗಳ ಕಟ್ಟಾ ಅಭಿಮಾನಿ. ಸ್ವತಃ ಕನ್ನಡ ಸಾಹಿತಿಗಳಾದ ಅವರು ಬೇರೆ ಸಂಸ್ಥಾನಗಳಲ್ಲಿಯ ಕನ್ನಡಿಗರ, ಕನ್ನಡ ಭಾಷೆಯ ಸ್ಥಿತಿಗತಿಗಳನ್ನು, ಅವಕಾಶ ಸಿಕ್ಕ ಎಲ್ಲ ಸಾರ್ವಜನಿಕ ವೇದಿಕೆಗಳಲ್ಲೂ ವಿವರಿಸಿ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ

ಸ್ಥಾಪನೆಯಲ್ಲಿ ಭಾಗಿಗಳಾಗಿ, ಗಡಿನಾಡಿನ ಸಾಹಿತ್ಯಕ ಚಟುವಟಿಕೆಗಳಲ್ಲಿ ಸದಾ ಮಗ್ನರಾಗಿರುತ್ತಿದ್ದರು. ಹೀಗೆ ಸದಾ ಕನ್ನಡದ ಅಭಿವೃದ್ಧಿಗಾಗಿ ಹಂಬಲಿಸುತ್ತಿದ್ದ ತಮ್ಮಣ್ಣಪ್ಪನವರಿಗೆ, ಫಕೀರಪ್ಪನಂಥ ಅಳಿಯ ದೊರೆತದ್ದು ಒಂದು ಅಪೂರ್ವ ನಿಕ್ಷೇಪ ದೊರಕಿದಂತಾಗಿತ್ತು. ಅವರು ಸಂದರ್ಭಾನುಸಾರ, ಆಗಾಗ ಫಕೀರಪ್ಪನ ಆಸೆ ಆಕಾಂಕ್ಷೆಗಳಿಗೆ ನೀರೆರೆದು ಪೋಷಿಸಿ ಬೆಳೆಸುವುದು ಅಗತ್ಯವೆಂದು ಕೂಡ ಭಾವಿಸಿದರು. ಫಕೀರಪ್ಪ ಒಮ್ಮೆ ಪದವಿ ಪರೀಕ್ಷೆಯಲ್ಲಿ ಪಾಸಾಗಿ, ಎಲ್.ಎಲ್.ಬಿ. ಪದವಿಗೆ ಓದುತ್ತಿದ್ದಾಗ ಮತ್ತು ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಅಧ್ಯಯನ ಮಾಡಬೇಕೆಂದಾಗ ತಮ್ಮಣ್ಣಪ್ಪನವರು ಪತ್ರಮುಖೇನ ಅಥವಾ ಮುಖತಃ, ಅನೇಕ ರೀತಿಯ ಹೃದಯಸ್ಪರ್ಶಿ ಸಂಗತಿಗಳನ್ನು ವಿವರಿಸುತ್ತಿದ್ದರು. ಕನ್ನಡ ವಾಙ್ಮಯದ ಪಾಂಡಿತ್ಯ ಸಾಧನೆ ಮಾಡದೆ, ವೀರಶೈವ ಸಾಹಿತ್ಯದ ಹಿರಿಮೆಯನ್ನು ಅರಿಯದೆ, ಕನ್ನಡ ಜನತೆ, ಕನ್ನಡ ಸಮಾಜ ಎಂಥ ಶೋಚನೀಯ ಸ್ಥಿತಿ ಹೊಂದಿದೆ! ಇಂಥ ದಯನೀಯ ಸ್ಥಿತಿಗಳನ್ನು ಹೋಗಲಾಡಿಸಲು ಅಗತ್ಯವಾದ ಕ್ರಮಗಳೇನು ಇತ್ಯಾದಿ ವಿಚಾರ ಕುರಿತು ಫಕೀರಪ್ಪನ ಮನಮುಟ್ಟುವಂತೆ ತಿಳಿಸುತ್ತಿದ್ದರು.

೧೯೦೪ ರಲ್ಲಿ ಫಕೀರಪ್ಪ ಕಾಯ್ದೆ ಪದವಿ ಪರೀಕ್ಷೆಯಲ್ಲಿ ಪ್ರಥಮ ತರಗತಿ ಪಡೆದು ಉತ್ತೀರ್ಣನಾದ. ಕಳೆದ ೨–೩ ವರ್ಷಗಳ ಅವಧಿ ಫಕೀರಪ್ಪನ ಜೀವನವನ್ನು ರೂಪಿಸಿದ ಜೀವನದ ಧ್ಯೇಯವನ್ನು ಸ್ಥಿರಗೊಳಿಸುವ ದಿಸೆಯಲ್ಲಿ, ಅವರ ಮಾವ ತಮ್ಮಣ್ಣಪ್ಪ ಮಹತ್ವದ ಪಾತ್ರ ನಿರ್ವಹಿಸಿದರು. ಅಖಿಲ ಭಾರತ ವೀರಶೈವ ಮಹಾಸಭೆಯ ಪ್ರಥಮ ಅಧಿವೇಶನ ಧಾರವಾಡದಲ್ಲಿ ಜರುಗಿದ್ದು ೧೯೦೪ ರಲ್ಲಿಯೇ. ಈ ಅಧಿವೇಶನದ ಪ್ರಥಮ ಅಧ್ಯಕ್ಷರು, ಅಂದು ಆಗಲೇ ಮಹಾದಾನಿ, ನ್ಯಾಯನಿಷ್ಠುರಿ, ದೀನದಲಿತರ ಕೃಷಿಕರ ಉದ್ಧಾರಕರೆಂದು ಖ್ಯಾತರಾಗಿದ್ದ ಸಿರಸಂಗಿ ಲಿಂಗರಾಜರು. ಆ ಮಹಾಸಭೆ ಕೈಕೊಂಡ ಸಾಮಾಜಿಕ ಸಂಘಟನೆ, ಮತ್ತು ಶೈಕ್ಷಣಿಕ ಅಭಿವೃದ್ಧಿ ಕುರಿತ ಅನೇಕ ನಿರ್ಣಯಗಳು ಪದವೀಧರ ಫಕೀರಪ್ಪನ ಮೇಲೆ ಗಾಢ ಪ್ರಭಾವ ಬೀರಿದುವು. ಸಿರಸಂಗಿ ಲಿಂಗರಾಜರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಎತ್ತಿದ ವೀರಶೈವ ಧರ್ಮದ ಹಿರಿಮೆ, ವೀರಶೈವ ಸಾಹಿತ್ಯ ಸಂಸ್ಕೃತಿ, ವಾಣಿಜ್ಯೋದ್ದಿಮೆ, ಕೃಷಿ ಸಂವರ್ಧನೆ ಮುಂತಾದ ಅನೇಕ ಸಂಗತಿಗಳು ಫಕೀರಪ್ಪನ ಮನಸೆಳೆದವು. ಮುಂದೆ ಒಂದಲ್ಲ ಒಂದು ಹಂತದಲ್ಲಿ ತಮ್ಮ ಇಡೀ ಜೀವನವನ್ನು ಕನ್ನಡ ನಾಡಿನ ಕೃಷಿ, ಸಹಕಾರಿ, ಶಿಕ್ಷಣ ವಿಶೇಷತಃ ವೀರಶೈವ ಧರ್ಮ ಸಾಹಿತ್ಯ ಸಂಶೋಧನೆಗಳಿಗಾಗಿ ಮೀಸಲಾಗಿರುವ ಸಂಕಲ್ಪ ಫಕೀರಪ್ಪನ ಸುಪ್ತಚೇತನದಲ್ಲಿ ಮೂಡಿನಿಂತಿತ್ತು.

ಕಾಯ್ದೆ ಪದವಿ ಪಡೆದ ಬಳಿಕ ಮುಂದೆ, ಇಲ್ಲ ಸರಕಾರಿ ನೌಕರಿಗೆ ಸೇರಿಕೊಳ್ಳಬೇಕು, ಇಲ್ಲ ವಕೀಲಿ ವೃತ್ತಿ ಕೈಕೊಳ್ಳಬೇಕು. ಚಿಕ್ಕೋಡಿ ತಮ್ಮಣ್ಣಪ್ಪನವರ ಮಗಳು ಭಾಗೀರಥಿಬಾಯಿ ಫಕೀರಪ್ಪನ ಮಡದಿಯಾಗಿ ಬಂದ ಬಳಿಕ, ಫಕೀರಪ್ಪ

ತಮ್ಮ ಬಂಧುಗಳ ಸಲಹೆಯ ಮೇರೆಗೆ ಬೆಳಗಾಂವಿಗೆ ಬಂದು, ಅಲ್ಲಿಯ ಖ್ಯಾತ ವ್ಯಕ್ತಿ ಶ್ರೀ ಚೌಗುಲಾ ಅವರ ಮಾರ್ಗದರ್ಶನದಲ್ಲಿ ವಕೀಲಿವೃತ್ತಿ ಆರಂಭಿಸಿದರು. **ಎಫ್.ಜಿ. ಹಳಕಟ್ಟಿ ವಕೀಲರು** ತಮ್ಮ ಕಾಯ್ದೆ ಜ್ಞಾನ ಮತ್ತು ನ್ಯಾಯಕ್ಕಾಗಿ ವಾದಿಸುವ ರೀತಿಗಳಿಂದಾಗಿ ಕೆಲವೇ ತಿಂಗಳುಗಳಲ್ಲಿ ಖ್ಯಾತರಾದರು. ಬೆಳಗಾಂವಿ ಜಿಲ್ಲೆಯ ಉದ್ದಲಗಕ್ಕೂ ಇವರೊಬ್ಬ ಜನಪ್ರಿಯ ವಕೀಲರೆಂದು ಮನ್ನಣೆ ಪಡೆದರು. ಆದರೆ ಅವರು ಕಾರಣಾಂತರಗಳಿಂದಾಗಿ ಬೆಳಗಾಂವಿ ಬಿಟ್ಟು, ಬಿಜಾಪುರಕ್ಕೆ ಬಂದು ನೆಲೆಸಿ ತಮ್ಮ ವಕೀಲಿ ವೃತ್ತಿ ಮುಂದುವರೆಸಿದರು.

ಮಾರ್ಚ್ ೧೯೦೮ ರಲ್ಲಿ ಫಕೀರಪ್ಪನವರಿಗೆ ತಮ್ಮಣ್ಣಪ್ಪನವರು ಬರೆದಿದ್ದ ಒಂದು ಪತ್ರದ ವಿಚಾರಗಳು, ಅವರ ಬದುಕಿನಲ್ಲಿ ನಿರಂತರ ಪ್ರೇರಣೆಯಾಗಿರುವಂತೆ ತೋರುತ್ತದೆ. ವೀರಶೈವ ಧರ್ಮ, ಸಾಹಿತ್ಯ, ಸಂಸ್ಕೃತಿಗಳ ಚಿಂತನೆ ಹಳಕಟ್ಟಿಯವರ ವಿಚಾರ ಧೋರಣೆಗಳಲ್ಲಿ ಪ್ರಮುಖವಾಗಿ ಎದ್ದು ಕಾಣುತ್ತಿತ್ತು. ಕಕ್ಷಿಗಾರರು ಬರುವುದು, ಅವರ ಖಟ್ಲೆ ಕುರಿತ ಸಾಕ್ಷಿ ಪುರಾವೆ, ಕಾನೂನಿನ ರಕ್ಷಣೆ, ಸಾಕ್ಷಿಗಳ ತರಬೇತಿ, ನ್ಯಾಯಕ್ಕೆ ಸಂಬಂಧಿಸಿದ ವಿಧಿ ವಿಧಾನಗಳ ಚರ್ಚೆ ಮುಂತಾದುವುಗಳನ್ನು ಕುರಿತು, ಹಳಕಟ್ಟಿ ಫಕೀರಪ್ಪನವರು ತೋರುತ್ತಿದ್ದ ಆಸಕ್ತಿ ಸದಾ ಚುರುಕಾಗಿಯೇ ಇರುತ್ತಿತ್ತು. ಆದರೆ, ಹಳಕಟ್ಟಿ ವಕೀಲರು ಬೇರೆ ಬೇರೆ ಗ್ರಾಮಗಳಿಂದ ಬಂದ ಜನರನ್ನು ಅಲ್ಲಿ ದೊರೆಯಬಹುದಾದ ಹಳೆಯ ಕೋರಿ ಕಾಗದದ ಕೈಬರಹದ, ತಾಡವೋಲೆಯ ಗ್ರಂಥಕಟ್ಟುಗಳ ಬಗ್ಗೆ ಕೇಳುವಲ್ಲಿ, ವಿವರ ತಿಳಿದು ಟಿಪ್ಪಣಿ ಮಾಡಿಕೊಳ್ಳುವಲ್ಲಿ ತೋರುತ್ತಿದ್ದ ವಿಶೇಷ ಆಸಕ್ತಿ, ಕೋರ್ಟು ಖಟ್ಲೆಗಳಿಂದು ಅಲೆದಾಡುತ್ತಿದ್ದ ಕೆಲವರಲ್ಲಿ, ಕುತೂಹಲ ಜೊತೆಗೆ ಅಚ್ಚರಿ ಮೂಡಿಸುತ್ತಿತ್ತು. ಅನೇಕ ನ್ಯಾಯವಾದಿಗಳಲ್ಲಿ ಕಾಣಲಾಗದ ಕಟ್ಟುನಿಟ್ಟು, ಪ್ರಾಮಾಣಿಕತೆ, ಶಿಸ್ತು ಮತ್ತು ಪಕ್ಷಕಾರರಿಂದ ಬಂದ ಅಲ್ಪಸ್ವಲ್ಪ ಹಣ ಸಂಪಾದನೆಯಲ್ಲಿಯೇ ಅವರು ತಾಳುತ್ತಿದ್ದ ಸಂತೃಪ್ತಿ, ಅವರನ್ನು ಜನರ ನೆಚ್ಚಿನ ನ್ಯಾಯವಾದಿಗಳನ್ನಾಗಿ ಮಾಡಿದ್ದುವು. ಆದರೆ ದಿನೇ ದಿನೇ ಅವರ ಆರ್ಥಿಕ ಸ್ಥಿತಿ ಮಾತ್ರ ಹದಗೆಡುತ್ತಲೇ ಇತ್ತು. ಕೆಲವು ಪ್ರಕರಣಗಳ ತನಿಖೆ, ಸ್ಥಳ ಪರಿಶೀಲನೆ ಮತ್ತು ಪೂರ್ವಭಾವಿ ಪರಿಶೀಲನೆಗಾಗಿ ಹಳಕಟ್ಟಿ ವಕೀಲರು ಅನೇಕ ಪಕ್ಷಕಾರರ ಊರುಗಳಿಗೂ ಹೋಗಿಬರುತ್ತಿದ್ದರು. ಅಂಥ ಸಂದರ್ಭದಲ್ಲಿ ಅವರಿಗೆ ಅಲ್ಲಲ್ಲಿ ಪ್ರಮುಖರ ಮನೆ, ಮಠಗಳಲ್ಲಿರಬಹುದಾದ ಹಸ್ತಪ್ರತಿಗಳ ಸಂಗ್ರಹದ ಹವ್ಯಾಸ, ವಿಶೇಷತಃ ವೀರಶೈವ ಸಾಹಿತ್ಯ–ವಚನ ಸಾಹಿತ್ಯ–ದ ಕಟ್ಟುಗಳನ್ನು ಕೂಡಿಸುವ ಕಾರ್ಯ ಕೂಡ ಮುಖ್ಯವಾಗಿರುತ್ತಿತ್ತು. ಕೆಲವೊಮ್ಮೆ ಪಕ್ಷಕಾರರು ತಮ್ಮ ವಕೀಲರ ಈ ಬಗೆಯ ವಿಶೇಷ ಆಸಕ್ತಿಯನ್ನು ಕುರಿತು ಕೇಳಿದಾಗಲೆಲ್ಲ, ಅವರು ತಮ್ಮ ಹಿರಿಯರ ಪ್ರೇರಣೆಯೇ ಇದಕ್ಕೆಲ್ಲ ಮೂಲ ಕಾರಣ ಎಂದು ಹೇಳುತ್ತಿದ್ದರಂತೆ. ಈ ಮಾತಿಗೆ ಪುಷ್ಟಿ ಹಳಕಟ್ಟಿಯವರ ಮಾವಂದಿರಾದ ತಮ್ಮಣ್ಣಪ್ಪ ಚಿಕ್ಕೋಡಿ ಬರೆದ ಬೇರೊಂದು ಪತ್ರದಲ್ಲಿ ದೊರೆಯುತ್ತದೆ. ಆ ಪತ್ರದ ಕೆಲವು ವಿಚಾರಗಳು:

ಬನಹಟ್ಟಿ, ಮಾರ್ಚ್ 1908

ಫಕೀರಪ್ಪನಿಗೆ—

"ಎಲ್ಲರೂ ವೀರಶೈವ ಧರ್ಮ, ಧರ್ಮ ಎಂದು ಬಡದಾಡುತ್ತಾರೇ ಹೊರತು, ಅದರ ಉತ್ಪತ್ತಿ, ಅದರ ಬೆಳವಣಿಗೆ, ಅದರಲ್ಲಿ ಆಗುತ್ತಾ ಬಂದ ಸ್ಥಿತ್ಯಂತರಗಳು ಮತ್ತು ಧರ್ಮ ಪ್ರಕಾರದಲ್ಲಿ ನಮ್ಮ ಮತವು ಹಿಂದೂಸ್ಥಾನದಲ್ಲಿ ಮಾಡಿದ ಹಾಗೂ ಮಾಡತಕ್ಕದ್ದಿರುವ ಕಾರ್ಯವೂ ಇವೆಲ್ಲವುಗಳ ಬಗ್ಗೆ ಮಾರ್ಮಿಕ ಸಂಗತಿಗಳ ವಿಚಾರ ಮಾಡುವವರು ಎಷ್ಟು ಜನರಿದ್ದಾರೆ?......ವೀರಶೈವ ಸಮಾಜದ ಸಾಂಗೋಪಾಂಗ ಇತಿಹಾಸವು ಹೊರಬೀಳಬೇಕಾಗಿದೆ. ಅದಕ್ಕಾಗಿ ಎಷ್ಟೋ ಶೋಧಗಳು ಮಾಡಬೇಕಾಗಿದೆ ಮತ್ತು ಆದ ಶೋಧಗಳ ಮೇಲೆ ಮನನ ಮಾಡಿ, ಹೊರಟ ಸಿದ್ಧಾಂತಗಳನ್ನು ಪ್ರಸಿದ್ಧಪಡಿಸಿ, ನಮ್ಮಲ್ಲಿ ಐಕ್ಯವನ್ನು, ಹೊಸಚೈತನ್ಯವನ್ನು ಹುಟ್ಟಿಸಬೇಕಾಗಿದೆ. ಈ ಕೆಲಸವನ್ನು ಯಾರು ಮಾಡಬೇಕು? ಯಾರಿಗೆ ಶಕ್ತಿಯುಂಟು? ಮತ್ತು ಯಾರಿಂದ ಈ ಕೆಲಸ ಮಾಡಲಾದೀತು? ಈ ಮೂರು ಪ್ರಶ್ನೆಗಳ ವಿಚಾರ ಮಾಡಿರಿ. ಅಂದರೆ ನೀವು ಯಾವ ಮಾರ್ಗ ಹಿಡಿಯಬೇಕೆಂಬುದು ಇದರಿಂದ ಗೊತ್ತಾದೀತು........"

ಹಳಕಟ್ಟಿ ಫಕೀರಪ್ಪನವರ ವ್ಯಕ್ತಿತ್ವದ ಒಂದು ಹಂತದ ಬಹುಮುಖ್ಯ ಪ್ರೇರಣೆ ಮೇಲೆ ಉಲ್ಲೇಖಿಸಿದ ವಿಚಾರಗಳು; ಜೊತೆಗೆ ಅವರಲ್ಲಿ ಮೊದಲಿಂದ ಬೆಳೆದು ಬಂದ ಸಹಜ ಪ್ರವೃತ್ತಿ ಎನ್ನುವುದು ಸ್ಪಷ್ಟ. ಕಾಯ್ದೆ ಪದವೀಧರರಾಗುವ ಪೂರ್ವದಲ್ಲಿಯೇ ಸುಮಾರು ೧೯೦೧ ರ ವೇಳೆಗೆ ತಮ್ಮ ಸಹಪಾಠಿಯಾಗಿದ್ದ ವೀರಭದ್ರಪ್ಪ ಹಾಲಭಾವಿ ಅವರ ಜೊತೆ ಜಮಖಂಡಿ ಸಂಸ್ಥಾನದ ಗೋಠೆ ಗ್ರಾಮಕ್ಕೆ ಹೋದ ಹಳಕಟ್ಟಿಯವರಿಗೆ, ***ಪ್ರಭುಲಿಂಗ ಲೀಲೆ ಕಾವ್ಯ*** ಮತ್ತು ***ಗಣಭಾಷ್ಯರತ್ನಮಾಲೆ*** ವಚನ ಸಂಕಲನ ಲಭ್ಯವಾಗಿದ್ದುವು; ಅಧ್ಯಯನದ ಆಸಕ್ತಿ ಕುದುರಿಸಿದ್ದುವು. ೧೯೦೨ ರಲ್ಲಿ ಬನಹಟ್ಟಿಯ ಗಲಗಲಿ ಶಿವಲಿಂಗಪ್ಪನವರ ಮನೆಯ ಒಂದು ಮೂಲೆಯಲ್ಲಿ ಧೂಳು ಹಿಡಿದಿದ್ದ ಸುಮಾರು ೩೨ ಗ್ರಂಥಗಳನ್ನು(ಹಸ್ತಪ್ರತಿ) ಕಂಡು ಚಕಿತರಾಗಿ ಕೈಗೆತ್ತಿಕೊಂಡು ಒಂದೊಂದಾಗಿ ಪರಿಶೀಲಿಸಿದರು. ಅದೇ ರೀತಿ ಗುರುಬಸಯ್ಯ ಕಂತಿ ಅವರ ಮನೆಯಲ್ಲಿ ದೊರೆತ ೧೬ ಗ್ರಂಥಗಳು, ಬೆಳಗಾಂವಿಯ ಗಿಲಗಂಚಿ ಗುರುಸಿದ್ದಪ್ಪನವರ ಮನೆಯಲ್ಲಿ ೧೦ ಗ್ರಂಥ ಹೀಗೆ ಹಳಕಟ್ಟಿಯವರ ಹಸ್ತಪ್ರತಿ ಸಂಗ್ರಹ ಮತ್ತು ವ್ಯಾಸಂಗದ ಗೀಳು ಹೆಚ್ಚುತ್ತಾ ಹೋಯಿತು. ೧೯೦೩ ರಲ್ಲಿ ಹಳಕಟ್ಟಿಯವರು ಧಾರವಾಡದ ಮಂಚಾಲೆ ಶಿವಲಿಂಗಪ್ಪನವರ ಮನೆಯಲ್ಲಿ ಪುರಾತನ ಗ್ರಂಥಗಳ ಒಂದು ಸಮುದಾಯವನ್ನೇ ಕಂಡರು. ಮೊದಲ ಸಲ ತಾಳೆಗರಿಯ ಮೇಲೆ ಬರೆದ ಕಟ್ಟುಗಳು ಹಳಕಟ್ಟಿಯವರಲ್ಲಿ ಅಚ್ಚರಿ ಹೊಮ್ಮಿಸಿದುವು. ಆ ತಾಳೆಗರಿಯ ಹಸ್ತಪ್ರತಿಗಳನ್ನು ಓದುವುದು ಮೊದಮೊದಲು ಅವರಿಗೆ ಕಠಿಣವೆನಿಸಿದರೂ, ಗರಿಗಳನ್ನು ತಿರುವಿ ಹಾಕುತ್ತಾ ಹೋದಂತೆ, ಅಲ್ಲಿಯ ವಚನಗಳು

ಅವರಲ್ಲಿ ಅಧ್ಯಯನದ ವಿಶೇಷ ಹಂಬಲ ಮೂಡಿಸಿದವು. ವಚನಗಳ ಸರಳತೆ, ಭಾಷೆಯ ಸುಂದರ ಶೈಲಿ, ವಿಷಯ ನಿರೂಪಣೆ, ವಸ್ತುವಿನ ಗಾಂಭೀರ್ಯ, ಒಂದೊಂದೂ ಹಳಕಟ್ಟಿಯವರ ಕುತೂಹಲ ಗರಿಗೆದರಲು ಕಾರಣವಾಯಿತು; ವ್ಯಾಸಂಗ ಆಳವಾಗಲು ಪ್ರೇರಣೆ ನೀಡಿತು. ಸುಮಾರು ೧೯೨೦ ರ ವೇಳೆಗೆ ಹಳಕಟ್ಟಿಯವರು ತಮ್ಮ ಸರಕಾರಿ ನೌಕರಿಗೆ ಸೇರುವ ಆಸೆಯನ್ನು ಬದಿಗೊತ್ತಿ, ಸ್ವತಂತ್ರವಾಗಿ ಮತ್ತು ಪರಿಶ್ರಮ ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸಬಲ್ಲ ವಕೀಲಿ ವೃತ್ತಿಯನ್ನೇ ಕೈಗೊಂಡು, ಸಮರ್ಥ, ಪ್ರಾಮಾಣಿಕ ಮತ್ತು ಜನಾನುರಾಗಿ ವಕೀಲರೆಂದು ಖ್ಯಾತರಾಗುವ ಹೊತ್ತಿಗೆ, ಅವರಲ್ಲಿ ಸುಮಾರು ಒಂದು ಸಾವಿರ ಹಸ್ತಪ್ರತಿಗಳ ಸಂಗ್ರಹವಾಗಿತ್ತು.

ಉಪಜೀವನಕ್ಕಾಗಿ ಕೈಗೊಂಡ ವಕೀಲಿವೃತ್ತಿಯ ವಿವಿಧ ಕಾರ್ಯಗಳು ಮುಗಿದ ಬಳಿಕ, ಹಳಕಟ್ಟಿ ಅವರು, ತಾವು ವಾಚನಕ್ಕೆ ಆಯ್ದುಕೊಳ್ಳುತ್ತಿದ್ದ ಒಂದೊಂದೇ ತಾಳೆಗರಿ ಹಸ್ತಪ್ರತಿಯ ಸಾಹಿತ್ಯವನ್ನು ಕಾಗದದ ಮೇಲೆ ಬರೆದು ತೆಗೆಯುತ್ತಿದ್ದರು. ವಚನಗಳಲ್ಲಿ ಕೆಲವೊಮ್ಮೆ ಕಂಡುಬರುತ್ತಿದ್ದ ಸ್ಥಲಕ್ಕನುಗುಣವಾದ ವಚನಗಳನ್ನು ವರ್ಗೀಕರಿಸುತ್ತಿದ್ದರು; ವಿಭಜಿಸುತ್ತಿದ್ದರು. ತಾಳೆ ಮಾಡಿ ನೋಡಿ, ಶುದ್ಧಾಶುದ್ಧ ಭಗ್ನತೆ, ಶೈಥಿಲ್ಯ ಮುಂತಾದವುಗಳನ್ನು ನೀಗಿಕೊಂಡು ಶುದ್ಧಹಸ್ತಪ್ರತಿ ಸಿದ್ಧಪಡಿಸುತ್ತಿದ್ದರೆ, ಕೆಲವೊಮ್ಮೆ ಹಸ್ತಪ್ರತಿಯಲ್ಲಿ ಕಾಣುತ್ತಿದ್ದ ಟೀಕೆ ವ್ಯಾಖ್ಯೆಗಳನ್ನು ಗಮನಿಸಿ ಟಿಪ್ಪಣಿಗಳನ್ನು ಬರೆದಿಡುತ್ತಿದ್ದರು.

ಹಳಕಟ್ಟಿಯವರ ಈ ಸಂಶೋಧನೆಯ ಹಸ್ತಪ್ರತಿ ಸಂಗ್ರಹದ ಪ್ರವೃತ್ತಿ, ಕೆಲವೊಮ್ಮೆ ಅವರ ಪಕ್ಷಕಾರರಿಂದ ಟೀಕೆಗೂ ಒಳಗಾಯಿತು. 'ಈತನೆಂಥ ವಕೀಲ? ಅಲ್ಲಲ್ಲಿ ಹಳ್ಳಿಗಳಿಗೆ ಖಟ್ಲೆ ಸಂಬಂಧಿಸಿದ ಮಾಹಿತಿ ವಿವರ ಮುಖತಃ ಸಂಗ್ರಹಿಸಲು ಬಂದಾಗ, ಹಸ್ತಪ್ರತಿಗಳಿಗಾಗಿಯೂ ವಿಚಾರಿಸುತ್ತ ವ್ಯರ್ಥವಾಗಿ ಕಾಲಹರಣ ಮಾಡುತ್ತಾನೆ' ಎನ್ನುವ ನಿಂದನೆಯ ನುಡಿಗಳೂ ಆಗಾಗ ಹಳಕಟ್ಟಿಯವರ ಕಿವಿಗೆ ಬೀಳುತ್ತಿದ್ದುವು. ಆದರೆ ತಮ್ಮ ವೃತ್ತಿಗೆ ಬಾಧೆ ತಾರದ ಹಾಗೆ ತಮ್ಮ ಪ್ರವೃತ್ತಿಗನುಗುಣವಾದ ಕಾರ್ಯದಲ್ಲಿ ತೊಡಗುತ್ತಿದ್ದ ಹಳಕಟ್ಟಿ ವಕೀಲರು ಇದಾವುದನ್ನೂ ಲಕ್ಷ್ಯಕ್ಕೆ ತಾರದೆ, ತಮ್ಮದೇ ಆದ ನಿಟ್ಟಿನಲ್ಲಿ ಮುನ್ನಡೆಯುತ್ತಿದ್ದರು. ಹೊಟ್ಟೆಬಟ್ಟೆಗಾಗಿ ಎಲ್ಲರೂ ಮಾಡೇ ಮಾಡುತ್ತಾರೆ. ತಾವು ಅದರ ಜೊತೆಗೇ ಸಮಾಜ ಕಲ್ಯಾಣದ ಸಾಹಿತ್ಯ ಸಂಶೋಧನೆಗಳ ಅಧಿಕ ಕಾರ್ಯ ಮಾಡಬೇಕು. ವಿದ್ಯಾವಂತನಾಗಿದ್ದವನು ಕೇವಲ ತನ್ನ ಸ್ವಾರ್ಥಕ್ಕಾಗಿ ದುಡಿಯದೆ, ಇತರರ ಹಿತಕ್ಕಾಗಿ ಲೋಕೋಪಕಾರಿಯಾದ ರೀತಿಯಲ್ಲಿಯೂ ಕಾಳಜಿ ವಹಿಸಿ ಬೆವರು ಸುರಿಸಿ ಕಾರ್ಯ ಸಾಧಿಸಬೇಕು, ಎನ್ನುವುದು ಅವರ ಅಂತರಂಗದ ಸಂಕಲ್ಪವಾಗಿತ್ತು.

ಹಳಕಟ್ಟಿಯವರ ಆರ್ಥಿಕ ಸ್ಥಿತಿಗಳು ಎಂದೂ ಅಷ್ಟೊಂದು ಚೆನ್ನಾಗಿರಲಿಲ್ಲ. ಪಕ್ಷಕಾರರು ತಮಗೆ ತಾವೇ ತಿಳಿದು ಏನು ಕೊಡುತ್ತಿದ್ದರೋ, ಎಷ್ಟು ಕೊಡುತ್ತಿದ್ದರೋ

117211
10.12.04

ಆದೇ ಅವರ 'ಫೀಸು', 'ಸಂಭಾವನೆ'. ಅವರ ಪತ್ನಿ ಭಾಗೀರಥಿಬಾಯಿ ಬಂದುದರಲ್ಲಿಯೇ ಸಂಸಾರದ ಹೊಣೆ ತೂಗಿಸುತ್ತ, ತಮ್ಮ ಪತಿ ಫಕೀರಪ್ಪನವರ ವೃತ್ತಿ ಮತ್ತು ಪ್ರವೃತ್ತಿ ಕಾರ್ಯಗಳಲ್ಲಿ ನೆರವಾಗುತ್ತಿದ್ದರು.

ಇದೇ ಅವಧಿಯಲ್ಲಿ ೧೯೨೧ ರ ಅಕ್ಟೋಬರ್ ೨೧ ನೆಯ ತಾರೀಖು ಅವರು ಬಿಜಾಪುರದಿಂದ ಬೆಳಗಾಂವಿಗೆ ಬಂದು ನೆಲೆಸಿ, ಅಲ್ಲಿಯೇ ತಮ್ಮ ವಕೀಲಿ ವೃತ್ತಿ ಮುಂದುವರೆಸಿದರು. ಬೆಳಗಾಂವಿಯ ಪರಿಸರ ಹಳಕಟ್ಟಿಯವರ ವೃತ್ತಿಗೇನೂ ಕೊರತೆ ಉಂಟು ಮಾಡಲಿಲ್ಲ; ಆದರೆ ಅವರ ಆಂತರಿಕ ಸಂಕಲ್ಪಗಳಾದ ವಚನ ಸಾಹಿತ್ಯದ ಅಧ್ಯಯನ ಮತ್ತು ಸಂಗ್ರಹ, ಸಂಶೋಧನ ಕಾರ್ಯಗಳಿಗೆ ಅಷ್ಟೊಂದು ಪ್ರೇರಕವಾಗಿ ಕಾಣಲಿಲ್ಲ. ಇದರಿಂದ ಅವರ ಮನಸ್ಸಿನ ಸ್ಥಿತಿ ಡೋಲಾಯಮಾನವಾಯಿತು. ಚಿರಪರಿಚಿತವಾದ ಬಿಜಾಪುರಕ್ಕೆ ಮತ್ತೆ ಮರಳಿ ಮುನ್ನಡೆಯುವ ಇಚ್ಛೆ ಬಲವಾಯಿತು. ಹಾಗೂ ಹೀಗೂ ಒಂದೆರಡು ವರ್ಷ ಬೆಳಗಾಂವಿಯ ನ್ಯಾಯಾಲಯ, ಪಕ್ಷಕಾರರು, ವಕೀಲರುಗಳ ಆವರಣದಲ್ಲಿಯೇ ನೂಕಿ, ೧೯೨೩ ರಲ್ಲಿ ಮತ್ತೆ ಬಿಜಾಪುರಕ್ಕೆ ಮರಳಿದರು. ತಮ್ಮ ಚಿರಪರಿಚಿತ ಜನರ ಜೊತೆಗೂಡಿ, ತಮಗೆ ಹಿತವೆಂದು ಕಂಡ ಸಾಮಾಜಿಕರ ಒಡನಾಡುತ್ತ, ಅತ್ಯುತ್ಸಾಹದಿಂದ ಕಾರ್ಯಪ್ರವೃತ್ತರಾದರು. ಅಗತ್ಯವಿದ್ದಷ್ಟು ಮತ್ತು ತಮಗೆ ಒಪ್ಪಿಗೆಯಾದಷ್ಟು ವಕೀಲಿ ವೃತ್ತಿ ಮಾಡುತ್ತ, ಮಿಕ್ಕ ಸಮಯವನ್ನು ಸಾಮಾಜಿಕ ಸಂಘಟನೆ, ಧಾರ್ಮಿಕ ಚಿಂತನೆ ಮತ್ತು ವ್ಯಾಸಂಗ ಸಂಶೋಧನೆಗಳಲ್ಲಿ ತುಂಬಿಕೊಂಡರು.

ಅಗಲಿಹೋದ ಬಂಧುವೊಬ್ಬನನ್ನು ಮುಕ್ತವಾಗಿ ಬರಮಾಡಿಕೊಳ್ಳುವ ಬಳಗದ ಹಾಗೆ, ಬಿಜಾಪುರದ ನಾನಾವರ್ಗದ ಜನ ಹಳಕಟ್ಟಿ ವಕೀಲರನ್ನು ಬರಮಾಡಿ ಕೊಂಡರು. ಹಳಕಟ್ಟಿಯವರಿಗೂ ಒಂದು ಬಗೆಯ ನೆಮ್ಮದಿ ಸ್ವಾಸ್ಥ್ಯ. ಈ ಅವಧಿಯಲ್ಲಿ ಅವರ ಕುಟುಂಬ ದೊಡ್ಡದಾಗುತ್ತ ನಡೆಯಿತು. ಮೊದಲನೆಯ ಮಗ ಚಂದ್ರಶೇಖರ (೫.೧೧.೧೯೦೬) ತುಂಬಾಪ್ರತಿಭಾವಂತನಾಗಿ ಶಿಕ್ಷಣದಲ್ಲಿ ವಿಶೇಷ ಪ್ರಗತಿ ತೋರಿಸುತ್ತಿದ್ದ. ಎರಡನೆಯ ಮಗ ಗುರುಪುತ್ರ (೨೩.೭.೧೯೧೩) ಮಂದಗತಿ; ಹಳಕಟ್ಟಿಯವರು ಮಕ್ಕಳ ಶಿಕ್ಷಣದ ಕಡೆಗೆ ಹೆಚ್ಚು ನಿಗಾ ವಹಿಸಿದರು. ವರ್ಷವರ್ಷಕ್ಕೂ ಅಧಿಕ ಉತ್ಕರ್ಷ ಹೊಂದಿದ ಹಿರಿಯ ಮಗ ಚಂದ್ರಶೇಖರ ಮುಂಬಯಿಯ ವಿಕ್ಟೋರಿಯಾ ಟೆಕ್ನಿಕಲ್ ಸಂಸ್ಥೆಯ ಪದವೀಧರನಾದ ಬಳಿಕ ಆತನನ್ನು ಉಚ್ಚ ಶಿಕ್ಷಣಕ್ಕಾಗಿ ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯಕ್ಕೆ ಕಳಿಸಲಾಯಿತು. ತಾಂತ್ರಿಕ ಪರಿಣತಿ ಹೊಂದಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣನಾದ ಚಂದ್ರಶೇಖರನಿಗೆ ದಿಲ್ಲಿಯಲ್ಲಿ ಒಂದು ಗಣ್ಯವಾದ ಹುದ್ದೆ ದೊರಕಿತು. ಹಳಕಟ್ಟಿ ಬಂಧು ಬಳಗದವರಿಗೆ ಇದೊಂದು ಅತ್ಯಂತ ಹೆಮ್ಮೆಯ ಹರ್ಷದ ಕಾಲಾವಧಿಯಾಗಿತ್ತು. ಚಂದ್ರಶೇಖರನ ತಂದೆ ಫಕೀರಪ್ಪ ಹಳಕಟ್ಟಿಯವರಿಗೆ ಜನ ಹೃದಯತುಂಬಿ ತಮ್ಮ ಅಭಿಮಾನದ ಸಂತೋಷದ ಅಭಿನಂದನೆ ಸಲ್ಲಿಸಿದರು. ಹಳಕಟ್ಟಿಯವರ ಕಾರ್ಯಕ್ಕೆ ಮತ್ತೆ ಕೋಡು

ಮೂಡಿದುವು. ಎಂದಿಗಿಂತ ಮಿಗಿಲಾದ ಜೀವನೋತ್ಸಾಹದಿಂದ ಅವರ ಸಂಶೋಧನ ವ್ಯಾಸಂಗಗಳು ಮುಂದುವರಿದುವು.

ಪ್ರಥಮ ಶ್ರೇಣಿಯ ಕಾಯ್ದೆ ಪದವೀಧರ ಹಳಕಟ್ಟಿ ಫಕೀರಪ್ಪ ಸುಮಾರು ೨೦ ವರ್ಷಗಳ ತಮ್ಮ ಸತತ ಪರಿಶ್ರಮ, ಕಾಯ್ದೆ ಜ್ಞಾನ, ವೃತ್ತಿ ಪ್ರಾಮಾಣಿಕತೆಗಳಿಂದಾಗಿ ಅಂದಿನ ಆಂಗ್ಲ ಸರ್ಕಾರದ ಆಡಳಿತಾಧಿಕಾರಿಗಳ ಗಮನ ಸೆಳೆದರು. ಹಳಕಟ್ಟಿಯವರ ಎರಡು ದಶಕಗಳಿಗೂ ಮೀರಿದ ಸಾರ್ವಜನಿಕ ಸಂಪರ್ಕ, ವೃತ್ತಿ ಪರಿಣತಿ ಮತ್ತು ಖ್ಯಾತಿಗಳಿಗೆ ಮನ್ನಣೆಯಿತ್ತು, ಅಂದಿನ ಸರ್ಕಾರ ಅವರನ್ನು ಪಬ್ಲಿಕ್ ಪ್ರಾಸಿಕ್ಯೂಟರ್, 'ಗವರ್ನಮೆಂಟ್ ಪ್ಲೀಡರ್' ಎಂದು ನೇಮಿಸಿತು. ಮನೆಗೆ 'ಅರ್ಥಿ' ಎಂದು ಬಂದವರೆಲ್ಲರ ಬಂಧುವಾಗಿ, ಬಡ ಕಕ್ಷಿದಾರರ ಆಸರೆಯಾಗಿ, ಬರಿಗೈಯಿಂದ ಬಂದವರಿಗೂ ತುಂಬಿದ ಹೃದಯದಿಂದ ಸಹಾಯ ಮಾಡುತ್ತಾ ಬಂದ ಹಳಕಟ್ಟಿ ಫಕೀರಪ್ಪನನ್ನು ಆರ್ಥಿಕ ದುಃಸ್ಥಿತಿ ಕಂಗೆಡಿಸಲಿಲ್ಲ. ಅವರು ಕಾಯದ ಕಳವಳಕ್ಕಂಜಲಿಲ್ಲ; ಮೇಲ್ವಾಯ್ದು ಬಂದ ಎಡರು ತೊಡರುಗಳಿಗೆ ಜಗ್ಗಲಿಲ್ಲ. ಅವರ ಪತ್ನಿಯ ಸಾತ್ವಿಕ ಬೆಂಬಲ ಅವರ ನಿರಂತರ ಅಧ್ಯಯನದ ಚಾಲಕ ಶಕ್ತಿಯಾಯಿತು; ಉತ್ಸಾಹದ ಜೀವದ್ರವ್ಯವಾಗಿ ಮುನ್ನಡೆಸಿತು. ಬಸವಣ್ಣನ ಜನ್ಮಭೂಮಿಯಾದ ಬಿಜಾಪುರ ಪ್ರದೇಶವನ್ನೇ ತಮ್ಮ ಕರ್ಮಭೂಮಿಯಾಗಿ ಆಯ್ದುಕೊಂಡ ಹಳಕಟ್ಟಿ 'ಛಲಬೇಕು ಶರಣಂಗೆ' ಎನ್ನುವ ವಚನದೀಪ್ತಿಯಿಂದ ಪ್ರೇರಿತರಾಗಿ, ಎಂದೂ ಯಾವುದೇ ಬಗೆಯ ವ್ಯಾವಹಾರಿಕ ವಾಸ್ತವ ಕಷ್ಟನಷ್ಟಗಳಿಗೆ ಎದೆಗುಂದದೆ, ತಮ್ಮ ಸಾಹಿತ್ಯ, ಸಮಾಜಸೇವೆ, ನಾಡುನುಡಿ ಕಟ್ಟುವ ಕಾರ್ಯಗಳಲ್ಲಿ ತಮ್ಮನ್ನು ಏಕೋಭಾವದಿಂದ ತೊಡಗಿಸಿಕೊಂಡರು.

ವಕೀಲಿ ವೃತ್ತಿಯ ಎರಡು ದಶಕಗಳ ಹಳಕಟ್ಟಿಯವರ ಅನುಭವ, ಒಂದು ನಿಟ್ಟಿನಲ್ಲಿ ಬಿಜಾಪುರ–ಕೆಲಮಟ್ಟಿಗೆ ಬೆಳಗಾಂವಿ, ಧಾರವಾಡ–ಪ್ರದೇಶದ ವಿವಿಧ ಜನಸಮುದಾಯ, ರೈತ ಕೃಷಿಕರ ಗೋಳು, ವ್ಯಾಪಾರ ದಲ್ಲಾಲಿಗಳ ಮೇಲಾಟ, ವಾಣಿಜ್ಯ ಕ್ಷೇತ್ರದ ದಾರಿದ್ರ್ಯ, ಅಜ್ಞಾನ ಅಶಿಕ್ಷಣ ಮುಂತಾದುವುಗಳ ನಿಕಟ ಪರಿಚಯ ಮಾಡಿಕೊಟ್ಟಿದ್ದರೆ, ಮತ್ತೊಂದು ನಿಟ್ಟಿನಲ್ಲಿ ಕನ್ನಡಿಗರ ಸಂಘಟನೆ, ಸಾಮಾಜಿಕ ಶಿಸ್ತು, ಧಾರ್ಮಿಕ ಶ್ರದ್ಧೆ, ಸಾಹಿತ್ಯ ಪ್ರಸರಣ, ರಾಜಕೀಯ ಪ್ರಜ್ಞೆ ಮತ್ತು ಸಮಕಾಲೀನ ಜೀವನ ಸಮಸ್ಯೆಗಳ ಸೂಕ್ತ ತಿಳುವಳಿಕೆ ಮೊದಲಾದ ವಿವಿಧ ನೆಲೆಗಳಲ್ಲಿ ಶ್ರದ್ಧೆಯಿಂದ ನಿಷ್ಠೆಯಿಂದ ಮತ್ತು ಯಾವುದೇ ವ್ಯಾವಹಾರಿಕ ಲೌಕಿಕ ಪ್ರತಿಫಲಾಪೇಕ್ಷೆಯಿಲ್ಲದೆ, ಪೂರ್ಣಾವಧಿ ಕಾರ್ಯ ಮಾಡಬೇಕಾಗಿರುವ ಅಗತ್ಯತೆಯನ್ನೂ ತೋರಿಸಿಕೊಟ್ಟಿತ್ತು. ಅಂಥ ವ್ಯಕ್ತಿ ಯಾರು? ಎಲ್ಲಿದ್ದಾರು? ಎನ್ನುವ ಚಿಂತೆ ಹಳಕಟ್ಟಿ ಫಕೀರಪ್ಪನವರ ಚಿಂತನೆಯಾಗಿ ಪರಿಣಮಿಸಿತು. ಲೌಕಿಕ ಸುಖ ಸಂಪದಗಳ ಅಪೇಕ್ಷೆಯನ್ನು ಬದಿಗೊತ್ತಿ, ಸದಾ ಕ್ರಿಯಾಶೀಲರಾಗಿದ್ದ ಅವರು, ತಮ್ಮಲ್ಲಿಯೇ ಅಂತಹ ಒಬ್ಬ ವ್ಯಕ್ತಿಯನ್ನು ಅವಕ್ಕಾಗಿ ಸರ್ವಸುಖಸಂಪದಗಳನ್ನು ಹುಲ್ಲುಕಡ್ಡಿಗೆ ಸಮಾನವೆಂದು ಬಗೆದು,

ಶುದ್ಧಚಿತ್ತ ಪರಿಶುದ್ಧ ಮನಸ್ಸು ಮತ್ತು ತ್ಯಾಗಮನೋಭಾವದಿಂದ ಕಾಯಾ ವಾಚಾ ಮನಸಾ ಶ್ರಮಿಸಬಲ್ಲ ಚೈತನ್ಯ ಶಕ್ತಿಯನ್ನು ಕಂಡುಕೊಂಡರು. ಈ ಅಂತರಂಗ ದರ್ಶನವೇ ಅವರ ಸಕಲಸೇವಾ ಸಂಕಲ್ಪಗಳ ಸಾಧನಾಪಥಕ್ಕೆ ಬೆಳಕಾಯಿತೆಂದು ತೋರುತ್ತದೆ. ಆದ್ದರಿಂದ ಎಡೆಬಿಡದ ಆರ್ಥಿಕ ಮುಗ್ಗಟ್ಟು, ಪತ್ನಿಪುತ್ರರು ಅನಾರೋಗ್ಯದಿಂದ ಬಳಲಿದಾಗ ಸರಿಯಾದ ಚಿಕಿತ್ಸೆಗೂ ಉಂಟಾದ ಅಭಾವದ ಪರಿಸ್ಥಿತಿ, ಇಂದು ಆಯಿತು ನಾಳೆ ಮತ್ತೇನು ಎನ್ನುವಂಥ ತಿಕ್ಕಿಮುಕ್ಕುವ ಕಠಿಣ ಸಂದರ್ಭ, ಇದಾವುದೂ ಫಕೀರಪ್ಪನವರನ್ನು ಸಾಮಾಜಿಕ ಧಾರ್ಮಿಕ ಕಾರ್ಯಗಳಿಂದ ವಿಮುಖಗೊಳಿಸಲು ಸಾಧ್ಯವಾಗಲಿಲ್ಲ.

ಕಷ್ಟಕೋಟಲೆಗಳು ಸಾಮಾನ್ಯ ವ್ಯಕ್ತಿಗಳನ್ನು ಕಂಗೆಡಿಸುತ್ತವೆ. ಆದರೆ ಒಂದು ದೃಢ ಸಂಕಲ್ಪದಿಂದ ಕಾರ್ಯಪ್ರವೃತ್ತರಾದ ಅಸಾಮಾನ್ಯ ವ್ಯಕ್ತಿಗಳಿಗೆ ಅವು ಅಧಿಕಶಕ್ತಿ, ಕಾರ್ಯಶ್ರದ್ಧೆಗಳನ್ನು ಒದಗಿಸುತ್ತವೆ. ಹಳಕಟ್ಟಿಯವರಿಗೆ ಪ್ರೇರಕಶಕ್ತಿಯಾಗಿ ಮಾರ್ಗದರ್ಶನ ನೀಡುತ್ತಾ ಬಂದ ಅವರ ಮಾವಂದಿರಾದ ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ ೧೯೩೩ ರಲ್ಲಿ ನಿಧನರಾದದ್ದು ಒಂದು ಸಹಿಸಲಾಗದ ದುಃಖವಾಯಿತು. ಆದರೆ ಹಳಕಟ್ಟಿಯವರು ಕಂಗೆಡದೆ, ತಮ್ಮ ಮಾವಂದಿರು ಬರೆದ ಪತ್ರಗಳನ್ನು ಮತ್ತೆ ಮತ್ತೆ ಓದಿ, ಅವರ ಮಾತುಗಳ ಮನನದಿಂದ ಹೊಸ ಸ್ಫೂರ್ತಿ ಪಡೆಯುತ್ತಿದ್ದರು. ಈ ನಡುವೆ ಅವರ ಹಿರಿಯ ಮಗ ಚಂದ್ರಶೇಖರನಿಗೆ ದಿಲ್ಲಿಯಲ್ಲಿ ದೊಡ್ಡ ಹುದ್ದೆ ದೊರಕಿ ಆದರಿಂದ ಹಳಕಟ್ಟಿಯವರಿಗೆ ಒಂದಷ್ಟು ಮಾನಸಿಕ ನೆಮ್ಮದಿಯಿತ್ತು. ಆದರೆ ಆರ್ಥಿಕ ಸ್ಥಿತಿ ಮಾತ್ರ ಸುಧಾರಿಸಲಿಲ್ಲ. ೧೯೫೦ ಫಕೀರಪ್ಪನವರಿಗೆ ಬಹುದೊಡ್ಡ ಆಘಾತದ ಕಾಲಾವಧಿ. ದಿಲ್ಲಿಯಲ್ಲಿದ್ದ ಚಂದ್ರಶೇಖರ ಹಳಕಟ್ಟಿ, ಅನಿರೀಕ್ಷಿತವಾಗಿ ಕಾಲವಶನಾದ. ಒಂದು ಕ್ಷಣ ಈ ಸುದ್ದಿ ತಿಳಿದು ಸ್ತಂಭೀಭೂತರಾದ ಫಕೀರಪ್ಪ, ಎಲ್ಲವೂ ದೈವೇಚ್ಛೆ ಎಂದು ಭಾವಿಸಿ, ದಿಲ್ಲಿಗೆ ಹೋಗಿ, ತಮ್ಮ ಹೆಮ್ಮೆಯ ಪುತ್ರನ ಅಂತ್ಯಕ್ರಿಯೆ ಮುಗಿಸಿ, ಬಿಜಾಪುರಕ್ಕೆ ಮರಳಿ, ಮತ್ತೆ ತಮ್ಮ ಸಾಮಾಜಿಕ ಕಾರ್ಯದಲ್ಲಿ ಮಗ್ನರಾದರು. ತಮ್ಮ ಮುದ್ರಣಾಲಯದ ಕೆಲಸಗಾರರು, ಮುದ್ರಿತವಾಗುತ್ತಿದ್ದ ಗ್ರಂಥಗಳ ಕರಡು ತಿದ್ದಿ ಅಂತಿಮ ಅಚ್ಚು ಅಣಿಗೊಳಿಸಿ ಮುದ್ರಿಸುವುದು, ಶಿಕ್ಷಣ ಸಂಸ್ಥೆಗಳ ಉಸ್ತುವಾರಿ, ತಾವೇ ಹುಟ್ಟು ಹಾಕಿದ ಸಾರ್ವಜನಿಕ ಸಹಕಾರ, ಬ್ಯಾಂಕಿಂಗ್, ವಾಣಿಜ್ಯ ಸಂಸ್ಥೆಗಳ ಮೇಲ್ವಿಚಾರಣೆಗಳಲ್ಲಿ ತಮಗಾದ ಆಘಾತವನ್ನು ಮರೆಯುತ್ತಾ ಬಂದರು. ಅಂಥ ಉನ್ನತ ಹುದ್ದೆಯಲ್ಲಿದ್ದ ಮಗ ಹೀಗೆ ಅಕಾಲ ಮೃತ್ಯುವಿಗೆ ತುತ್ತಾದಾಗ ಅವರಿಗೆ ಸಾಂತ್ವನ ಹೇಳಲು ಬಂದ ಹಿತೈಷಿಗಳಿಗೆ 'ಶಿವನ ಸೊಮ್ಮು ಶಿವನಿಗೆ ಸಂದಿತು' ಎಂದು ಉತ್ತರಿಸಿ ಮತ್ತೆ ಸಂಶೋಧನಾ ಕಾರ್ಯ–ಚರ್ಚೆಗಳಲ್ಲಿ ತೊಡಗುತ್ತಿದ್ದರು. ವ್ಯಕ್ತಿಗತ ಜೀವನದಲ್ಲಿ ಆದ ಸಾವುನೋವುಗಳಿಂದ ಮನುಷ್ಯ ಕಂಗೆಟ್ಟು, ತನ್ನ ಕಾರ್ಯನಿಷ್ಠೆಯನ್ನು ಜೀವನಶ್ರದ್ಧೆಯನ್ನು ಎಂದೂ ಕಳೆದುಕೊಳ್ಳ ಬಾರದು. ಬಂದದ್ದೆಲ್ಲಾ ಬರಲಿ ಎಂದು ಅದನ್ನು ಒಪ್ಪಿಕೊಂಡು ತನ್ನ ಪಾಲಿನ

ಕರ್ತವ್ಯವನ್ನು ನಿರ್ವಂಚನೆಯಿಂದ ನೆರವೇರಿಸಬೇಕು. ತನ್ನ ಸಂಕಲ್ಪಗಳಿಗೆ ಸಿದ್ಧಿಯ ಪ್ರಾಣವಾಯು ತುಂಬಬೇಕು ಎನ್ನುವುದು, ಹಳಕಟ್ಟಿಯವರ ಜೀವನದ ಧೋರಣೆ ಯಾಗಿತ್ತು. ೧೯೨೧ ರ ಚಿಕ್ಕಮಗಳೂರಿನ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹಳಕಟ್ಟಿ ಫಕೀರಪ್ಪ ವಚನ ಸಾಹಿತ್ಯದ ಹಿರಿಮೆ ಕುರಿತು ಮಾಡಿದ ಉಪನ್ಯಾಸ, ಅವರ ಆಳವಾದ ಅಧ್ಯಯನ ಮತ್ತು ಚಿಂತನೆಗಳ ದ್ಯೋತಕವಾಗಿತ್ತು. ೧೯೦೩–೦೪ ರಲ್ಲಿ ವಕೀಲಿವೃತ್ತಿ ಆರಂಭಿಸಿ, ಕ್ರಿಯಾಶೀಲರಾಗಿ ಧರ್ಮ, ಸಾಹಿತ್ಯ, ಸಮಾಜ, ಸಂಶೋಧನೆ, ವಾಣಿಜ್ಯ, ರಾಜಕೀಯ, ಶಿಕ್ಷಣ, ವೃತ್ತಪತ್ರಿಕೆ, ಬ್ಯಾಂಕಿಂಗ್, ಕೃಷಿ ಮುಂತಾದ ಜೀವನದ ವಿವಿಧ ನೆಲೆಗಳಲ್ಲಿ ವ್ಯಾಪಕವಾದ ಸಾರ್ಥಕ ಸೇವೆ ಸಲ್ಲಿಸಿದ ಹಳಕಟ್ಟಿ ಫಕೀರಪ್ಪನವರಿಗೆ ಅನೇಕ ಗೌರವ ಮನ್ನಣೆಗಳು ಬೆನ್ನಟ್ಟಿ ಬಂದುವು

ಸುಮಾರು ಆರು ದಶಕಗಳ ಕಾಲ ವಕೀಲಿವೃತ್ತಿ ಮೊದಲುಗೊಂಡು ವಚನಸಾಹಿತ್ಯ ಸಂಶೋಧನೆ, ಧಾರ್ಮಿಕ, ರಾಜಕೀಯ, ಸಾಮಾಜಿಕ ಸಂವಹನಗಳವರೆಗೆ – ೧೯೦೪ ರಿಂದ ೧೯೬೪ – ತಮ್ಮ ಬಹುಮುಖದ ಅಖಂಡ ಸೇವೆ ಸಲ್ಲಿಸಿದ ಹಳಕಟ್ಟಿ ಫಕೀರಪ್ಪನವರಿಗೆ, ಬೆನ್ನಹಿಂದಿನ ಬೆಂಬಲ ಶಕ್ತಿಯಾಗಿ, ಕಣ್ಣಮುಂದಿನ ಬೆಳಕಾಗಿ, ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ಸಾಗಿದವರು, ಅವರ ಪತ್ನಿ ***ಶ್ರೀಮತಿ ಭಾಗೀರಥಿ ದೇವಿ*** ಅವರು. ಹಳಕಟ್ಟಿಯವರ ತಂದೆಯ ಸ್ಥಾನದಲ್ಲಿದ್ದು ಸದಾ ಚೈತನ್ಯದ ಚಿಲುಮೆಯಾಗಿ ಪ್ರೇರಕಶಕ್ತಿಯಾಗಿದ್ದ ಅವರ ಮಾವ ತಮ್ಮಣ್ಣಪ್ಪ ಚಿಕ್ಕೋಡಿ ಕಾಲವಶರಾದ ಬಳಿಕ, ತಂದೆ ತಮ್ಮಣ್ಣಪ್ಪ ತನ್ನ ಪತಿ ಹಳಕಟ್ಟಿಯವರ ಬಗೆಗೆ ಇಟ್ಟುಕೊಂಡಿದ್ದ ಹತ್ತಾರು ಆಶೆ ಆಕಾಂಕ್ಷೆಗಳನ್ನು ಭಾಗೀರಥಿಬಾಯಿ ಚೆನ್ನಾಗಿ ಅರಿತಿದ್ದರು. ಸಂಸಾರದ ಯಾವುದೇ ವ್ಯಾವಹಾರಿಕ ಅಡ್ಡಿ ಆತಂಕಗಳ ಭಾರವನ್ನು ತಾವೇ ಹೊತ್ತು ನಿಭಾಯಿಸಿ, ತಮ್ಮ ಪತಿಯ ವಿವಿಧ ಸೇವಾಕಾರ್ಯಗಳಲ್ಲಿ ಸಹಕಾರ, ಸತ್ಪ್ರೇರಣೆ ನೀಡುತ್ತಾ ಬಂದರು. ಒಂದು ಜೀವ ಎರಡು ದೇಹ ಎನ್ನುವಷ್ಟರ ಮಟ್ಟಿಗೆ ಭಾಗೀರಥಿದೇವಿ, ತಮ್ಮ ಎಲ್ಲ ಶಕ್ತಿ ಪರಿಶ್ರಮಗಳನ್ನು ತಮ್ಮ ಪತಿಯ ಕಾರ್ಯಗಳಿಗಾಗಿಯೇ ಧಾರೆಯೆರೆದಿದ್ದರು. ಕೆಲ ಕಾಲ ಅನಾರೋಗ್ಯದಿಂದ ಬಳಲಿದ ಹಳಕಟ್ಟಿಯವರ ಪತ್ನಿ ಭಾಗೀರಥಿದೇವಿ ೨೫.೫.೧೯೬೪ ರಲ್ಲಿ ಕೊನೆಯುಸಿರೆಳೆದಾಗ, ಜನ, 'ಆ ತಾಯಿ ಪುಣ್ಯ ಮಾಡಿದ್ದಳು. ಅಂತೆಯೇ ತನ್ನ ಗಂಡನೆದುರೇ ಹೇಳಿ ಕೇಳಿ ಕಣ್ಮರೆಯಾದಳು; ಮುತ್ತೈದೆ ಸಾವು ಪಡೆದಳು' ಎಂದು ಭಾಗೀರಥಿ ದೇವಿಯ ಸಾರ್ಥಕ ಜೀವನವನ್ನು ಹೊಗಳಿದರು.

ತಮ್ಮ ನೆರಳಾಗಿ, ನಿರಂತರ ಪ್ರೇರಕ ಶಕ್ತಿಯಾಗಿದ್ದ ಪತ್ನಿ ಭಾಗೀರಥಿದೇವಿಯ ಸಾವು, ಹಳಕಟ್ಟಿಯವರಿಗೆ ಸಹಿಸಲಾಗದ ಯಾತನೆಯನ್ನು ನೀಡಿತು. ಸುಖ ದುಃಖಗಳನ್ನು ಮೀರಿದ ವ್ಯಕ್ತಿತ್ವ ಪಡೆದ ಶರಣ ಸಂತರ ನಿಲವು ಹಳಕಟ್ಟಿ ಯವರದಾಗಿತ್ತು. ಎಲ್ಲವನ್ನೂ ಸಮಾಧಾನಚಿತ್ತರಾಗಿ ನುಂಗಿ ಮೌನಿಯಾದರು. ಅವರಿಗೆ ತಮ್ಮ ಚೈತನ್ಯಶಕ್ತಿ ಉಡುಗಿಹೋದಂತಾಯಿತು. ತಮ್ಮ ಪಾಲಿಗೆ ಬಂದ

ಕಾಯಕವನ್ನು ಈ ಲೋಕದ ಮಣಿಹವನ್ನು ಶ್ರದ್ಧೆ ಭಕ್ತಿ ಪ್ರಾಮಾಣಿಕತೆಗಳಿಂದ ಪೂರೈಸಿದ ಹಳಕಟ್ಟಿ ಫಕೀರಪ್ಪ, ತಮ್ಮ ಪತ್ನಿಯ ಮರಣಾನಂತರ ಒಂದು ತಿಂಗಳ ಕಾಲಾವಧಿಯಲ್ಲಿಯೇ ದಿ. ೨೯.೬.೧೯೬೪ ರಲ್ಲಿ ಇಹಲೋಕಯಾತ್ರೆ ಮುಗಿಸಿದರು; ಕರ್ನಾಟಕ ಸಾಹಿತ್ಯ ಸಂಸ್ಕೃತಿ ಸಂವರ್ಧನೆಯ ಹೊಸದಾರಿ ತೆರೆದು ತೋರಿದರು.

# ೩. ವಚನ ಸಾಹಿತ್ಯ ಸಂಶೋಧನ ಪಿತಾಮಹ

ವಿಜ್ಞಾನ ಮತ್ತು ಸಾಹಿತ್ಯಗಳ ವಿದ್ಯಾರ್ಥಿಯಾಗಿದ್ದ ಹಳಕಟ್ಟಿಯವರು, ಯಾವುದೇ ಕಾರ್ಯ ಮಾಡುವ ಪೂರ್ವದಲ್ಲಿ, ಅದರ ಮಹತ್ವ ಕುರಿತು ಹತ್ತಾರು ಮಗ್ಗಲುಗಳಿಂದ ಆಲೋಚಿಸುವ, ಚರ್ಚಿಸುವ ಮತ್ತು ಸ್ವರೂಪಜ್ಞಾನ ಗ್ರಹಿಸುವ ವಿಶಿಷ್ಟ ವ್ಯಕ್ತಿತ್ವ ಪಡೆದಿದ್ದರು; ಒಬ್ಬ ಸಮಷ್ಟಿ ದೃಷ್ಟಿಯ ವಿಚಾರವಾದಿಯಾಗಿದ್ದರು.

ಯಾವುದೇ ಕಾಲದ ಸಮಾಜದಲ್ಲಿ ಕಂಡುಬರುವ ಸಮಸ್ಯೆಗಳ ಆಳ ಮತ್ತು ವ್ಯಾಪ್ತಿಗಳನ್ನು ಸಮಗ್ರವಾಗಿ ಗಮನಿಸುವುದು ಮತ್ತು ಸ್ವಸ್ಥಚಿತ್ತದಿಂದ ಅವುಗಳ ಪರಿಹಾರ ಮಾರ್ಗವನ್ನು ಹಂತ ಹಂತವಾಗಿ ರೂಪಿಸುವುದು, ಒಬ್ಬ ಕ್ರಿಯಾಶೀಲ ವಿಚಾರವಾದಿಯ ಮುಖ್ಯ ಗುಣಲಕ್ಷಣಗಳಾಗಿರುತ್ತವೆ. ಅಂಥ ವಿಚಾರವಾದಿ ಅನ್ಯಭಾಷಾ ಪ್ರಭಾವ ವ್ಯಾಮೋಹ, ಅನ್ಯಸಂಸ್ಕೃತಿಗಳ ಅಂಧಾನುಕರಣೆಗಳಲ್ಲಿ ಹುದುಗಿರುವ ಪ್ರೇರಕಾಂಶಗಳನ್ನು ತಲಸ್ಪರ್ಶಿಯಾಗಿ ಗಮನಿಸುತ್ತಾನೆ. ದೋಷಾರೋಪಣೆಯ ಹಾದಿಯನ್ನು ತ್ಯಜಿಸಿ, ಪರಿಹಾರದ ಬೇರಿಗೆ ಕೈಹಾಕುತ್ತಾನೆ. ಅನವಶ್ಯಕ ಗೊಂದಲ, ಅನಿರೀಕ್ಷಿತ ಗೋಜಲುಗಳನ್ನು ಹುಟ್ಟು ಹಾಕದೆ, ಸಾವಧಾನಚಿತ್ತದಿಂದ ಸಮಸ್ಯೆಗೆ ಸಂಬಂಧಿಸಿದ ಸಿಕ್ಕುಗಳನ್ನು ಬಿಡಿಸುವ ಹಿನ್ನೆಲೆಯ ಅಗತ್ಯ ಸೇವಾಕಾರ್ಯಗಳನ್ನು ಕೈಕೊಳ್ಳುತ್ತಾನೆ. ಅನ್ಯಭಾಷೆ, ಸಾಹಿತ್ಯ, ಧರ್ಮ ಸಂಸ್ಕೃತಿಗಳ ಹಿರಿಮೆಯ ಬೆಳಕಿನಲ್ಲಿ, ತನ್ನ ಭಾಷೆ, ಸಾಹಿತ್ಯ, ಧರ್ಮ ಸಂಸ್ಕೃತಿಗಳ ಔನ್ನತ್ಯ ವೈಶಿಷ್ಟ್ಯಗಳನ್ನು ಪರಿಚಯಿಸುವ, ಅನನ್ಯ ಗುಣಲಕ್ಷಣಗಳನ್ನು ಅನಾವರಣಗೊಳಿಸುವ ಸೃಜನಶೀಲ ಸಂಶೋಧನೆ, ಅನ್ವೇಷಣೆ, ವಿಶ್ಲೇಷಣಗಳನ್ನು ಸಾಧಿಸಿ ತೋರಿಸುತ್ತಾನೆ. ಈ ಮಾತು ಹಳಕಟ್ಟಿಯವರಿಗೆ ನೇರವಾಗಿ ಅನ್ವಯಗೊಳ್ಳುವಂಥವು. ಫ.ಗು.ಹಳಕಟ್ಟಿ ಕಾರ್ಯೋನ್ಮುಖರಾದ ಅಂದಿನ ಕನ್ನಡನಾಡಿನ ಸ್ಥಿತಿಗತಿಗಳನ್ನು ಗಮನಿಸಿದರೆ ಮತ್ತು ಅಂದು ಅವರು ಮಾಡಿದ ವಿವಿಧ ನೆಲೆಗಳ ಅವಿರತ ಸೇವೆ ಪರಿಶ್ರಮಗಳು, ಅದರಲ್ಲೂ ವಿಶೇಷವಾಗಿ ವಚನ ಸಾಹಿತ್ಯದ ವ್ಯಾಪಕ ಸಂಶೋಧನೆಗಳನ್ನು ಪರಿವೀಕ್ಷಿಸಿದರೆ, ಪ್ರತಿಯೊಂದು ಕಾಲ, ಮಹತ್ವದ ಕಾರ್ಯಸಾಧನೆಗಾಗಿ, ಒಬ್ಬ ವಿಶೇಷ ವ್ಯಕ್ತಿಯನ್ನು ಆಯ್ದುಕೊಳ್ಳುತ್ತದೆ. ಮತ್ತು ಅಂಥ ವ್ಯಕ್ತಿ, ತನ್ನ ವ್ಯಕ್ತಿತ್ವದ ಸರ್ವ ಶಕ್ತಿಗಳನ್ನು ಆ ಕಾರ್ಯಕ್ಕಾಗಿ

ಧಾರೆಯೆರೆಯುತ್ತಾನೆ; ನಾಡಿನ ಚರಿತ್ರೆಯಲ್ಲಿ ಚಿರಂತನವಾಗಿ ಉಳಿಯುವಂಥ ಸುವರ್ಣಪುಟ ನಿರ್ಮಿಸುತ್ತಾನೆ ಎನ್ನುವ ಮಾತು ಸತ್ಯ. ಶ್ರೀ ಹಳಕಟ್ಟಿ ಅಂಥ ಒಬ್ಬ ಅಪೂರ್ವ ವ್ಯಕ್ತಿ; ಚರಿತ್ರೆಯಲ್ಲಿ ಸುವರ್ಣಪುಟ ರಚಿಸಿದ ವಿಶಿಷ್ಟ ಶಕ್ತಿ.

ಕನ್ನಡನಾಡಿನ ಅಂದಿನ ಪರಿಸ್ಥಿತಿಯಲ್ಲಿ ಯಾವುದೇ ಒಂದು ಸಮಸ್ಯೆ, ಹಳಕಟ್ಟಿಯವರಿಗೆ ಪ್ರತ್ಯೇಕ ಪ್ರತ್ಯೇಕವೆಂದು ತೋರಲಿಲ್ಲ; ಚದುರಿಹೋಗಿದ್ದ ಕನ್ನಡನಾಡಿನ ನೆಲಜಲ, ಭಾಷೆ, ಸಾಹಿತ್ಯ, ಕೃಷಿ, ವ್ಯಾಪಾರ, ಉದ್ದಿಮೆ, ಸಮಾಜ, ಧರ್ಮ ಇತ್ಯಾದಿ ಪರಸ್ಪರ ತಳುಕುಹಾಕಿಕೊಂಡ ಸಮಸ್ಯೆಗಳಾಗಿ ತೋರಿದುವು. ಒಂದು ಪ್ರದೇಶದ ಸರ್ವಾಂಗೀಣ ಅಭಿವೃದ್ಧಿ ಎನ್ನುವುದು ಏಕಕಾಲಕ್ಕೆ ಆದರ ಆರ್ಥಿಕ ಮತ್ತು ಸಾಂಸ್ಕೃತಿಕ ನೆಲೆಗಳ ಅಭಿವೃದ್ಧಿ. ಒಂದು ನಾಡಿಗೆ ಸಂಬಂಧಿಸಿದಂತೆ ಎಲ್ಲ ಕ್ಷೇತ್ರಗಳ ಆರ್ಥಿಕ ವಿಕಾಸವಾಗದೆ, ಆದರ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಾಗದು; ಜಡಗಟ್ಟಿದ ಜನಸಮುದಾಯದ ಆಂತರಿಕ ಅಭೀಪ್ಸೆಗಳ ಜಾಗರಣ ಮತ್ತು ಒಟ್ಟು ಬದುಕಿನ ಸಾಂಸ್ಕೃತಿಕ ಪುನರುತ್ಥಾನ ಸಾಧ್ಯವಾಗುವುದಿಲ್ಲ. ಹಳಕಟ್ಟಿ ಫಕೀರಪ್ಪ ಈ ನಾಡಿನ ಪರಸ್ಪರಾವಲಂಬಿ ಸಮಸ್ಯೆಗಳನ್ನು ಸಮಗ್ರ ರೂಪದಲ್ಲಿ ಗುರುತಿಸಿದಾಗ, ಒಂದು ಕ್ಷಣ ಅವರು ದಿಙ್ಮೂಢರಾದರು. ಆದರೆ ಅವರು ಧೃತಿಗೆಡಲಿಲ್ಲ. ಸಮಸ್ಯೆಗಳ ಸ್ವರೂಪ ವ್ಯಾಪ್ತಿಗಳನ್ನು ಸ್ಫುಟವಾಗಿ ಗ್ರಹಿಸಿದ ಅವರ ತಾರ್ಕಿಕ ವೈಚಾರಿಕ ಮನಸ್ಸು, ದೃಢಸಂಕಲ್ಪದಿಂದ ಕಾರ್ಯೋನ್ಮುಖವಾಯಿತು. ಆದ್ದರಿಂದ ಅವರು ಆಯ್ದುಕೊಂಡದ್ದು ನ್ಯಾಯವಾದ, ಕೃಷಿಕಾರ್ಮಿಕ, ಸಹಕಾರ, ವ್ಯಾಪಾರ ಉದ್ದಿಮೆ, ಶಿಕ್ಷಣ, ಬ್ಯಾಂಕಿಂಗ್ ಮತ್ತು ಜನಾಭಿಪ್ರಾಯ ರೂಪಿಸುವಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುವ ವೃತ್ತಪತ್ರಿಕೆ ಮುಂತಾದ ಸೇವಾನೆಲೆಗಳು. ಇವೆಲ್ಲಕ್ಕೆ ಕಳಸವಿಟ್ಟಂತೆ, ಕನ್ನಡ ನಾಡಿನಲ್ಲಿ ಜರುಗಿದ್ದ ಜಾಸಾಂಗಿಕ ಕ್ರಾಂತಿಯ ವಿರಳ ಕಾಲಘಟ್ಟಕ್ಕೆ ಕವಿದಿದ್ದ ವಿಸ್ಮೃತಿಯ ಕಾರ್ಮೋಡ ಚದುರಿಸಿದ್ದು ಮತ್ತು ಅಂದಿನ ಧಾರ್ಮಿಕ ಸಾಮಾಜಿಕ ಬದ್ಧತೆಯ ಅಪೂರ್ವ ಸಾಹಿತ್ಯ ಪರಂಪರೆಯ ಸಂಶೋಧನೆ, ಪ್ರಕಟನೆ ಪ್ರಸರಣ, ಕಾರ್ಯಕ್ಕೆ ಕಂಕಣಬದ್ಧರಾದದ್ದು; ತನ್ಮೂಲಕ ಒಂದು ಮಹತ್ವದ ಸಾಂಸ್ಕೃತಿಕ ಪುನರುಜ್ಜೀವನದ ಅಚಲ ಸಂಕಲ್ಪ ಒಡಮೂಡಿದ್ದು. ಹೀಗೆ ಅವರಲ್ಲಿ ಮೂಡಿದ್ದ ಸಂಕಲ್ಪಕ್ಕೆ, ಅವರ ಪ್ರವೃತ್ತಿಗೆ ಸಹಜವಾಗಿದ್ದ ಸಾತ್ವಿಕತೆ, ಅಧ್ಯಯನಶೀಲ ಗುಣ ಮತ್ತು ಅನ್ವೇಷಣೆಯ ಮನೋಭಾವನೆಗಳು ಪ್ರೇರಕವಾದುವು.

ಹಳಕಟ್ಟಿಯವರು ೧೯೨೦ ರ ಸುಮಾರು ಒಂದು ಸಾವಿರದಷ್ಟು ವೀರಶೈವ ಕಾವ್ಯ ಮತ್ತು ವಚನ ಸಾಹಿತ್ಯದ ಹಸ್ತಪ್ರತಿಗಳನ್ನು ತಮ್ಮಲ್ಲಿ ಸಂಗ್ರಹಿಸಿದ್ದರು. ವಚನಗಳನ್ನು ಅಭ್ಯಾಸ ಮಾಡುತ್ತ ಹೋದಂತೆ, ಅವರಿಗೆ ಗುಪ್ತನಿಧಿಯೊಂದು ಅನಿರೀಕ್ಷಿತವಾಗಿ, ತಮಗೆ ಮಾತ್ರ ದೊರೆತ ಅಪರಿಮಿತ ಆನಂದ. ವಚನಗಳ ಸರಳ, ಸ್ಫುಟ ಗಂಭೀರ ಶೈಲಿ, ವಿಚಾರ ಆಧ್ಯಾತ್ಮಿಕತೆಗಳ ಮಾಂತ್ರಿಕಶಕ್ತಿಗೆ ಪರವಶರಾದ ಅವರು ಬರುಬರುತ್ತಾ ತಮ್ಮ ವಕೀಲಿ ವೃತ್ತಿಯಿಂದ ದೂರ ಸರಿಯುತ್ತ ನಡೆದರು.

ಯಾವಾಗಲೂ ಇಲ್ಲ ವಚನ ಓದುವುದು, ಪ್ರತಿ ಮಾಡುವುದು, ಇಲ್ಲ ವ್ಯಾಖ್ಯೆ ಟಿಪ್ಪಣಿ ಸಿದ್ಧಗೊಳಿಸುವುದು. ಹೀಗೆ ವಚನ ಸಾಹಿತ್ಯದ ಸಂಶೋಧನಾ ಕಾರ್ಯ ಮುಂದುವರಿಯಿತು. ೧೯ ನೆಯ ಶತಮಾನದ ಕೊನೆ ಮತ್ತು ೨೦ ನೆಯ ಶತಮಾನದ ಮೊದಲ ಕಾಲು ಶತಮಾನದ ಅವಧಿಯಲ್ಲಿ ಪ್ರಕಟಿತ ಕೆಲ ಕೃತಿಗಳ, ಒಂದು ಸ್ಥೂಲ ಪರಿಚಯ ಇಲ್ಲಿ ಪ್ರಸ್ತುತವಾದೀತು. ಅವುಗಳಲ್ಲೇ ಕೆಲವು: ***ಅಪ್ರಮಾಣ ಕೂಡಲಸಂಗಮದೇವ*** ಅಂಕಿತದ ಬಾಲಸಂಗಯ್ಯನ ೩೫ ವಚನಗಳನ್ನೊಳಗೊಂಡ ***'ಶಿಖಾರತ್ನ ಪ್ರಕಾಶ'*** (೧೮೮೩ ಮತ್ತು ೧೯೮೭), ನಿಷ್ಕಳಂಕ ಶಿವಾನಂದಯೋಗಿಯ ***ನಿಃ ಕಲರ ವಚನ*** (೧೮೮೫), ಬಳ್ಳಾರಿಯಲ್ಲಿ ಪ್ರಕಟಗೊಂಡ **ತೋಂಟದ ಸಿದ್ಧಲಿಂಗ ಯತಿ**ಯ ವಚನಗಳು, ಅಂಬಿಗರ ಚೌಡಯ್ಯನ ಕೆಲವು ವಚನ ಮತ್ತು ಐದು ಜೋಗುಳಪದ ಸೇರಿದ, ***ಅಖಂಡೇಶ್ವರ ವಚನ*** (೧೮೮೭); ***ಮೌನೇಶ್ವರ ವಚನಶಾಸ್ತ್ರ ಬಸವಣ್ಣನವರ ವಚನಗಳು***(೧೮೮೯–೧೯೬೫), ***ಅಖಂಡೇಶ್ವರ ವಚನಶಾಸ್ತ್ರ*** (೧೯೬೫) ಮುಂತಾದುವು ಅಲ್ಲಲ್ಲಿ ಪುಸ್ತಕರೂಪದಲ್ಲಿ ಹೊರಬಂದ ಕೆಲವು ವಚನ ಸಾಹಿತ್ಯ ಕೃತಿಗಳು. ಮುದ್ರಣಯಂತ್ರ ಆವಿಷ್ಕಾರಗೊಂಡ ಬಳಿಕ, ವಚನ ಸಾಹಿತ್ಯದ ಪ್ರಕಟನೆಯ ಕಾರ್ಯ ತ್ವರಿತಗೊಂಡಂತೆ ಕಾಣುತ್ತದೆ. ***ಬಸವಣ್ಣನವರ ವಚನಗಳು*** ಮೊದಲು ೧೮೮೯ ರಲ್ಲಿ ಪ್ರಕಟವಾದದ್ದು, ೧೯೬೫ ರ ವೇಳೆಗೆ ತೃತೀಯ ಮುದ್ರಣ ಕಂಡಿತು. ಇದರಲ್ಲಿ ೬೬೩ ಬಸವಣ್ಣನವರ ವಚನಗಳು ಮುದ್ರಿತಗೊಂಡಿದ್ದುವು. ಮದ್ರಾಸ ಗ್ರಂಥ ರತ್ನಾಕರ ಮುದ್ರಣಶಾಲೆಯಲ್ಲಿ ***ಅಖಂಡೇಶ್ವರ ವಚನಶಾಸ್ತ್ರ*** ಎರಡು ಬಾರಿ (೧೯೬೦–೧೯೬೫) ಮುದ್ರಿತಗೊಂಡು ಹೊರಬಂದಿತು. ಇವುಗಳಲ್ಲಿ ಕೆಲವು ಎರಡು–ಮೂರು ಮರುಮುದ್ರಣ ಕಂಡಿದ್ದು, ಜನ ಈ ಸಂಕಲನಗಳನ್ನು ಓದಿ ಮನನ ಮಾಡಿಕೊಳ್ಳುತ್ತಿದ್ದರು ಮತ್ತು ವಚನ ಸಾಹಿತ್ಯ ಜನಪ್ರಿಯವಾಗತೊಡಗಿತ್ತು ಎನ್ನುವ ಅಂಶವನ್ನು ಎತ್ತಿತೋರಿಸುತ್ತಿದೆ.

೧೯ ನೆಯ ಶತಮಾನದಲ್ಲಿಯೇ ಜನರಲ್ಲಿ ವಚನ ಸಾಹಿತ್ಯ ಕುರಿತಾದ ಆಸಕ್ತಿ ಮೂಡಿತ್ತು; ಮತ್ತು ಪ್ರಕಾಶನ ಚಟುವಟಿಕೆಗಳು ನಡೆದಿದ್ದವು ಎನ್ನುವುದು ನಿಜ. ಆದರೆ ಈ ಯಾವುದೇ ಪ್ರಕಟನೆಗಳಿಗೆ ಒಂದು ವಿಧಾನ, ಸಂಪಾದನೆಯ ಶಿಸ್ತು, ಕ್ರಮ, ಟಿಪ್ಪಣಿಗಳ ಒಪ್ಪ ಓರಣ, ಸಾಹಿತ್ಯ ಸ್ವರೂಪ, ಧಾರ್ಮಿಕ ವೈಶಿಷ್ಟ್ಯ, ಭಾಷೆ ಶೈಲಿಗಳ ವಿವೇಚನೆ, ಸಾಮಾಜಿಕ ಮೌಲ್ಯ ಕುರಿತ ವಿಶೇಷ ವ್ಯಾಖ್ಯೆ ಇತ್ಯಾದಿಗಳೊಂದೂ ಸಂಗತವಾಗಿರಲಿಲ್ಲ; ಇನ್ನು ಸಂಶೋಧನೆ, ಸಂಪಾದನೆ, ವೈಚಾರಿಕತೆ, ವಿಮರ್ಶೆ, ವಿಶ್ಲೇಷಣೆಗಳ ಮಾತಂತೂ ದೂರ. ಆದರೆ ಹಳಕಟ್ಟಿಯವರು ಈ ವಚನ ಸಾಹಿತ್ಯದ ವ್ಯಾಪಕ ಸಂಗ್ರಹಣ, ಅಧ್ಯಯನ ವಿವೇಚನೆಗಳ ಕಾರ್ಯ ಕೈಕೊಳ್ಳುವ ಪೂರ್ವದಲ್ಲಿ ಜನರಿಗೆ ಈ ಬಗೆಯ ಸಾಹಿತ್ಯದ – ಅಷ್ಟಿಷ್ಟು – ಪರಿಚಯ ತಿಳುವಳಿಕೆ ಮಾತ್ರ ಇತ್ತೆಂದು ಹೇಳಬಹುದು. ಶ್ರೀ ಹಳಕಟ್ಟಿಯವರು ವಚನದ ಕಟ್ಟುಗಳನ್ನು ಓದುತ್ತಾ ಹೋದಂತೆ, ತಮಗೇ ತೋಚಿದ ಸಂದೇಹ ಸಂದಿಗ್ಧತೆಗಳ ಪರಿಹಾರಕ್ಕೆ, ಓದಿದ ವಚನಗಳನ್ನು ಮತ್ತೆ ಮತ್ತೆ ಓದುವುದು, ಎಲ್ಲೋ

ಹೊಳೆದ ಪಾಠಾಂತರಗಳನ್ನು ಪಟ್ಟಿಮಾಡಿ ಅಂತ್ಯಪಾತ ಬರೆದಿಡುವುದು; ಸಾಮಾಜಿಕ ಮೌಲ್ಯಗಳ ಸ್ಥೂಲ ಹೊಳಹು, ವಚನಗಳಲ್ಲಿ ಹುದುಗಿದ ತಾತ್ವಿಕ ಸೈದ್ಧಾಂತಿಕ ನಿಲವು, ವಚನಗಳು ಪ್ರತಿಪಾದಿಸುವ ಧಾರ್ಮಿಕ ಆಧ್ಯಾತ್ಮಿಕ ರೀತಿ ನೀತಿ ಮತ್ತು ವಾಸ್ತವ ಜೀವನಕ್ಕೆ ಅವುಗಳ ಅನ್ವಯ – ಹೀಗೆ ಹಳಕಟ್ಟಿಯವರ ವಚನಗಳ ಎಡೆಬಿಡದ ಒದು ಆಸಕ್ತಿ, ಅಧ್ಯಯನಕ್ಕೆ ತಿರುಗಿತು. ಅಧ್ಯಯನ ಟಿಪ್ಪಣಿ, ವ್ಯಾಖ್ಯೆ, ತಾತ್ವಿಕ ವಿವೇಚನೆಗಳು, ವೈಚಾರಿಕ ತಾರ್ಕಿಕ ಸ್ಪಷ್ಟತೆಗೆ ಸೂಚಿಯಾದವು. ಅವರ ವ್ಯಕ್ತಿತ್ವದ ವೈಚಾರಿಕ ಸ್ಫುಟತೆ ವಚನಗಳ ವ್ಯಾಪಕ ಸೈದ್ಧಾಂತಿಕ ವಿಶ್ಲೇಷಣೆಯೊಡನೆ ಮೈಗೂಡಿ ಅವರೊಬ್ಬ ಸತ್ಯಶೋಧಕರಾದರು; ಸಂಶೋಧಕರಾದರು. ೧೯೨೦–೨೧ ರ ಅವಧಿಗೆ ಅನೇಕ ವಚನಗಳನ್ನು ಒಂದು ಕ್ರಮಕ್ಕೆ ಒಳಪಡಿಸಿದ ಹಳಕಟ್ಟಿ ಅವುಗಳಿಗೆ ಸಂಬಂಧಿಸಿದಂತೆ ವರ್ಗೀಕರಣ, ಅಗತ್ಯವಾದ ಟೀಕೆ ಟಿಪ್ಪಣಿ ಸಾಮಾಜಿಕ ಬದ್ಧತೆ, ಆಧ್ಯಾತ್ಮಿಕ ಹಿರಿಮೆ ಇತ್ಯಾದಿಗಳನ್ನು ಜೋಡಿಸಿ ಒಂದು ಹಸ್ತಪ್ರತಿ ರೂಪ ಸಿದ್ಧಗೊಳಿಸಿದರು. ಬಿಡುವಿಲ್ಲದ ಈ ಕಾರ್ಯ, ದಣಿವರಿಯದ ಅವರ ವಿಧಾನಗಳು ಹಳಕಟ್ಟಿಯವರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟುಮಾಡಿದುವು. ವಿಷಮಜ್ವರದಿಂದ ಬಳಲುತ್ತಿದ್ದ ಹಳಕಟ್ಟಿಯವರನ್ನು ಕಾಣಲು ಅವರ ಮಾವಂದಿರಾದ ಶ್ರೀ ತಮ್ಮಣ್ಣಪ್ಪ ಧಾವಿಸಿ ಬಂದರು. ಹಳಕಟ್ಟಿಯವರಿಗೆ ತಾವು ಮಾಡುತ್ತಿರುವ ಕಾರ್ಯವನ್ನು ತಮ್ಮ ಮಾವನಿಗೆ ತೋರಿಸುವ ಕಾತರ. ತಮ್ಮ ಆರೋಗ್ಯವನ್ನೂ ಲಕ್ಷಿಸದೆ ಅನನ್ಯ ನಿಷ್ಠೆಯಿಂದ ಸಿದ್ಧಮಾಡಿದ **ವಚನಶಾಸ್ತ್ರ ಸಾರ ಭಾಗ–೧** ಹಸ್ತಪ್ರತಿಯನ್ನು ಕಂಡು ಅವರ ಮಾವ ಅದರಲ್ಲಿ ಸಂಗ್ರಹಗೊಂಡ ವಚನಸಾಹಿತ್ಯದ ಹಿರಿಮೆಯನ್ನು ಮನವಾರೆ ಮೆಚ್ಚಿದರು. ಇದು ಕೇವಲ ಭಾಗ–೧; ಇನ್ನೂ ಇಂಥ ಪಲವಾರು ಉದ್ಗ್ರಂಥಗಳನ್ನು ಸಿದ್ಧಪಡಿಸುವ ಸಂಗ್ರಹ ತಮ್ಮಲ್ಲಿದೆ ಎಂದು ವಿವರಿಸಿದಾಗ ತಮ್ಮಣ್ಣಪ್ಪನವರಿಗೆ ಆಶ್ಚರ್ಯ. ಇಂಥ ಮಹತ್ವದ ಸಾಹಿತ್ಯ, ಅದೂ ಇಷ್ಟು ದೊಡ್ಡ ಪ್ರಮಾಣದಲ್ಲಿರುವುದು ನಮ್ಮ ಭಾಗ್ಯವೇ ಸೈ ಎಂದು ಹಳಕಟ್ಟಿ ತಮ್ಮ ಸಮಾಜದ ಗಣ್ಯರೆದುರು ವಿವರಿಸಿದರು. ಈ ಸಂದರ್ಭದ ಕೆಲವು ಸಂಗತಿಗಳನ್ನು ಸ್ಮರಿಸಿಕೊಂಡು ತಮ್ಮ ಶಿವಾನುಭವ ಪತ್ರಿಕೆಯಲ್ಲಿ ಶ್ರೀ ಹಳಕಟ್ಟಿಯವರೇ ಬರೆದಿರುವ ಮಾತು ಹೀಗಿದೆ:

> "…..ಈ ಗ್ರಂಥದ ವಿಚಾರವು ಕರ್ಣೋಪಕರ್ಣವಾಗಿ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳಿಗೆ ತಿಳಿಯಲಾಗಿ ಅವರು ಕೂಡಲೇ ಬಾಗಲಕೋಟೆಯ ಶ್ರೀ ಮುರಿಗೆಯ್ಯ ಜಂಗಿನ, ವೇ. ಮೂ. ಬುದ್ಧಯ್ಯ ಸ್ವಾಮಿ ಪುರಾಣಿಕ ಮಠ ಮತ್ತು ಶ್ರೀ ರೇವಣಸಿದ್ಧ ಶಾಸ್ತ್ರಿಗಳು ಇಷ್ಟು ಜನ ಕೂಡಿಕೊಂಡು ಬಿಜಾಪುರಕ್ಕೆ ಬಂದರು….. ನಾನು ಸಂಗ್ರಹಿಸಿದ ಗ್ರಂಥದಲ್ಲಿಯ ವಚನಗಳನ್ನು ಅವರಿಗೆ ಒದಿ ತೋರಿಸುತ್ತಾ ಬಂದೆನು. ಶ್ರೀ ಸ್ವಾಮಿಗಳವರಿಗೆ ಇಂಥ ವಾಙ್ಮಯವು ವೀರಶೈವದಲ್ಲಿದ್ದುದು ಏನೂ ಗೊತ್ತಿರಲಿಲ್ಲ, ನಾನು ಸಂಗ್ರಹಿಸಿದ ವಚನಗಳಲ್ಲಿಯ ಸುಂದರವಾದ ಉಚ್ಚವಿಚಾರಗಳನ್ನು ಸ್ವಾಮಿಗಳವರು ನೋಡಿ

ಹರುಷಿತರಾಗಿ ಇದನ್ನು ಅಚ್ಚುಹಾಕಿಸುವುದು ಅವಶ್ಯಕವೆಂದು ನನಗೆ ತಿಳಿಸಿದರು. ಹೀಗೆ ......ಬಂದ ಮಹನೀಯರು ಮೂರು ನಾಲ್ಕು ದಿವಸ ಬಿಜಾಪುರದಲ್ಲಿ ಗ್ರಂಥ ಭಾಗಗಳನ್ನು ಪರಿಶೀಲನೆ ಮಾಡುತ್ತಾ ಇದ್ದು ಆಮೇಲೆ ತಿರುಗಿಹೋದರು.''

**(ಶಿವಾನುಭವ ಪತ್ರಿಕೆಯ ೨೫ ವರ್ಷಗಳ ವರದಿ, ಪುಟ.೪೩೧)**

ಈ ಪ್ರಸಂಗ ಹಳಕಟ್ಟಿಯವರ ಸಂಶೋಧನಾ ಪ್ರವೃತ್ತಿಗೆ ಹೆಚ್ಚಿನ ಪ್ರೇರಣೆ ಒದಗಿಸಿತು. ಆದರೆ ಅದಕ್ಕೂ ಅಧಿಕ ಪ್ರಚೋದನೆ ದೊರೆತದ್ದು ತಾವು ಸಿದ್ಧಪಡಿಸಿದ ***ವಚನ ಶಾಸ್ತ್ರಸಾರ ಭಾಗ–೧*** ರ ಪ್ರಕಟಣೆಯ ಅಂದಿನ ಬೇರೆ ಬೇರೆ ಮುದ್ರಣಾಲಯಗಳ ಕಾರ್ಯಕ್ಷಮತೆಯನ್ನು ನೋಡಿದ್ದ ಹಳಕಟ್ಟಿಯವರಿಗೆ, ಮಂಗಳೂರಿನ ಬಾಸೆಲ್ ಮಿಷನ್ ಪ್ರೆಸ್ಸು ಈ ಕಾರ್ಯಕ್ಕಾಗಿ ಅತ್ಯುತ್ತಮ ಎಂದು ತೋಚಿತು. ಕೂಡಲೇ ಐದುನೂರು ರೂಪಾಯಿ ಮುಂಗಡ ಹಣ ಸಂದಾಯವಾಗುವ ಕ್ರಮದೊಂದಿಗೆ ತಾವು ಮುದ್ರಣಕ್ಕೆ ಸಿದ್ಧಪಡಿಸಿದ ಹಸ್ತಪ್ರತಿಯನ್ನು ಮಂಗಳೂರು ಬಾಸೆಲ್ ಮಿಷನ್ ಪ್ರೆಸ್ಸಿಗೆ ಕಳಿಸಿದರು. ಕೆಲವು ದಿನಗಳ ಬಳಿಕ ಮಂಗಳೂರಿನಿಂದ ಬಂದ ಉತ್ತರ ಹಳಕಟ್ಟಿಯವರಲ್ಲಿ ಅಚ್ಚರಿ ಮೂಡಿಸಿತು:

''ಶ್ರೀ ಹಳಕಟ್ಟಿಯವರಿಗೆ... ನಿಮ್ಮ ಗ್ರಂಥದ ಧಾರ್ಮಿಕ ವಿಚಾರವನ್ನು ನಾವು ಮುದ್ರಿಸಲು ಇಷ್ಟಪಡುವುದಿಲ್ಲ. ನಿಮ್ಮ ಧರ್ಮದ ತತ್ವಗಳಿಗೂ ನಮ್ಮ ಧಾರ್ಮಿಕ ಗ್ರಂಥಗಳಿಗೂ ಹೋಲಿಕೆ ಇರುವುದರಿಂದ ನಮ್ಮ ಮಿಶನರಿ ಉದ್ದೇಶಕ್ಕೆ ಭಂಗ ಬರುತ್ತದೆ. ಆದ್ದರಿಂದ ಕ್ಷಮಿಸಿ...''

ತಾವು ಕಳಿಸಿದ ಮುಂಗಡ ಹಣ ಮತ್ತು ಹಸ್ತಪ್ರತಿ ಮರಳಿ ಬಂದಾಗ ಹಳಕಟ್ಟಿಯವರಿಗೆ ಒಂದು ಉತ್ತಮ ಮುದ್ರಣಾಲಯದಲ್ಲಿ ಮುದ್ರಿಸಬೇಕೆಂಬ ತಮ್ಮ ಬಯಕೆ ಕೈಗೂಡಲಿಲ್ಲವಲ್ಲ ಎನ್ನುವ ನಿರಾಶೆ ಉಂಟಾಯಿತು. ಆದರೆ ಅದರಿಂದ ತಾವು ಸಿದ್ಧಪಡಿಸಿದ ***ವಚನಶಾಸ್ತ್ರಸಾರ***ವನ್ನು ಪ್ರಕಟಿಸುವ ಉತ್ಸಾಹ ಅವರಲ್ಲಿ ಇಮ್ಮಡಿಗೊಂಡಿತು. ಇದೇ ಅವಧಿಯಲ್ಲಿ ಅಂದರೆ ೧೯೨೧ರ ಚಿಕ್ಕಮಗಳೂರು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹಳಕಟ್ಟಿಯವರಿಗೆ 'ವಚನ ಸಾಹಿತ್ಯದ ಹಿರಿಮೆ' ಕುರಿತು ಉಪನ್ಯಾಸ ನೀಡುವ ಅವಕಾಶ ದೊರೆಯಿತು. ವಚನ ಸಾಹಿತ್ಯದ ಭಾಷೆ, ಶೈಲಿ, ಅದರಲ್ಲಿರುವ ಸಾಮಾಜಿಕ ಪ್ರಜ್ಞೆ ಮಾನವ ಸಮುದಾಯದ ಮೇಲು ಕೀಳು, ಪಾಪ ಪುಣ್ಯ, ಸ್ವರ್ಗ ನರಕ ಇತ್ಯಾದಿಗಳ ಖಂಡನೆ ಮತ್ತು ವಾಸ್ತವದ ವಿಶ್ಲೇಷಣೆ, ವಿಶ್ವಬಂಧುತ್ವ, ಶ್ರಮಗೌರವ ಕಾಯಕತತ್ವ ಅನುಭಾವಪಥದ ಘನತೆ ಮತ್ತು ಸಕಲಜೀವಾತ್ಮರಿಗೆ ಲೇಸ ಬಯಸುವ ಶರಣಸಾಹಿತ್ಯದ ಜೀವನಪ್ರೀತಿ ಮತ್ತು ಜೀವನದರ್ಶನ ಇತ್ಯಾದಿ ಸಂಗತಿಗಳನ್ನು, ವಚನಗಳ ಆಧಾರದೊಂದಿಗೆ ಹಳಕಟ್ಟಿಯವರು ಸಭಿಕರೆದುರು ಪ್ರಸ್ತುತಪಡಿಸಿದಾಗ, ನೆರೆದ ಎಲ್ಲ ಜನಸ್ತೋಮ

ತಲೆದೂಗಿ ಮೆಚ್ಚುಗೆ ವ್ಯಕ್ತಪಡಿಸಿತು. ಹಳೆಯ ಮೈಸೂರಿನ ಅನೇಕ ವಿದ್ವಾಂಸರು ಮತ್ತು ಸಂಶೋಧಕ ವಿಮರ್ಶಕರು ವಚನ ಸಾಹಿತ್ಯದ ಅಧ್ಯಯನದ ದಿಸೆಯಲ್ಲಿ ಹೆಚ್ಚು ಹೆಚ್ಚು ಆಸಕ್ತಿ, ಒಲವು ತೋರಿಸಿದರು. ಇದರಿಂದ ಹಳಕಟ್ಟಿಯವರಿಗೆ ಆತ್ಮವಿಶ್ವಾಸ ಮೂಡಿ, ಅವರು ಇಂಗ್ಲಿಷ್ ಭಾಷೆಗೂ ಇಂಥ ಅಪೂರ್ವ ಸಾಹಿತ್ಯದ ಪರಿಚಯ ಮಾಡಿಕೊಡುವ ಪ್ರಯತ್ನ ಕೈಕೊಂಡರು. ಅಂದು ಪ್ರಕಟವಾಗುತ್ತಿದ್ದ ಕೆಲವು ಇಂಗ್ಲಿಷ್ ಪತ್ರಿಕೆಗಳಲ್ಲಿ ಭಾರತೀಯ ಪ್ರಾಚೀನ ಸಾಹಿತ್ಯ, ಪರಂಪರೆ, ಚರಿತ್ರೆ, ಸಂಸ್ಕೃತಿ ಆಧಾರಿತ ಲೇಖನಗಳಿಗೆ ವಿಶೇಷ ಪ್ರಾಶಸ್ತ್ಯ ಕೊಡುತ್ತಿದ್ದ **ಇಂಡಿಯನ್ ಆಂಟಿಕ್ವರಿ** ಪತ್ರಿಕೆ ಅವರ ಗಮನ ಸೆಳೆಯಿತು. ರೆವ್ಹರೆಂಡ್ ಜೆ.ಎಸ್.ಫಾರಕ್ವ್ ಹಾರ್ ಎನ್ನುವ ಐರೋಪ್ಯ ವಿದ್ವಾಂಸರನ್ನು ಸಂಪರ್ಕಿಸಿ, ಬಸವಣ್ಣನವರ ಕೆಲವು ವಚನಗಳ ಇಂಗ್ಲಿಷ್ ಅನುವಾದ ಅವರಿಗೆ ಕಳಿಸಿದರು. ಧಾರ್ಮಿಕ ಪ್ರವೃತ್ತಿಯ ಮತ್ತು ಸಾಹಿತ್ಯ ವಿಮರ್ಶೆಯ ಒಲವನ್ನುಳ್ಳ ರೆವ್ಹರೆಂಡ್ ಫಾರ್‌ಕ್ವ್‌ಹಾರ್ ಆ ಅನುವಾದಗಳನ್ನು ಓದಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿ ಕೆಲವು ಸಲಹೆ ಸೂಚನೆಯಿತ್ತರು. ಈ ಸಲಹೆಗಳ ಬೆಳಕಿನಲ್ಲಿ ಶ್ರೀ ಹಳಕಟ್ಟಿ ತಮ್ಮ ಅನುವಾದಿತ ವಚನಗಳನ್ನು ಆ ಪತ್ರಿಕೆಯಲ್ಲಿ ಪ್ರಕಟನೆಗಾಗಿ ಕಳಿಸಿದರು. ಇಂದು ವಚನ ಸಾಹಿತ್ಯದ ಇಂಗ್ಲಿಷ್ ಅನುವಾದ ಕಾರ್ಯ ಬಹುಮುಖವಾಗಿ ನಡೆದಿರುವುದಕ್ಕೆ ಮತ್ತು ಈ ಸಾಹಿತ್ಯ ಪ್ರಪಂಚದ ಶ್ರೇಷ್ಠ ಸಾಹಿತ್ಯಕ್ಕೆ ಸಮನಾಗಿ ನಿಲ್ಲಬಲ್ಲುದು ಎನ್ನುವ ಗೌರವ ತಂದುಕೊಡುವುದಕ್ಕೆ ಮೂಲ ಕಾರಣಪುರುಷ ಹಳಕಟ್ಟಿಯವರೇ. ೧೯೨೨ ರ 'ಇಂಡಿಯನ್ ಆಂಟಿಕ್ವೆರಿ' ಪತ್ರಿಕೆಯ ಸಂಚಿಕೆಯೊಂದು ಬಸವಣ್ಣನವರ ವಚನಗಳ ಇಂಗ್ಲಿಷ್ ಅನುವಾದ ಪ್ರಕಟಿಸಿ ಅದರ ಸಾಹಿತ್ಯಿಕ ವೈಶಿಷ್ಟ್ಯವನ್ನು ಪರಿಚಯಿಸಿತ್ತು. ಇದರಿಂದ ಹಳಕಟ್ಟಿಯವರಿಗೆ ವಚನ ಸಾಹಿತ್ಯದ ಹಿರಿಮೆಯ ಬಗೆಗಿದ್ದ ಶ್ರದ್ಧೆ, ಅದು ಒಳಗೊಂಡ ವಿಶ್ವಮಾನ್ಯ ತತ್ವ, ವಿಚಾರ, ಜೀವನಮೌಲ್ಯಗಳು ಪ್ರಪಂಚಕ್ಕೆ ತಿಳಿಯಬೇಕು ಎನ್ನುವಲ್ಲಿದ್ದ ಅವರ ಕಳಕಳಿ, ದೂರದೃಷ್ಟಿಗಳು ವ್ಯಕ್ತವಾಗುತ್ತವೆ. ವಿವಿಧ ರೀತಿಯಲ್ಲಿ ತಮ್ಮ ಕಾರ್ಯ ಮುಂದುವರೆಸಿದ ಹಳಕಟ್ಟಿಯವರು, ತಮ್ಮ ಸಂಶೋಧನೆಯ ಮಾರ್ಗವನ್ನು ತಾವೇ ನಿರ್ಮಿಸಿಕೊಂಡ ಅದ್ವರು.

ಮಂಗಳೂರಿನ ಬಾಸೆಲ್ ಮಿಶನ್ ಮುದ್ರಣಾಲಯದವರ ಮಾತುಗಳಿಂದ ಒಂದುಕ್ಷಣ ಮುದ್ರಣ ಕುರಿತಂತೆ ಹಳಕಟ್ಟಿಯವರಲ್ಲಿ ಒಂದಷ್ಟು ಆತಂಕವುಂಟಾಗಿದ್ದರೂ, ಬೇರೆ ಕಡೆ ಅದನ್ನು ಮುದ್ರಿಸಿ ಪ್ರಕಟಿಸುವ ಹಂಬಲ ದ್ವಿಗುಣಗೊಂಡಿತ್ತು. ಬೆಳಗಾಂವಿಯ ಶ್ರೀ ಚೌಗುಲೆ ಎನ್ನುವವರ ಮಹಾವೀರ ಮುದ್ರಣಾಲಯದಲ್ಲಿ **ವಚನಶಾಸ್ತ್ರಸಾರ–೧** ರ ಅಚ್ಚಿನ ಕಾರ್ಯ ಆರಂಭವಾಯಿತು. ಅನಾರೋಗ್ಯ ಮತ್ತೆ ಅವರನ್ನು ತಿಕ್ಕಿಮುಕ್ಕಿತು. ಶಸ್ತ್ರಚಿಕಿತ್ಸೆಗೂ ಅವರು ಒಳಗಾದರು. ವೈದ್ಯರು ಹಳಕಟ್ಟಿಯವರಿಗೆ ವಿಶ್ರಾಂತಿ ಅಗತ್ಯವೆಂದು ಎಚ್ಚರಿಸಿದರು. ಆದರೆ ಇದಾವುದೂ ಅವರ ಕಾರ್ಯತತ್ಪರತೆಗೆ ಚ್ಯುತಿ ತರಲಿಲ್ಲ. ಮಲಗಿದಲ್ಲಿಯೇ ಕರಡು ತಿದ್ದಿದರು. ಮುದ್ರಿತ ಪುಟಗಳು ಕೈಗೆ ಬರುತ್ತಿದ್ದ ಹಾಗೆಯೇ ಅವರ ಉಲ್ಲಾಸ

ಅಧಿಕವಾಗುತ್ತಿತ್ತು. ಅಂತೂ ಇಂತೂ ಹಸ್ತಪ್ರತಿಯ ಮುದ್ರಣಕಾರ್ಯ ಪೂರ್ತಿಗೊಂಡು ೧೯೨೩ ರಲ್ಲಿ ***ವಚನಶಾಸ್ತ್ರಸಾರ ಭಾಗ–೧*** ಪ್ರಕಟವಾಯಿತು. ಆರಂಭದಲ್ಲಿ ತಮ್ಮ ಹಸ್ತಪ್ರತಿಗೆ ***ವಚನಸಾರ*** ಎಂದು ಕರೆದಿದ್ದ ಹಳಕಟ್ಟಿಯವರು ಮುದ್ರಣಕಾಲದಲ್ಲಿ ತಮ್ಮ ಗ್ರಂಥಕ್ಕೆ ***ವಚನಶಾಸ್ತ್ರಸಾರ*** ಎಂದು ಕರೆದದ್ದಾಗಿ ಅವರೇ ಹೇಳಿದ್ದಾರೆ:

> "ವಚನ ವಾಙ್ಮಯದ ನನ್ನ ಸಂಶೋಧನೆಯಲ್ಲಿ ವಚನಗಳಿಗೆ ಒಂದು ಶಾಸ್ತ್ರದ ಸ್ವರೂಪ ಇದ್ದದ್ದು ನನಗೆ ಕಂಡುಬಂದದ್ದರಿಂದ, ಅದನ್ನು ಹಾಗೆ ಕರೆಯಲು ನನಗೆ ಯಾವ ಪ್ರತ್ಯವಾಯವೂ ಕಂಡುಬರಲಿಲ್ಲ. ಅವುಗಳ ಈ ಸ್ವರೂಪ ಸಾರ್ವಜನಿಕರಿಗೆ ಗೊತ್ತಾಗಬೇಕೆಂದು ನಾನು ಈ ಗ್ರಂಥಕ್ಕೆ 'ವಚನಶಾಸ್ತ್ರಸಾರ' ಎಂದು ಹೆಸರಿಟ್ಟೆನು. ಹೀಗೆ ಈ ವಾಙ್ಮಯಕ್ಕೆ ಒಂದು ಶಾಸ್ತ್ರವೆಂದು ಕರೆಯುವ ರೂಢಿಯು ಈಗ ಬಂದುಬಿಟ್ಟಿದೆ"

**(ಶಿವಾನುಭವ ಪತ್ರಿಕೆಯ ೨೫ ವರ್ಷಗಳ ವರದಿ, ಪು.೪೩).**

***ವಚನಶಾಸ್ತ್ರಸಾರ ಭಾಗ–೧*** ಪ್ರಕಟವಾದ ಬಳಿಕ ಅದರ ಜನಪ್ರಿಯತೆ ಮತ್ತು ವಿವಿಧ ವಿದ್ವಾಂಸರ ಮೆಚ್ಚುಗೆಯ ಮಾತು, ಹಳಕಟ್ಟಿಯವರಲ್ಲಿದ್ದ ಅಪಾರ ವಚನ ಸಾಹಿತ್ಯ ಸಂಗ್ರಹದ ಮುದ್ರಣಕಾರ್ಯಕ್ಕೆ ಪ್ರೇರಣೆ ಒದಗಿಸಿತು.

ಇದಾದ ಬಳಿಕ ಒಂದಾದ ಮೇಲೊಂದರಂತೆ ***ವಚನಶಾಸ್ತ್ರಸಾರ***ದ ವಿವಿಧ ಭಾಗಗಳು ಪ್ರಕಟವಾದವು. ಪ್ರಕಟನೆಗೆ ಅನುಕೂಲವಾಗಲೆಂದು ಮುಂದೆ ಎರಡು ವರ್ಷಗಳಲ್ಲಿ – ೧೯೨೫ – ತಮ್ಮದೇ ಆದ ಸ್ವಂತ ಮುದ್ರಣಾಲಯ ಸ್ಥಾಪಿಸಿದರು. ಆ ಮುದ್ರಣಾಲಯದ ಹೆಸರು ಕೂಡ ವಿಶಿಷ್ಟವೇ: ***ಹಿತಚಿಂತಕ ಪ್ರಿಂಟಿಂಗ್ ಪ್ರೆಸ್.***

***ವಚನಶಾಸ್ತ್ರಸಾರ ಭಾಗ–೧*** ರಲ್ಲಿ ವಚನಗಳನ್ನು ಆಧರಿಸಿ ಲಿಂಗಾಯತ ಧರ್ಮದ ತತ್ವಗಳ ವಿವರಣೆ ನೀಡಲಾಗಿದೆ: ಅದರ ಪ್ರಸ್ತಾವನೆಯ ಕೆಲವು ಮಾತು ಹೀಗಿವೆ:

> "ವಚನಕಾರರು ಕನ್ನಡ ವಾಙ್ಮಯವನ್ನು ಬೆಳೆಸಿರುವರಷ್ಟೇ ಅಲ್ಲ, ಅವರು ಕಾಲಕಾಲಕ್ಕೆ ಜನ್ಮವೆತ್ತಿ ಕರ್ನಾಟಕದ ಧಾರ್ಮಿಕ ಮತ್ತು ನೈತಿಕ ಉನ್ನತಿಗೋಸ್ಕರ ಬಹಳ ಪ್ರಯತ್ನಿಸಿದ್ದಾರೆ. ಆದ್ದರಿಂದ ಅವರ ಮತತತ್ವಗಳಾವುವು? ಅವರ ವಿವೇಚನಾ ಪದ್ಧತಿಯು ಹೇಗೆ ಇದೆ, ಮತ್ತು ಅವರ ಭಾಷಾಸರಣಿಯು ಎಂತಹದಿರುತ್ತದೆ ಎಂಬುದರ ಕಲ್ಪನೆಯು ನಮ್ಮ ಕರ್ನಾಟಕಸ್ಥರಿಗೆ ಕೆಲಮಟ್ಟಿಗಾದರೂ ಆಗಬೇಕೆಂದು ಉದ್ದೇಶಿಸಿ ನಾನು ಈ ಗ್ರಂಥವನ್ನು ರಚಿಸಿದ್ದೇನೆ." **(ಪ್ರಸ್ತಾವನೆ, ಪು. ೧–೨)**

ಗ್ರಂಥ ಮುದ್ರಣಕ್ಕೆ ಹಿತಚಿಂತಕ ಪ್ರೆಸ್; ಪ್ರಕಾಶನಕ್ಕೆ ಶಿವಾನುಭವ ಗ್ರಂಥಮಾಲೆ; ಇನ್ನು ಧಾರ್ಮಿಕ ಸೈದ್ಧಾಂತಿಕ ಸಾಹಿತ್ಯಿಕ ಆಲೋಚನೆ ವಿಚಾರಗಳ ಸಂವಹನ ಪ್ರಸರಣ ಕಾರ್ಯಕ್ಕೆ ಶಿವಾನುಭವ ಪತ್ರಿಕೆ. ಹೀಗೆ ಪರಸ್ಪರ ಪೋಷಕಾಂಶಗಳು ಮುಪ್ಪುರಿಗೊಂಡು ಅವರ ಸಂಶೋಧನೆ ಅವ್ಯಾಹತವಾಗಿ ಮುನ್ನಡೆಯಿತು.

೧೯೩೧ ರ ಅವಧಿಗೆ ***ವಚನಶಾಸ್ತ್ರಸಾರ ಭಾಗ–೧*** ಎರಡನೆಯ ಮುದ್ರಣ ಕಂಡಿತು. ದ್ವಿತೀಯ ಆವೃತ್ತಿಯ ಪ್ರಸ್ತಾವನೆಯ ಕೆಲವು ಮಾತು ಹಳಕಟ್ಟಿಯವರ ವಿವಿಧ ಬಗೆಯ ಕಾರ್ಯನಿರ್ವಹಣೆಯನ್ನು ಸ್ಪಷ್ಟಪಡಿಸುತ್ತದೆ: “ ಈ ಗ್ರಂಥದ ಒಂದನೇ ಆವೃತ್ತಿಯನ್ನು ಪ್ರಕಟಿಸಿದಾಗ್ಗೆ ವಚನ ವಾಙ್ಮಯದ ವಿಸ್ತಾರವು ಬಹುತರ ಜನರಲ್ಲಿ ಅಪರಿಚಿತವಾಗಿತ್ತು. ಆದರೆ ಈ ಎಂಟು ವರ್ಷಗಳ ಅವಧಿಯಲ್ಲಿ ಈ ಸ್ಥಿತಿಯು ಉಳಿಯದೆ, ಈ ವಾಙ್ಮಯದ ಮಹತ್ವವು ಎಲ್ಲರಿಗೂ ತಿಳಿಯಹತ್ತಿದ್ದು ಬಹಳ ಸಂತೋಷಕರವಾದದ್ದು. ಇದಲ್ಲದೆ ಈ ವಾಙ್ಮಯ ಪ್ರಸಾರವನ್ನು ಹೆಚ್ಚಿಗೆ ಮಾಡುವ ಉದ್ದಿಶ್ಯವಾಗಿ ಕೆಲವು ವರ್ಷಗಳ ಹಿಂದೆ ನಾನು 'ಶಿವಾನುಭವ' ಎಂಬ ಪತ್ರಿಕೆಯನ್ನು ಪ್ರಸಿದ್ಧಪಡಿಸಹತ್ತಿದೆನು.” ವಚನಶಾಸ್ತ್ರಸಾರ ಭಾಗ–೨ ಹಳಕಟ್ಟಿಯವರ ವಚನ ವಾಙ್ಮಯದ ಆಳವಾದ ಅಧ್ಯಯನದ ಚಿಂತನೆಗಳ ಫಲ. ಎರಡನೆಯ ಭಾಗ 'ವೀರಶೈವ ಸಿದ್ಧಾಂತ'ಕ್ಕೇ ಮೀಸಲಾದ ಕೃತಿ. ಭಾಗ – ೧ ರ ವಿಷಯ ನಿರೂಪಣೆಯಲ್ಲಿ ಬಂದ ಕೆಲವು ತಾತ್ವಿಕ ಸಂಗತಿಗಳು: ಪರಮಾತ್ಮ ಸ್ವರೂಪ, ಅದಕ್ಕನುಗುಣವಾದ ವಚನ, ಉಕ್ತಿಗಳು, ನೈತಿಕ ನಡವಳಿಕೆ, ಸದಾಚಾರ, ಭಕ್ತಿಯ ಮಾರ್ಗ (ಭಕ್ತಸ್ಥಲ) ಮುಂತಾದವು—ಪುನರುಕ್ತವಾಗಬಾರದೆಂದು ಬಗೆದು, ಎರಡನೆಯ ಭಾಗದಲ್ಲಿ ಕೈಬಿಡಲಾಗಿದೆ. ವಚನಶಾಸ್ತ್ರಸಾರ ಎರಡನೆಯ ಭಾಗ, ಐದು ವಿಭಾಗಗಳನ್ನೊಳಗೊಂಡಿದೆ. ಅವುಗಳ ಕ್ರಮ ಹೀಗಿದೆ: ***ಸೃಷ್ಟಿಯ ರಚನೆ, ಕರಣಹಸಿಗೆ, ಕ್ರಿಯೆ ಮತ್ತು ಸಕೀಲಗಳು, ಷಟ್‌ಸ್ಥಲಗಳು*** ಮತ್ತು ***ಏಕೋತ್ತರ ಶತಸ್ಥಲ***. ಈ ಕೃತಿಯ ಆಶಯವನ್ನು ಪ್ರಸ್ತಾವನೆಯಲ್ಲಿ ಶ್ರೀ ಹಳಕಟ್ಟಿ ಹೀಗೆ ವಿವರಿಸಿದ್ದಾರೆ:

> “....ವೀರಶೈವಧರ್ಮದಲ್ಲಿ ಅತ್ಯಂತ ಮಹತ್ವವಾಗಿರುವ ಷಟ್‌ಸ್ಥಲ ಸಿದ್ಧಾಂತವನ್ನು ನಿರೂಪಿಸುವುದೇ ಈ ಎರಡನೆಯ ಭಾಗದ ಮುಖ್ಯ ಉದ್ದೇಶವಾಗಿದೆ... ವೀರಶೈವ ಧರ್ಮದ ತಿರುಳನ್ನು ಅದರ ಎಲ್ಲ ಭಾಗ ಉಪಭಾಗಗಳೊಡನೆ ಸಮಗ್ರವಾಗಿ ಮತ್ತು ತಾತ್ವಿಕ ರೀತಿಯಿಂದ ನಿರೂಪಿಸುವ ಯಾವ ಗ್ರಂಥವೂ ನಮಗೆ ಈವರೆಗೂ ಲಭ್ಯವಾಗಿಲ್ಲ... ಒಟ್ಟಾರೆ, ಈ ಗ್ರಂಥದಲ್ಲಿ ಷಟ್‌ಸ್ಥಲದ ಮೂಲತತ್ವಗಳನ್ನು ಸಂಶೋಧಿಸಿ, ಅವುಗಳನ್ನು ನಾವು ಆಯಾ ವಚನಕಾರರ ವಚನಗಳಿಂದಲೇ ವಿವರಿಸಲು ಪ್ರಯತ್ನಿಸಿದ್ದೇವೆ”.

ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ – ಈ ಆರು ಸ್ಥಲಗಳು ವೀರಶೈವ ದರ್ಶನ (ಸಿದ್ಧಾಂತ) ದ ಪ್ರಾಣವಿದ್ದಂತೆ. ಹಳಕಟ್ಟಿ ಅವರು ಇನ್ನುಳಿದ

ಕೆಲವು ಪಾರಿಭಾಷಿಕ, ತಾಂತ್ರಿಕತೆಯ ಅಂಶಗಳನ್ನು ಒಂದು ಕ್ರಮ ಎನ್ನುವಂತೆ ವಿವರಿಸಿದ್ದರೂ, ಅವರ ನಿಜವಾದ ಸಂಶೋಧನ ಪ್ರತಿಭೆ ಎದ್ದು ಕಾಣುವುದು, ಷಟ್‌ಸ್ಥಲ ಕುರಿತು ಅವರು ಮಾಡಿರುವ ಆಳವಾದಚಿಂತನೆಯಲ್ಲಿ,ಮತ್ತು ಪ್ರತಿಸ್ಥಲಕ್ಕೆ ಅನುಗುಣವಾದ ವಚನಗಳ ಸಂಯೋಜನೆಯಲ್ಲಿ. ಷಟ್‌ಸ್ಥಲ ಒಂದು ಅನುಭಾವ ಪಥ. 'ಭಕ್ತ'ನಾದವನು 'ಐಕ್ಯ'ಸ್ಥಲದ ವರೆಗಿನ ವಿವಿಧ ಹಂತಗಳಲ್ಲಿ ಮಾನಸಿಕ ಕ್ಲೇಷೆ, ಕ್ಷೋಭೆ, ಆತಂಕಗಳನ್ನು ಪರಿಶುದ್ಧ ಕಾಯಕದ ಮೂಲಕ ನಿವಾರಿಸಿಕೊಂಡು, ಪರಮ ಚೈತನ್ಯ ತನ್ನ ಸರ್ವಾಂಗದಲ್ಲಿ ನೆಲೆಸಿ, ಅಂತಃಸ್ಫುರಣಗೊಳ್ಳುವ, ದಿವ್ಯಾನುಭವ ಹೊಂದುವ ಒಂದು ಚಿತ್ತವಿಕಾಸ ಮಾರ್ಗ. ಈ ದೃಷ್ಟಿಯಿಂದ ಹಳಕಟ್ಟಿಯವರ ಈ ಕೃತಿ, ಭಾರತೀಯ ಸೈದ್ಧಾಂತಿಕ ಹಿನ್ನೆಲೆಯಲ್ಲಿ ಒಂದು ಅಪೂರ್ವ ಕೃತಿ. ಹಳಕಟ್ಟಿ ಯವರಿಗೆ ವೀರಶೈವ ಧರ್ಮದ ಸೈದ್ಧಾಂತಿಕ ನೆಲೆಯ ಅರಿವು, ಕೇವಲ ಆ ಧರ್ಮದ ಹಿರಿಮೆಯ ವೈಭವೀಕರಣಕ್ಕಾಗಿ ಅಗತ್ಯವಾಗಿರದೆ, ಭಾರತೀಯ ಧರ್ಮ–ದರ್ಶನಗಳ ಬೆಳಕಿನಲ್ಲಿ ಅದರ ನಿಜಸ್ವರೂಪದ ಅರ್ಥ ಮಾಡಿಕೊಳ್ಳುವುದಕ್ಕಾಗಿ, ತೌಲನಿಕ ಜ್ಞಾನದ ಮೂಲಕ ಧಾರ್ಮಿಕ ಸೌಹಾರ್ದ ಸಾಮರಸ್ಯಗಳನ್ನು ಗುರುತಿಸುವುದಕ್ಕಾಗಿ ಅವಶ್ಯಕವೆನಿಸಿತ್ತು. ಅವರ ಪ್ರಸ್ತಾವನೆಯ ಕೆಲವು ಮಾತುಗಳಿಂದ ಈ ಅಂಶ ಸ್ಪಷ್ಟವಾಗಿ ಗೋಚರಿಸುತ್ತದೆ:

> "... ಈವರೆಗೆ ನಾವು ಮಾಡಿದ ವಿವರಣೆಗಳ ಮೇಲಿಂದ ವೀರಶೈವ ಧರ್ಮಕ್ಕೂ ಇತರ ಹಿಂದೂ ಧರ್ಮಗಳಿಗೂ ಆವ ಸಂಬಂಧವಿದೆ, ವೀರಶೈವ ಗ್ರಂಥಕಾರರು ಯಾವ ಧ್ಯೇಯವುಳ್ಳವರಾಗಿರುವರು, ಅವರ ಉತ್ಕ್ರಾಂತಿಯ ತತ್ವಗಳಾವುವು, **ಷಟ್‌ಸ್ಥಲದ** ಸ್ವರೂಪ ಆವುದು ಇವೇ ಮೊದಲಾದ ವಿಷಯಗಳು ಈ ಗ್ರಂಥದ ಸಹಾಯದಿಂದ ತಿಳಿಯಬಹುದೆಂಬುದು ವಾಚಕರ ತಿಳುವಳಿಕೆಗೆ ಬಂದಿರಬಹುದು."

ಹಳಕಟ್ಟಿಯವರ ಸಂಶೋಧನಪಥ, ಯಾವುದೇ ಬಗೆಯ ಆಗ್ರಹಗಳಿಂದ ಕೂಡಿದುದಾಗಿರಲಿಲ್ಲ. ಮತ್ತು ತಾವು ಹೇಳಿದುದು ಕೊನೆಯ ಸತ್ಯ ಎನ್ನುವ ಭ್ರಮೆಯೂ ಅವರಿಗಿರಲಿಲ್ಲ. ಕಾರಣ ಷಟ್‌ಸ್ಥಲದಂತಹ ಮಹತ್ವದ ಸಿದ್ಧಾಂತ ಮತ್ತೆ ಮತ್ತೆ ಚರ್ಚೆಗೆ ಒಳಗಾಗಬೇಕು. ಅನುಭಾವಿಗಳ ಚಿಂತನೆಗಳ ಮೂಲಕ, ಆ ಸ್ಥಲಗಳ ಪರಸ್ಪರ ಸಂಬಂಧ ಸಾಂಗತ್ಯಗಳು ಸ್ಫುಟಗೊಳ್ಳಬೇಕು ಎನ್ನುವುದು ಅವರ ಮನೀಷೆ. ಅವರೇ ಈ ಮಾತು ಹೇಳುತ್ತಾರೆ:

> "....ಅತ್ಯಂತ ಮಹತ್ವದ ವಿಷಯಗಳನ್ನು ತಾತ್ವಿಕ ರೀತಿಯಿಂದ ವಿವೇಚಿಸಿದ ಪುರಾತನ ಗ್ರಂಥಗಳು ಮಾತ್ರ ನಮಗೆ ದೊರೆತಿಲ್ಲ. ಅದ್ದರಿಂದ ಆಯಾ ಸ್ಥಲಗಳ ನಿಶ್ಚಿತ ಸ್ವರೂಪ, ಅವುಗಳ ಪರಸ್ಪರ ಸಂಬಂಧ ಮತ್ತು ಮರ್ಮಗಳ ವಿಷಯವಾಗಿ ಶಂಕೆಗಳು ಉತ್ಪನ್ನವಾಗುವುದು ಸ್ವಾಭಾವಿಕವಿದೆ... ವೀರಶೈವ ಧರ್ಮದ ವಿಷಯಗಳನ್ನು ಯಾರಾದರೂ ಶಿವಾನುಭವಿಗಳೊಡನೆ

ಚರ್ಚಿಸಿ ಗೊತ್ತು ಮಾಡಿಕೊಳ್ಳುವುದೇ ಇದರಲ್ಲಿ ನಮ್ಮ ಮುಖ್ಯ ಉದ್ದೇಶವಾಗಿತ್ತು.”

ಈ ಕಾರಣದಿಂದ ಕೆಲಕಾಲ ಈ ಗ್ರಂಥದ ಪ್ರಕಾಶನ ಕೂಡ ಮುಂದೂಡಲಾಯಿತು. ಆದರೆ ಅಂದಿನ ‘ಕರ್ನಾಟಕ ಗಾಂಧಿ’ ಎಂದು ಕೆಲವರಿಂದ ಕರೆಯಲ್ಪಟ್ಟ ಹರ್ಡೇಕರ ಮಂಜಪ್ಪನವರ ಸಲಹೆಯ ಮೇರೆಗೆ, ಪ್ರಕಟಣೆಯ ಕಾರ್ಯ ಕೈಗೆತ್ತಿಕೊಂಡರು. ಅಲ್ಲಿಗೂ ಹಳಕಟ್ಟಿ ತಮ್ಮ ಕೆಲವು ಆತಂಕಗಳನ್ನು ಪ್ರಸ್ತಾವನೆಯಲ್ಲಿ ಹೇಳದೆ ಬಿಟ್ಟಿಲ್ಲ:

> “ಆದರೆ ಮುಂದೆ ಅಚ್ಚು ಹಾಕುವ ಕಾರ್ಯವನ್ನು ಪ್ರತ್ಯಕ್ಷವಾಗಿ ಕೈಕೊಂಡ ಬಳಿಕ ಗ್ರಂಥದಲ್ಲಿ ಅನೇಕ ಅಪೂರ್ಣತೆಗಳಿರುವುದು ನಮ್ಮ ದೃಷ್ಟಿಗೆ ಬೀಳಹತ್ತಿತು. ಅವುಗಳನ್ನೆಲ್ಲ ಶಕ್ಯವಿದ್ದಷ್ಟರ ಮಟ್ಟಿಗೆ ಸರಿಪಡಿಸಿ ಈ ಗ್ರಂಥವನ್ನು ಪೂರ್ಣಗೊಳಿಸಲು ನಮ್ಮಿಂದ ಕಾಲ ವಿಳಂಬವಾಯಿತು.... ಈ ಗ್ರಂಥದಲ್ಲಿ ಅನೇಕ ನ್ಯೂನತೆಗಳು ಇರುವವೆಂದು ಪೂರ್ಣವಾಗಿ ಅರಿತಿದ್ದೇವೆ. ಷಟ್‌ಸ್ಥಲಶಾಸ್ತ್ರವನ್ನು ಬಲ್ಲವರು ಅನೇಕರು ಇದ್ದಾರೆ. ಅವರು ನ್ಯೂನತೆಗಳನ್ನು ನಮಗೆ ತಿಳಿಸಿಕೊಟ್ಟಲ್ಲಿ ನಾವು ಅವರಿಂದ ಬಹು ಉಪಕೃತರಾಗುವೆವು...”

(ವಚನಶಾಸ್ತ್ರಸಾರ, ಪ್ರಸ್ತಾವನೆ, ಪು.೧–೯).

ಈ ಮಾತುಗಳನ್ನು ಗಮನಿಸಿದಾಗ ವಿನಮ್ರತೆ ಮತ್ತು ಪ್ರಾಮಾಣಿಕತೆಗಳು, ಹಳಕಟ್ಟಿಯವರ ಸಂಶೋಧನಪಥದ ದಾರಿದೀಪಗಳಾಗಿದ್ದುವು ಎನ್ನುವುದು ಸ್ಪಷ್ಟವಾಗುತ್ತದೆ. ೧೯೪೬ ರಲ್ಲಿ ***ವಚನಶಾಸ್ತ್ರಸಾರ ಭಾಗ–೩*** ಪ್ರಕಟವಾಯಿತು. ಹಳಕಟ್ಟಿಯವರು ಈ ಸಂಕಲನವನ್ನು ‘ವೀರಶೈವ ಆಚಾರ’ಗಳಿಗೆ ಮೀಸಲಾಗಿರಿಸಿದರು. ಕ್ರಿಯೆಗಳನ್ನು ಕುರಿತ ವಚನಗಳು, ಆಚಾರಗಳಲ್ಲಿ ಇರುವ ಭೇದ, ಅಷ್ಟಾವರಣಗಳ ವಿವೇಚನೆ ಈ ಮೂರು ವಿಭಾಗಗಳು ಮತ್ತು ಶಿವಯೋಗ ವಿಷಯದ ವಿವರಣೆಯ ನಾಲ್ಕನೆಯ ವಿಭಾಗ ಇದರಲ್ಲಿ ಸೇರಿವೆ.

## ವಚನ ಸಂಶೋಧನೆಯ ವ್ಯಾಪ್ತಿ

ವಚನಸಾಹಿತ್ಯ ಜನಪ್ರಿಯವಾಗುತ್ತ ನಡೆದಂತೆ ಹಳಕಟ್ಟಿಯವರ ಸಂಶೋಧನೆಯ ಉತ್ಸಾಹ ಉಕ್ಕೇರುತ್ತ ಬಂದಿತು. ತಮ್ಮಲ್ಲಿ ಸಂಗ್ರಹಿಸಿಕೊಂಡಿದ್ದ ವಚನಕಾರರ ವಿವಿಧ ಕಟ್ಟುಗಳಿಂದ ಒಬ್ಬೊಬ್ಬರನ್ನೇ ಆಯ್ದು, ಆಯಾ ವಚನಗಳಿಗೆ ಸೂಕ್ತ ಶಿರೋನಾಮೆ ಟಿಪ್ಪಣಿ ಬರೆದು, ಶಿವಾನುಭವ ಗ್ರಂಥಮಾಲೆಯ ಮೂಲಕ ಪ್ರಕಟಿಸಿದರು. ದೇವರ ದಾಸಿಮಯ್ಯ, ಚೆನ್ನಬಸವೇಶ್ವರ, ಮಹಾದೇವಿಯಕ್ಕ, ಬಸವೇಶ್ವರ, ಪ್ರಭುದೇವರು, ಹಡಪದಪ್ಪಣ್ಣ, ಲಿಂಗಮ್ಮ, ಸಕಲೇಶ ಮಾದರಸ, ಆದಯ್ಯ, ಸಿದ್ಧರಾಮೇಶ್ವರ,

ಅಂಬಿಗರ ಚೌಡಯ್ಯ, ಉರಿಲಿಂಗಪೆದ್ದಿ, ಮಡಿವಾಳ ಮಾಚಿದೇವ, ಮೆರೆಮಿಂಡದೇವ, ಹಾವಿನಹಾಳ ಕಲ್ಲಿದೇವ, ಸತ್ಯಕ್ಕ, ಮಧುವರಸ, ಬಾಹೂರು ಬೊಮ್ಮಯ್ಯ, ಶಿವಲೆಂಕ ಮಂಚಣ್ಣ, ಏಲೇಶ ಕೇತಯ್ಯ, ಸೊಡ್ಡಳ ಬಾಚರಸ, ಮೋಳಿಗೆ ಮಾರಯ್ಯ, ಮುಂತಾದ ಸಮಾಜದ ನಾನಾ ಸ್ತರಗಳಿಂದ ಬಂದ ವಿವಿಧ ವ್ಯಕ್ತಿಗಳ ವಚನ ಗ್ರಂಥಗಳು ರಾಶಿರಾಶಿಯಾಗಿ ಹೊರಬಂದವು. ಕನ್ನಡದ ಜನತೆಗೆ ವಾಙ್ಮಯದ ಹೊಸ ಲೋಕವೊಂದರ ಪರಿಚಯ ಮಾಡಿಸಿದ ಈ ವಿವಿಧ ವಚನಕಾರರ ಕೃತಿಗಳು, ವಚನ ಸಾಹಿತ್ಯದ ಸಾಮಾಜಿಕ ಆಧ್ಯಾತ್ಮಿಕ ಹಿರಿಮೆಯನ್ನು ಸಾರಿದವು. ಸಮಾಜದ ವಿವಿಧ ಸ್ತರದ ಜನರು, ವಿಶೇಷತಃ ಮಹಿಳೆಯರು ಕೂಡಾ ಅಪಾರ ಸಂಖ್ಯೆಯಲ್ಲಿ ಭಾಗಿಗಳಾಗಿ, ತಮ್ಮ ಆಧ್ಯಾತ್ಮದ ಹಂಬಲ, ಭಕ್ತಿಯ ಸಾಧನೆ, ಮೌಢ್ಯಗಳ ಖಂಡನೆ, ಅಜ್ಞಾನ ಮೂಢನಂಬುಗೆಗಳ ವಿಡಂಬನೆ ಮುಂತಾದ ವಾಸ್ತವ ನೆಲೆಯ ಲೌಕಿಕ ಮತ್ತು ಅಲೌಕಿಕ ಜೀವನಾನುಭವಗಳಿಗೆ ವಚನಗಳ ಅಭಿವ್ಯಕ್ತರೂಪ ಕೊಟ್ಟದ್ದು, ಕನ್ನಡ ನಾಡಿನ ವಿಚಾರವಾದಿ ವಿಮರ್ಶಕರಿಗೆ ಒಂದು ಬಗೆಯ ವಿಸ್ಮಯಕಾರಿ ಅನುಭವ ನೀಡಿದವು.

ಹಳಕಟ್ಟಿಯವರ ವಚನಸಾಹಿತ್ಯಸಂಶೋಧನೆಯ ಮತ್ತೊಂದು ಮಹತ್ವದ ಸಾಧನೆ ಎಂದರೆ, ***ಶೂನ್ಯ ಸಂಪಾದನೆ*** ಕೃತಿಯ ಪ್ರಕಟನೆ. ಅಲ್ಲಮಪ್ರಭು, ಬಸವಣ್ಣ, ಸಿದ್ಧರಾಮ, ಚೆನ್ನಬಸವಣ್ಣ, ಮುಕ್ತಾಯಿ, ಅಕ್ಕಮಹಾದೇವಿ, ಮಡಿವಾಳ ಮಾಚಿದೇವ ಮುಂತಾದ ನೂರಾರು ಶರಣ ಶರಣೆಯರು ಒಂದೆಡೆ ಕುಳಿತು, ತಮ್ಮ ತಮ್ಮ ವಾಸ್ತವ ಬದುಕಿನ ಅನುಭವಗಳನ್ನು ಕಾಯಕ ದಾಸೋಹ, (ಗುರು ಲಿಂಗ ಜಂಗಮ ಮುಂತಾದ), ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ಮುಂತಾದ ತಾತ್ವಿಕ ಅಥವಾ ದಾರ್ಶನಿಕ ಸಂಗತಿಗಳನ್ನು ಅನುಭಾವದ ಬೆಳಕಿನಲ್ಲಿ ಚರ್ಚಿಸುವುದು, ಅನುಭಾವ ವಿನಿಮಯ ಮಾಡಿಕೊಳ್ಳುವುದು; ಅಂತಿಮ ಸತ್ಯ, ಹುಟ್ಟು-ಸಾವು, ಸಾವಿನಾಚೆಯ ಪರಮ ಚೈತನ್ಯದ ದರ್ಶನಾನುಭವ, ಲಿಂಗಾಂಗ ಸಾಮರಸ್ಯ ಇತ್ಯಾದಿ ಗಂಭೀರ ನಿಲುವುಗಳ ಸ್ಫಟಿಕ ಸ್ವರೂಪ ಮತ್ತು ಆಯಾ ವಚನಕಾರರ ವಚನಗಳ ಸಂಭಾಷಣಾತ್ಮಕ ವಿವರಣೆ: ಹೀಗೆ ಒಂದು ಅಪೂರ್ವ ಆಧ್ಯಾತ್ಮಿಕ ಸಾಹಿತ್ಯ ಚರ್ಚೆ ನಮ್ಮ ಕಣ್ಣೆದುರೇ ವಿವಿಧ ದೃಶ್ಯಾವಳಿಗಳಾಗಿ ಮೂಡಿ ಬಂದ ಹಾಗೆ ಪೋಣಿಸಲಾದ ***ಶೂನ್ಯ ಸಂಪಾದನೆ*** ಪ್ರಕಟವಾದ ಬಳಿಕ, ಹನ್ನೆರಡನೆಯ ಶತಮಾನದ ವಚನಸಾಹಿತ್ಯ, ಸಕಲ ಮತ ಧರ್ಮಗಳ ವಿದ್ವಾಂಸರ ಸಾಹಿತ್ಯ ವಿಮರ್ಶಕರ ಗಮನ ಸೆಳೆದು, ನಾಡಿನ ನಾನಾ ಭಾಗಗಳಲ್ಲಿ ಚರ್ಚೆಗೆ ಒಳಗಾಯಿತು; ಅವರನ್ನು ಗಂಭೀರ ಚಿಂತನೆಯಲ್ಲಿ ತೊಡಗಿಸಿತು. ***ಸಟೀಕ ಶೂನ್ಯ ಸಂಪಾದನೆ ಭಾಗ – ೧*** ಗೂಳೂರು ಸಿದ್ಧವೀರಣಾಚಾರ್ಯರ ***ಶೂನ್ಯಸಂಪಾದನೆ*** ಮತ್ತು ***ಶೂನ್ಯಸಂಪಾದನೆ ಭಾಗ ಐದರ*** ವರೆಗೆ ಹೊರಬಂದ ಗ್ರಂಥದ ಟಿಪ್ಪಣಿ ಪ್ರಸ್ತಾವನೆಗಳು, ಹಳಕಟ್ಟಿಯವರ ಸಂಶೋಧನೆಗೆ ಮೌಲಿಕತೆಯನ್ನು ತಂದುಕೊಟ್ಟವು.

ಅದುವರೆಗೆ ಕನ್ನಡ ಜನತೆಗೆ ತಿಳಿದಿದ್ದ ವಚನಕಾರರ ಸಂಖ್ಯೆ ಕೇವಲ ೪೦–೫೦ ಆಗಿದ್ದರೆ, ಹಳಕಟ್ಟಿಯವರ ಅವಿರತ ಪರಿಶ್ರಮದಿಂದಾಗಿ, ಮೂರುನೂರಕ್ಕೂ ಹೆಚ್ಚು ವಚನಕಾರರು ಕಗ್ಗತ್ತಲ ಗವಿಯಿಂದ ಹೊರಬಂದು ವಾಙ್ಮಯಲೋಕಕ್ಕೆ ಬೆಳಕು ಚೆಲ್ಲಿದರು. ತಮ್ಮ ಅನ್ವೇಷಣೆಯ ಫಲವಾಗಿ ದೊರೆತ ಅಸಂಖ್ಯಾತ ಶಿವಶರಣ ಶರಣೆಯರ ಜೀವನ ಚರಿತ್ರೆಗಳನ್ನು, ಲಭ್ಯವಿದ್ದ ವಿವಿಧ ಆಕರ ಸಾಮಗ್ರಿಗಳ ಆಧಾರದಿಂದ ರಚಿಸಿ ಮತ್ತೆ ಕೆಲವು ಕೃತಿಗಳನ್ನು ಬೆಳಕಿಗೆ ತಂದರು. ***ಶಿವಶರಣರ ಚರಿತ್ರೆಗಳು ಭಾಗ–೧, ಆರವತ್ತು ಮೂರು ಶಿವಶರಣರ ಚರಿತ್ರೆಗಳು ಭಾಗ–೨, ಶಿವಶರಣರ ಚರಿತ್ರೆಗಳು ಭಾಗ–೩*** (ಅನುಕ್ರಮವಾಗಿ ೧೯೪೪, ೧೯೪೫, ೧೯೫೦ ರಲ್ಲಿ) ಪ್ರಕಟವಾಗಿ ವಿವಿಧ ನೆಲೆ ಮೂಲಗಳಿಂದ ಬಂದ ವಚನಕಾರರ ಜೀವನ ವಿವರಗಳನ್ನು ಅವರ ವಾಸ್ತವ ಜೀವನಕ್ಕೂ ಮತ್ತು ಶಿವಶರಣರು ಹಮ್ಮಿಕೊಂಡ ಹೊಸ ಸಮಾಜ ನಿರ್ಮಾಣ ಪರಿಕಲ್ಪನೆಯ ತತ್ವಗಳಿಗೂ – ವಿಶೇಷತಃ ಪಾಪ ಪುಣ್ಯ, ನರಕ ಸ್ವರ್ಗ, ನಡೆನುಡಿ, ಮೇಲುಕೀಳು, ಕಾಯಕ ದಾಸೋಹ ಇತ್ಯಾದಿ – ಇರಬಹುದಾದ ಸಂಬಂಧ ವಿವರಿಸಿದ ಶರಣ ಶರಣೆಯರ ಚಾರಿತ್ರ್ಯಗಳು, ಹೊಸ ಚಿಂತನೆಗೆ ಚಾಲನೆ ಒದಗಿಸಿದುವು.

***ಶಿವಶರಣರ ಚರಿತ್ರೆಗಳು ಭಾಗ–೩*** ರ ಪ್ರಸ್ತಾವನೆಯ ಕೆಲವು ಮಾತು ಹೀಗಿವೆ:

> "......ಮೂರನೆಯ ಭಾಗದಲ್ಲಿ ೨೮ ಜನರ ಚರಿತ್ರೆಗಳು ಬಂದಿವೆ. ಈ ಭಾಗವು ಹಿಂದಿನ ಗ್ರಂಥಗಳಿಗಿಂತಲೂ ಭಿನ್ನತೆರನಾದದ್ದಿದೆ. ವೀರಶೈವ ಮತವು ಕರ್ನಾಟಕ ದೇಶದ ಹೊರಗೆ ಹಿಂದೂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಪ್ರಚಾರವಾಗಿದ್ದುಂಟು. ಇದರಲ್ಲಿ ದೇವರ ದಾಸಿಮಯ್ಯ ಮೊದಲಾದ ಒಂಬತ್ತು ಜನ ಶಿವಶರಣರ ಚರಿತ್ರೆಗಳು ಬಂದಿವೆ. ಅಲ್ಲದೆ ಆಂಧ್ರದೇಶದವರು ಆರು ಜನರು, ಗುಜರಾತದವರು ಇಬ್ಬರು, ಹಿಂದೂಸ್ಥಾನದ ಬೇರೆ ಪ್ರಾಂತದವರು ಆರು ಜನರು ಮತ್ತು ಪರದೇಶಗಳಿಗೆ ಪ್ರವಾಸ ಮಾಡಿದವರು ನಾಲ್ವರು ಹೀಗೆ ೨೮ ಜನ ಶಿವಶರಣರ ಚರಿತ್ರೆಗಳು ಇದರಲ್ಲಿ ಬಂದಿವೆ."
>
> **(ಪ್ರಸ್ತಾವನೆಯಿಂದ)**

ಮೂರನೆಯ ಭಾಗದ ವಸ್ತುವೈವಿಧ್ಯ ಮತ್ತು ಚಾರಿತ್ರಿಕ ವಿವರಗಳನ್ನು ಗಮನಿಸಿದರೆ ಹಳಕಟ್ಟಿಯವರ ವ್ಯಾಸಂಗದ ಬೃಹತ್ ರೂಪದ ಅರಿವಾಗುತ್ತದೆ.

ಒಂದು ಕ್ರಮಕ್ಕೆ, ಒಂದೇ ಬಾರಿಗೆ ಅಳವಡಿಸಲು ಸುಲಭವಾಗದ ವಚನ ಸಂಕಲನಗಳನ್ನು, ಹಳಕಟ್ಟಿಯವರು ***ಶಿವಶರಣರ ಸಂಕೀರ್ಣ ವಚನಗಳು*** ಎಂದು ಹೆಸರಿಸಿ ಎರಡು ಭಾಗಗಳಲ್ಲಿ (ಭಾಗ–೧, ಭಾಗ–೨) ಪ್ರತ್ಯೇಕವಾಗಿ ಪ್ರಕಟಿಸಿದ್ದಾರೆ. ***ಶಿವಾನುಭವ ಸೃಷ್ಟಿಯ ವಚನಗಳು, ಶಿವಯೋಗಾಚರಣೆ, ಭಕ್ತಿಯ ವಚನಗಳು,***

***ಪರಮಾತ್ಮನ ಸ್ವರೂಪ*** ಹೀಗೆ ಹಲವು ಹತ್ತಾರು ಕೃತಿಗಳು ವಚನ ಸಾಹಿತ್ಯ ಮತ್ತು ಅದರಲ್ಲಿ ಅಡಕಗೊಂಡ ವಿಶೇಷ ತತ್ವವಿವೇಚನೆಗಳನ್ನು ತೆರೆದು ತೋರಿಸಿದುವು.

ಇಂದು ಶಿವಶರಣರ ಸ್ವರವಚನವೆಂದು ಕರೆಯಲ್ಪಡುವ ಸಾಹಿತ್ಯ ಪ್ರಕಾರವನ್ನು ಮತ್ತು ವಚನಗಳನ್ನು ರಾಗಬದ್ಧವಾಗಿ ಹಾಡುವ ಪರಂಪರೆಯನ್ನು ಹಳಕಟ್ಟಿಯವರು ಅಂದೇ ಗುರುತಿಸಿದಂತೆ ತೋರುತ್ತದೆ. ***ಶಿವಶರಣರ ಸಂಗೀತ ವಚನಗಳು, ಶಿವಶರಣರ ಪದಗಳು, ಸಂಗೀತದಲ್ಲಿ ಶಿವಶರಣರ ವಚನಗಳು*** ಮುಂತಾದುವುಗಳನ್ನು ಈ ದೃಷ್ಟಿಯಿಂದ ಪರಿಶೀಲಿಸಬಹುದು. ಹಳಕಟ್ಟಿಯವರು ಈ ನಿಟ್ಟಿನಲ್ಲಿ ಮಾಡಿದ ಮತ್ತೊಂದು ಮಹತ್ವದ ಕಾರ್ಯ, ಶಬ್ದಕೋಶ ನಿರ್ಮಾಣ. ವಚನ ವಾಙ್ಮಯದ ಅಧ್ಯಯನ ಮಾಡುತ್ತಾ ಹೋದಂತೆಲ್ಲ ಅವರಿಗೆ ಅನೇಕ ಪಾರಿಭಾಷಿಕ ಪದಗಳು ದೃಗ್ಗೋಚರವಾದುವು. ***ಬಯಲು, ಗಳಿಕೆ, ಸರ್ವಾಂಗಲಿಂಗ, ಸದಾಚಾರ, ಸಂಪಾದನೆ, ಅಂಗ, ಲಿಂಗ, ಕ್ರಿಯೆ, ಕಾಯಕ*** ಹೀಗೆ ಕೆಲವು ವೀರಶೈವ ತಾತ್ವಿಕ ವಿವೇಚನೆಗೆ ಸಂಬಂಧಿಸಿದ ವಿಶಿಷ್ಟ ಪದ, ನುಡಿಗಟ್ಟುಗಳನ್ನು ಟಿಪ್ಪಣಿ ಮಾಡುತ್ತಾ ಅವುಗಳ ವಿಶೇಷಾರ್ಥವನ್ನು ಗುರುತಿಸುತ್ತ ಬಂದರು. ಕೊನೆಗೆ ವಚನ ವಾಙ್ಮಯದಲ್ಲಿ ಪ್ರತಿಪಾದಿತವಾದ ಶಿವಾನುಭವ ಸಾಧನೆಗೆ, ಈ ಪಾರಿಭಾಷಿಕ ಪದಗಳು ಸಂಬಂಧಿಸಿವೆ ಎಂದು ಭಾವಿಸಿ, ಅಂಥ ಎಲ್ಲ ತಾಂತ್ರಿಕ ಶಬ್ದಗಳನ್ನು ವಿವರಣೆಯೊಂದಿಗೆ ಕ್ರಮಗೊಳಿಸಿ, ***ಶಿವಾನುಭವ ಶಬ್ದಕೋಶ*** ಎಂದು ಹೆಸರಿಸಿ ಪ್ರಕಟಿಸಿದರು. ಇದರಿಂದಾಗಿ, ವಚನ ಸಾಹಿತ್ಯದ, ಅನುಭಾವಪಥದ ಅಭ್ಯಾಸಿಗಳಿಗೆ, ಒಂದು ಮಾರ್ಗದರ್ಶನ ದೊರೆತಂತಾಯಿತು. ಅವರು ಮಾಡಿದ ವಚನ ಸಾಹಿತ್ಯದ ಕಾರ್ಯವನ್ನು ಅಂದಿನ ಅನೇಕ ವಿದ್ವಾಂಸರು, ಆಲೋಚಕರು ಸಾಹಿತ್ಯ ವಿಮರ್ಶಕರು ಮನವಾರೆ ಮೆಚ್ಚಿ ಹೊಗಳಿದರು. ಅವರಲ್ಲಿ ಹಾನಗಲ್ಲ ಕುಮಾರಸ್ವಾಮಿಗಳು, ಹರ್ಡೇಕರ ಮಂಜಪ್ಪ, ಕೆ.ಪಿ. ಪುಟ್ಟಣ್ಣ ಶೆಟ್ಟರು, ಹಾಲಭಾವಿ ವೀರಭದ್ರಪ್ಪ, ಬಿ.ಎಂ. ಶ್ರೀ., ಎಂ.ಆರ್. ಶ್ರೀ., ರಂ.ರಾ. ದಿವಾಕರ, ಅ.ನ.ಕೃ.,ಆರ್. ನರಸಿಂಹಾಚಾರ್ಯ ಮೊದಲಾದವರು ಪ್ರಮುಖರು.

## ಸಂಶೋಧನಾ ವಿಧಾನ

ಹಳಕಟ್ಟಿಯವರ ಸಂಶೋಧನೆಯ ರೀತಿಯಾಗಲಿ, ಬರವಣಿಗೆಯ ಕ್ರಮವಾಗಲಿ, ಯಾವುದೇ ಹಟ ಅಥವಾ ಛಲಸಾಧನೆಯಿಂದ ಕೂಡಿರಲಿಲ್ಲ. ವಿವಿಧ ಆಕರಗಳನ್ನು ಆಧರಿಸಿ ಒಂದು ಚರಿತ್ರೆ ರಚಿಸುವಾಗ, ಲೇಖನ ಬರೆದಾಗ ಅಥವಾ ಒಂದು ಕೃತಿ ಸಂಪಾದಿಸುವಾಗ ಕೆಲವೊಮ್ಮೆ ತಪ್ಪುಗಳು ನುಸುಳಿ ಬರಬಹುದು. ಅದನ್ನು ಇತರರು ಸಾಧಾರ ಬರೆದು ವಿವರಿಸಿದಾಗ ತಮ್ಮ ತಪ್ಪನ್ನು ತಿದ್ದಿಕೊಳ್ಳುವ ಒಂದು ಒಳ್ಳೆಯ ಮನಸ್ಸು ಹಳಕಟ್ಟಿಯವರದಾಗಿತ್ತು. ಪಾಲ್ಕುರಿಕೆ ಸೋಮನಾಥನ ಸ್ಥಳದ ಬಗ್ಗೆ ತಾವು ಬರೆದುದು ಸರಿಯಲ್ಲ ಎನ್ನುವ ಅಂಶ, ಬಂಡಾರು ತಮ್ಮಯ್ಯನವರಿಂದ ತಿಳಿದು,

ಮನವರಿಕೆಯಾದಾಗ ಅದನ್ನು ತಿದ್ದಿಕೊಂಡರು. ಅದೇ ರೀತಿ ತಾವು ನುಲಿಯಚಂದಯ್ಯನನ್ನು ಕುರಿತು ಬರೆದ ಲೇಖನದಲ್ಲಿ ತಾವು ಹೇಳಿದ ಆತನ ಊರಿನ ಹೆಸರು ಸರಿಯಲ್ಲ ಎನ್ನುವ ಸಂಗತಿ 'ಶಿವಾನುಭವ' (ಸಂ. ೨೧-೩) ದಲ್ಲಿ ಬೆಳಕು ಕಂಡ ಶ್ರೀ ಸದಾಶಿವ ಶಿವಾಚಾರ್ಯರ ಲೇಖನದಿಂದ ಗೊತ್ತಾದಾಗ, ಅದನ್ನು ಕೂಡಲೇ ಒಪ್ಪಿಕೊಂಡು ಸರಿಪಡಿಸಿಕೊಂಡರು. ಹಳಕಟ್ಟಿಯವರ ಸಂಶೋಧನ ರೀತಿಗೆ ಒಂದು ವೈಜ್ಞಾನಿಕ ನೆಲೆಯಿತ್ತು ಎನ್ನುವುದಕ್ಕೆ ಒಂದು ಉದಾಹರಣೆ ಕೊಡಬಹುದು.

ದೇವರ ದಾಸಿಮಯ್ಯನ ಚರಿತ್ರೆ ಬರೆಯುವ ಸಂದರ್ಭದಲ್ಲಿ ಅವರು ಅನೇಕ ಮೂಲಗಳಿಂದ ಆಕರ ಸಾಮಗ್ರಿ ಸಂಗ್ರಹಿಸಿದ್ದಾರೆ.

ಅ. 'ಶಿವಶರಣ ವಿಲಾಸ' ಕೃತಿಯ ೧೬ನೆಯ ಸಂಧಿಯಲ್ಲಿ ಬರುವ ದೇವರ ದಾಸಿಮಯ್ಯನ ಕಥೆ.
ಆ. ಬಸವೇಶ್ವರ ಪುರಾಣದ ಕಥಾಸಾರ
ಇ. ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ
ಈ. ಶಿವಕಥಾಸಾರ
ಉ. ಬಸವಪುರಾಣ
ಊ. ಬಸವೇಶ್ವರ ವಚನ ಕಥಾಸರಿಸತ್ಸಾಗರ
ಋ. ರಾಘವಾಂಕನ ದೇವಾಂಗ ಪುರಾಣ
ೠ. ಮನುಪುರಾಣ
ಎ. ವಿರೂಪಾಕ್ಷಕವಿಯ ದೇವರ ದಾಸಿಮಯ್ಯ ಪುರಾಣ
ಏ. ದೇವರ ದಾಸಿಮಯ್ಯನ ಲಾವಣಿ
ಐ. ದೇವರ ದಾಸಿಮಯ್ಯನ ವಚನಗಳು
ಒ. ದೇವರ ದಾಸಿಮಯ್ಯನ ಬಗ್ಗೆ ಪ್ರಕಟಿತ ಲೇಖನಗಳು
ಓ. ಪಂಪಾಶತಕ
ಔ. ಹಂಪೆಯ ರಗಳೆ
ಅಂ. ಲಿಂಗಾರ್ಚನಾ ರಗಳೆ
ಅಃ. (ದೇವರ ದಾಸಿಮಯ್ಯ, ಚಾಲುಕ್ಯ ಜಯಸಿಂಹ, ಸುಗ್ಗಲೆ ಉಲ್ಲೇಖವಿರುವ) ಶಾಸನಗಳು.

ಶಾಸನ, ಕಾವ್ಯ, ಪುರಾಣ, ವಚನ, ರಗಳೆ, ಜಾನಪದ-ಲಾವಣಿ ಮುಂತಾದ ವಿವಿಧ ಆಕರಗಳಿಂದ ಚಾರಿತ್ರಿಕವೆಂದು ತೋರಿದ ಅಂಶಗಳನ್ನು ಆಯ್ದು ಸಂಯೋಜಿಸಿ, ಹೆಚ್ಚು ವಿಶ್ವಾಸಾರ್ಹವೆಂದು ಮನಗಂಡ ಸಂಗತಿಗಳ ಪುನರಾವಲೋಕನ ಮಾಡಿ, ದೇವರ ದಾಸಿಮಯ್ಯನ ಚರಿತೆ ರಚಿಸಿದರು.

ಹಳಕಟ್ಟಿಯವರ ಈ ಪ್ರಯತ್ನ, ಸಂಶೋಧಕನಲ್ಲಿ ಅತ್ಯಗತ್ಯವಾಗಿ ಇರಬೇಕಾದ ವೈಜ್ಞಾನಿಕ ದೃಷ್ಟಿ, ಪ್ರಾಮಾಣಿಕ ಪರಿಶ್ರಮ ಗುಣಗಳನ್ನು ಎತ್ತಿ ತೋರಿಸುತ್ತದೆ.

ವಚನಶಾಸ್ತ್ರಸಾರ ಗ್ರಂಥ ಪ್ರಕಟನೆಯಾದ ಬಳಿಕ, ಹಳಕಟ್ಟಿಯವರ ಅಪೂರ್ವ ಸಂಶೋಧನಾ ಕಾರ್ಯಕ್ಕೆ ಮನಸೋತ ಕೆಲವರು, ಅವರಿಗೆ ಪತ್ರ ಬರೆದು, ವಿಮರ್ಶಾ ಲೇಖನ ಬರೆದು, ತಮ್ಮ ಮೆಚ್ಚುಗೆ ಪ್ರಶಂಸೆ ಸೂಚಿಸಿದ್ದರು. ೩೦ ವರ್ಷಗಳ ಬಳಿಕ ತಮ್ಮ ಶಿವಾನುಭವ ಪತ್ರಿಕೆಯ ೨೫ನೆಯ ವರ್ಷದ ವರದಿ (ಪುಟ ೪೩೦)ಯಲ್ಲಿ ಹಳಕಟ್ಟಿ, ಆ ಸಂಗತಿ ಕುರಿತು ಬರೆಯುತ್ತ ಈ ಕೆಳಗಿನಂತೆ ವಿವರಿಸಿದ್ದಾರೆ:

> "ವಚನಶಾಸ್ತ್ರಸಾರ ಗ್ರಂಥವು ಹೊರಬಿದ್ದ ಬಳಿಕ ಅನೇಕ ಮಹನೀಯರು ಅದನ್ನು ಬಹಳವಾಗಿ ಹೊಗಳಿ ನನಗೆ ಪತ್ರವನ್ನು ಬರೆದರು. ಸಾಹಿತ್ಯ ಪರಿಷತ್ತಿನ ಸೆಕ್ರೆಟರಿಗಳಾದ ದಿ. ವೆಂಕಟನಾರಣಪ್ಪನವರು 'ಕನ್ನಡ ಭಾಷೆಯಲ್ಲಿ ಶಾಶ್ವತವಾದ ,ಒಂದು ಗ್ರಂಥವನ್ನು ನೀವು ನಿರ್ಮಿಸಿದ್ದೀರಿ' ಎಂದು ನನಗೆ ಪತ್ರ ಬರೆದರು. ದಿ. ಆರ್. ನರಸಿಂಹಾಚಾರ್ಯರು 'ವಚನ ವಾಙ್ಮಯದಲ್ಲಿ ಮಹತ್ವದ ಸಂಶೋಧನೆ ಮಾಡಿದಿ'ರೆಂದು ತಿಳಿಸಿದರಲ್ಲದೆ, ಈ ವಿಷಯವಾಗಿ ಕಾಲಕಾಲಕ್ಕೆ ತಮ್ಮ ಸಲಹೆ ಸೂಚನೆ ಮಾಡುತ್ತ ಬಂದರು.... ಅವರು ತಮ್ಮ ಮನ್ನಣೆಯನ್ನು ತೋರಿಸಲು ಕೆಲವೊಂದು ಕಾಣಿಕೆಗಳನ್ನು ಸಹ ಕಳಿಸಿದರು. ಶ್ರೀಯುತ ಬೆನಗಲ್ಲ ರಾಮರಾಯರು ೧೯೨೫ ರಲ್ಲಿ ಬೆಳಗಾಂವಿಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ್ಗೆ ಅವರು ತಮ್ಮ ಭಾಷಣದಲ್ಲಿ 'ವಚನಶಾಸ್ತ್ರಸಾರ' ಗ್ರಂಥವು ಕನ್ನಡ ಭಾಷೆಯಲ್ಲಿ ಈಚೆಗೆ ಹೊರಬಿದ್ದ ಗ್ರಂಥಗಳಲ್ಲಿ ಮಹತ್ವವಾದುದೆಂದು ವರ್ಣಿಸಿದರು. ಕೈ.ವಾ. ಕೆ.ಪಿ. ಪುಟ್ಟಣ್ಣ ಶೆಟ್ಟರು ಕೆಲವೊಬ್ಬ ತಮಿಳು ದೇಶದ ಪಂಡಿತರು ಈ ಗ್ರಂಥವನ್ನು ನೋಡಿದ ಬಳಿಕ ತಮಿಳು ವಾಙ್ಮಯದಲ್ಲಿ ಐದನೆಯ ವೇದವೆಂದು ಕರೆಯಲ್ಪಡುವ ಸರ್ವಮಾನ್ಯವಾದ ಗ್ರಂಥವೊಂದಿದ್ದು, ವಚನಶಾಸ್ತ್ರಸಾರವು ಅದಕ್ಕೂ ಹೆಚ್ಚಿನ ತರಗತಿಯದೆಂದು ಅಭಿಪ್ರಾಯಪಟ್ಟಿದ್ದನ್ನು ನನಗೆ ತಿಳಿಸಿದರು...."

ಈ ಬಗೆಯ ಮುಕ್ತ ಮನಸ್ಸಿನ ಮಾತುಗಳಿಂದ ಹಳಕಟ್ಟಿಯವರಿಗೆ ಅಧಿಕ ಉತ್ತೇಜನ ದೊರೆತು, ತಾವು ಇನ್ನೂ ಸಾಧಿಸುವುದು ಬಹಳ ಇದೆ ಎನ್ನುವ ಆಂತರಿಕ ತುಡಿತ ಅಭೀಪ್ಸೆಗಳು ಮೂಡಿ, ಅವರನ್ನು ಮುನ್ನಡೆಸಿದುವು.

## ಕಾವ್ಯಸಂಪಾದನೆ – ಸಾಹಿತ್ಯಸೇವೆ

ಹಳಕಟ್ಟಿಯವರು ವಚನ ಸಾಹಿತ್ಯದ ಜೊತೆಜೊತೆಗೆ ಇತರ ಕಾವ್ಯಕೃತಿಗಳ ಸಂಪಾದನೆ ಪ್ರಕಟನೆಯ ಕಾರ್ಯವನ್ನೂ ಕೈಕೊಂಡರು. ಭಕ್ತಕವಿಯೆಂದೂ, ರಗಳೆಯ

ಕವಿಯೆಂದೂ ಖ್ಯಾತನಾದ ನಡುಗನ್ನಡದ ಮಹಾಕವಿ ಹರಿಹರನ ಕಾವ್ಯಗಳನ್ನು ಬೆಳಕಿಗೆ ತಂದ ಶ್ರೇಯಸ್ಸು, ಹಳಕಟ್ಟಿಯವರಿಗೆ ಸಲ್ಲುತ್ತದೆ.

ಹರಿಹರ ಕವಿಯ ರಗಳೆಗಳನ್ನು ಭಾಗ ಒಂದರಿಂದ ಭಾಗ ಎಂಟರವರೆಗೆ ಸಂಪಾದಿಸಿ, ಮುದ್ರಿಸಿ ಪ್ರಕಟಿಸಿದರು.

ಹನ್ನೆರಡನೆಯ ಶತಮಾನದ ಸಾಮಾಜಿಕ ಕ್ರಾಂತಿಯ ಕಾರ್ಯದಲ್ಲಿ ನೇರವಾಗಿ ಪಾಲುಗೊಂಡು, ಅಪಾರ ವಚನ ವಾಙ್ಮಯ ರಚಿಸಿದ ಅನೇಕ ಶರಣ ಶರಣೆಯರ ಜೀವನ ಚರಿತ್ರೆಗಳು, ರಗಳೆ ಕಾವ್ಯಗಳ ಕಥಾವಸ್ತು. ಸರಳ ಭಾಷೆಯ ಸಹಜ ಶೈಲಿಯ ರಮ್ಯ ನಿರೂಪಣೆಯ ಈ ರಗಳೆ, ಹರಿಹರನಿಗೆ ಸಹಜ ಸಿದ್ಧಿಯಾದ ಕಾವ್ಯಪ್ರಕಾರ. ಓದಿದ ಕೂಡಲೇ ತಟ್ಟನೆ ಹೃದಯಕ್ಕೆ ಸಂವಹನಗೊಳ್ಳುವ ಈ ಶೈಲಿ, ಹಳಕಟ್ಟಿಯವರ ಮನಸೆಳೆಯಿತು. ಎಲ್ಲಕ್ಕೂ ಮಿಕ್ಕಿ ಈ ಕಾವ್ಯರೂಪದ ಚರಿತೆಗಳು, ತಾವು ಕೈಕೊಂಡ ವಚನ ವಾಙ್ಮಯ ವಿವೇಚನೆ ಸಂಶೋಧನೆಗೆ ಮಹತ್ವದ ಪೂರಕಾಂಗವೆಂದು ಅವರು ಮನಗಂಡರು. ಅದಕ್ಕಾಗಿ ಅಹರ್ನಿಶಿ ಶ್ರಮವಹಿಸಿ, ಹರಿಹರ ಕವಿಯು ನಿರೂಪಿಸಿದ ಶರಣ ಶರಣೆಯರ ಕಾವ್ಯರೂಪದ ಚರಿತ್ರೆಗಳನ್ನು ಪ್ರಕಟಿಸಿದರು. ***ಪುಷ್ಪರಗಳೆ, ತಿರುನೀಲಕಂಠರ ಮಹಾತ್ಮೆ ಕಣ್ಣಪ್ಪನ ಮಹಾತ್ಮೆ ಚನ್ನಯ್ಯಗಳ ಮಹಾತ್ಮೆ ಇಳೆಯಾಂಡ ಗುಡಿಮಾರರ ಮಹಾತ್ಮೆ ಪ್ರಭುದೇವರ ರಗಳೆ, ರೇವಣಸಿದ್ಧೇಶ್ವರ ರಗಳೆ, ಶಂಕರ ದಾಸಿಮಯ್ಯನ ರಗಳೆ, ಆದಯ್ಯನ ರಗಳೆ*** ಇತ್ಯಾದಿ ಮೂರನೆಯ ಭಾಗದವರೆಗೆ ಪ್ರಕಟವಾದ ಚರಿತೆಗಳು, ತಮಿಳುನಾಡಿನ ಶೈವಪರಂಪರೆ ಮತ್ತು ಭಕ್ತಿಪ್ರಭಾವಗಳು ಕರ್ನಾಟಕದ ಶರಣರ ಭಕ್ತಿಮಾರ್ಗಕ್ಕೆ ಮತ್ತು ನಂತರದ ಸಾಮಾಜಿಕ ಪರಿವರ್ತನೆಯ ಸಾಮೂಹಿಕ ಆಂದೋಲನಕ್ಕೆ – ನೇರವಾಗಿ ಅಲ್ಲದಿದ್ದರೂ – ಅಪರೋಕ್ಷವಾಗಿ ಪ್ರೇರಕವಾಗಿದ್ದುವು. ಈ ಹಿನ್ನೆಲೆಯ ಕೆಲವು ಶರಣ ಶರಣೆಯರನ್ನು ಕುರಿತ ಹರಿಹರನ ಕಾವ್ಯ–ಚರಿತ್ರೆಗಳನ್ನು, ಹಳಕಟ್ಟಿಯವರು ಸಂಪಾದಿಸಿ ಪ್ರಕಟಿಸಿದರು. ಅವುಗಳಲ್ಲಿ:

೧. ಕಾರಿಕಾಲಮ್ಮೆ,
೨. ತಿರುನಾಳ್ವರ್,
೩. ರುದ್ರ ಪಶುಪತಿ,
೪. ತಿರುಕುರಂಪೆ ತೊಂಡರು,
೫. ಅರಿವಾಳ್ತಾಂಡರು,
೬. ಒಲಘಾಂಡ ಮೂರ್ತಿಗಳು,
೭. ಮುರುಘರು,
೮. ಅಯ್ಯಡಿಯರು,
೯. ಮಾನಕಂಜರು

–ಮುಂತಾದುವು ತಮಿಳುನಾಡಿನ ಕೆಲವು ಭಕ್ತರಿಗೆ ಸಂಬಂಧಿಸಿವೆ.

ಬಾಣ, ಉದ್ಭಟದೇವ, ಕೆಂಭಾವಿ ಬೋಗಣ್ಣ, ಕೇಶಿರಾಜ ದಣ್ಣಾಯಕ, ಕುಂಬರ ಗುಂಡಯ್ಯ, ಹಾವಿನಹಾಳ ಕಲ್ಲಿದೇವ ಮುಂತಾದುವು, ಮತ್ತೆ ಮಿಕ್ಕಿದ ಭಕ್ತ–ಶರಣರ ಚರಿತ್ರೆಗಳಾಗಿವೆ.

ಭಕ್ತಿ ಪರವಶನಾಗಿ 'ಪಂಪಾಶತಕ', 'ರಕ್ಷಾಶತಕ' ಗಳನ್ನು ರಚಿಸಿ ಹಾಡಿ ಕುಣಿದ ಹರಿಹರ, 'ಗಿರಿಜಾ ಕಲ್ಯಾಣ ಮಹಾಪ್ರಬಂಧ', 'ಬಸವರಾಜದೇವರ ರಗಳೆ', 'ನಂಬಿಯಣ್ಣನ ರಗಳೆ' ಮುಂತಾದ ಉನ್ನತ ಮಟ್ಟದ ಕಾವ್ಯಕೃತಿಗಳನ್ನು ರಚಿಸಿ ಕನ್ನಡ ಕಾವ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿದ, ತನ್ನ ಕಾಲದಲ್ಲಿಯೇ ಖ್ಯಾತನಾದ, ಅದ್ವಿತೀಯ ಪ್ರತಿಭೆಯ ಕವಿ. ಮಾನವರು ತನಗೇನು ಕೊಟ್ಟಾರು? ಬೇಡಿದರೆ ಆ ಮಹಾಮಹಿಮ ಪಂಪಾವಿರೂಪಾಕ್ಷನನ್ನೇ ಬೇಡಬೇಕು ಎಂದು ಸರ್ವಾರ್ಪಣ ಭಾವದಿಂದ ಕಾವ್ಯ ಸೃಷ್ಟಿಸಿದ ಹರಿಹರ, ಕನ್ನಡ ಸಾರಸ್ವತ ಪ್ರಪಂಚದ ಅಲೌಕಿಕ ಕವಿ; ದಾರ್ಶನಿಕ ಕವಿ. ಈ ಕವಿಯನ್ನು ಕುರಿತು ಅಂದು ತಮ್ಮ ಪಿಎಚ್.ಡಿ ಪ್ರಬಂಧ ರಚನೆಗೆ ತೊಡಗಿದ್ದ ಕೆ. ಈಶ್ವರನ್ (ಇಂದು ಅವರು ಕೆನಡಾದಲ್ಲಿ ನೆಲೆಸಿದ ಅಂತರರಾಷ್ಟ್ರೀಯ ಖ್ಯಾತಿಯ ಪ್ರಾಧ್ಯಾಪಕ, ಸಮಾಜ ವಿಜ್ಞಾನಿ ಡಾ. ಕೆ. ಈಶ್ವರನ್) ೧೯೫೩ ರಲ್ಲಿ ಶ್ರೀ ಹಳಕಟ್ಟಿಯವರನ್ನು ಹುಡುಕಿಕೊಂಡು ಹೋದ ಪ್ರಸಂಗದ ನೆನಪನ್ನು ಈ ರೀತಿ ವಿವರಿಸುತ್ತಾರೆ:

**('ವಚನ ಪಿತಾಮಹ' ಹಳಕಟ್ಟಿ ಸ್ಮಾರಕ ಗ್ರಂಥ, ವಿಜಾಪುರ, ೧೯೬೮, ಪು.೫೯–೬೦)**

"೧೯೫೩ ನೆಯ ಇಸವಿಯ ನವಂಬರ್ ತಿಂಗಳಿನ ಪ್ರಾರಂಭದಲ್ಲಿ ಹರಿಹರನ (ಕುರಿತ ಅಧ್ಯಯನದ) ವಿದ್ಯಾರ್ಥಿಯಾದ ನಾನು ಅಣ್ಣನವರನ್ನು ಹುಡುಕಿಕೊಂಡು ಹೋಗಬೇಕಿತ್ತು.... ಮನೆಯ ಹೊರಗಿನ ಕೋಣೆಯಲ್ಲಿ ಅಣ್ಣನವರು ತಾಡೋಲೆಯ ಗ್ರಂಥಗಳ ಮಧ್ಯದಲ್ಲಿ ಹುದುಗಿಕೊಂಡಿದ್ದರು.... ಗ್ರಂಥ ರಾಶಿಯ ನಡುವೆ "ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು" ಎನ್ನುತ್ತಾ ಕುಳಿತ ಅಣ್ಣನವರನ್ನು ಕಂಡೆ.....

ಹರಿಹರನ ರಘಟಾ ಕಾವ್ಯದ ಓಲೆಗರಿಗಳನ್ನು ನನಗೆ ಒದಗಿಸಿಕೊಟ್ಟು.... ಹೊರಟು ಹೋದರು..... ಕಾರ್ಯ ಮುಗಿಸಿಕೊಂಡು ಅಪರಾಹ್ನದಲ್ಲಿ ತಿರುಗಿ ಬಂದರು; ನಾನಿನ್ನೂ ಕುಳಿತಿದ್ದೆ.....ಸಾಹಿತ್ಯದ ಚರ್ಚೆಯನ್ನು ನಾನು ಅವರ ಮುಂದಿರಿಸಿದಾಗ..... ಹಸಿವನ್ನು ಮರೆತು ಮಾತಿನಲ್ಲಿ ತೊಡಗಿದ್ದರು.... ವೀರಶೈವ ಸಾಹಿತ್ಯವೇ ಅವರ ಜೀವನ. ವಿಶ್ವಸಾಹಿತ್ಯ ಮತ್ತು ಸಂಸ್ಕೃತಿಯ ಆರಾಧನೆಯ ಮೂಲಕ, ಅಣ್ಣನವರು ತಮ್ಮ ಜೀವನದ ಸೌಂದರ್ಯವನ್ನು ಹೆಚ್ಚಿಸಿಕೊಂಡು, ನಮ್ಮ ನಾಡಿನ ಧರ್ಮ ಮತ್ತು ಸಾಹಿತ್ಯದ ಆರಾಧಕರಿಗೆ

ಹರಿಹರ ಕವಿಯ ಕಾವ್ಯದ ಇನ್ನು ಕೆಲವು ಕೃತಿಗಳು, ಆ ಕವಿಯ ವ್ಯಕ್ತಿ ವೈಶಿಷ್ಟ್ಯದ ಭಕ್ತಿ–ಸಾಧನೆ, ಭಕ್ತಿ ಪರವಶತೆ, ದಾರ್ಶನಿಕ ಗುಣಲಕ್ಷಣಗಳನ್ನು ಒಳಗೊಂಡಿವೆ. ಆ ಬಗೆಯ ಮತ್ತೆ ಕೆಲವು ರಗಳೆಗಳನ್ನು ಹಳಕಟ್ಟಿಯವರು ಸಂಪಾದಿಸಿ, ಆತನ ಕವಿತಾ ಸಾಮರ್ಥ್ಯವನ್ನು ಎತ್ತಿತೋರಿಸಿದರು. ಪ್ರಾರ್ಥನೆಯ ರಗಳೆ, ಸಂಸಾರ ವ್ಯಾಮೋಹ ನಿರಸನ ರಗಳೆ, ಭೃಂಗೀಶ್ವರನ ರಗಳೆ, ಪಂಪಾಕ್ಷೇತ್ರದ ರಗಳೆ ಮುಂತಾದ ಚಿಕ್ಕ ಚಿಕ್ಕ ರಗಳೆಯ ಕೃತಿಗಳನ್ನು ಕುರಿತು ಅವರು ಬರೆದ ೭ ನೆಯ ಭಾಗದ ಪ್ರಸ್ತಾವನೆಯ ಮಾತು ಅರ್ಥಪೂರ್ಣ.

> "......ಇವೆಲ್ಲವೂ ಮಹಾಕವಿಯಾದ ಹರಿಹರನಿಂದ ರಚಿತವಾದುವುಗಳು.... ಅವುಗಳು ಕವಿಯ ಕವಿತಾಸಾಮರ್ಥ್ಯವನ್ನು ಚೆನ್ನಾಗಿ ತೋರಿಸುತ್ತವೆ. ಕೆಲವು ರಗಳೆಗಳಲ್ಲಿ ಹರಿಹರನ ಭಕ್ತಿಭಾವವು ತುಂಬಿ ತುಳುಕುತ್ತದೆ..... ಭೃಂಗೀಶ್ವರನ ರಗಳೆಯಿಂದ ಹರಿಹರನಿಗೆ ನೃತ್ಯಕಲೆಯು ಚೆನ್ನಾಗಿ ಗೊತ್ತಿದ್ದಂತೆ ತೋರುತ್ತದೆ. ಪಂಪಾಕ್ಷೇತ್ರದ ರಗಳೆಯಲ್ಲಿ ಪೂರ್ವಕಾಲದಲ್ಲಿ ಅಂದರೆ ವಿಜಯನಗರವು ಸ್ಥಾಪಿತವಾಗುವ ಪೂರ್ವದಲ್ಲಿ ಈ ಕ್ಷೇತ್ರ ಹೇಗಿತ್ತೆಂಬುದು ಗೊತ್ತಾಗುತ್ತದೆ. ಉಳಿದ ರಗಳೆಗಳಿಂದ ಕವಿಯ ವರ್ಣನಾಶಕ್ತಿಯು ಎಷ್ಟು ಮಿಗಿಲಾಗಿದೆಯೆಂಬುದು ತಿಳಿಯುತ್ತದೆ. ಈ ವಿಷಯದಲ್ಲಿ ಮಲುಹಣನ ರಗಳೆ ಅತ್ಯುತ್ತಮ ಉದಾಹರಣೆಯಾಗಿದೆ."

ಹರಿಹರನ ಕಾವ್ಯ ಕೃತಿಗಳಲ್ಲದೆ ಇನ್ನಿತರ ಕೆಲವು ಮರೆತುಹೋಗಿದ್ದ ವಿವಿಧ ಕಾವ್ಯಕೃತಿಗಳನ್ನೂ ಹಳಕಟ್ಟಿಯವರು ಪ್ರಕಟಿಸಿದರು. ಅವುಗಳಲ್ಲಿ ಕವಿ ಲಕ್ಕಣದಂಡೇಶ ವಿರಚಿತ ***ವರದಾನಿ ಗುಡ್ಡಮ್ಮೆಯ ಚರಿತ್ರೆ***, ಕವಿ ರಾಘವಾಂಕನ ***ಆದಿಶೆಟ್ಟಿ ಪುರಾಣ***, ಮೈಲಾರ ಬಸಪ್ಪನವರ ***ಶಿವಾನುಭವ ದರ್ಪಣ***, ಸೋ. ಕರಿವೃಷಭೇಂದ್ರ ***ಕೈವಲ್ಯ ಪದ್ಯಗಳು*** ಮತ್ತು ಕರ್ತೃ ತಿಳಿಯದ, ಆದರೆ ಚಾರಿತ್ರಿಕ ದೃಷ್ಟಿಯಿಂದ ಮಹತ್ವದ ಆಕರಗಳೆಂದು ಭಾವಿಸಲಾದ ***ಹರಳಯ್ಯನ ತ್ರಿಪದಿಗಳು, ಕಾಲಜ್ಞಾನದ ವಚನಗಳು, ತೋಂಟದಾರ್ಯ ರಗಳೆ*** ಮುಂತಾದುವು ಉಲ್ಲೇಖನೀಯ. ಕನ್ನಡದಲ್ಲಿ ವಿರಳವಾದ ಕೃಷಿ ಕುರಿತ ಘನಮಠದಾರ್ಯರ ***ಕೃಷಿ ವಿಜ್ಞಾನ ದೀಪಿಕ***, ಇತರರು ರಚಿಸಿದ ***ಸಾರಂಗಮಠಾಧೀಶ್ವರರು, ಕೆಳದಿ ಸಂಸ್ಥಾನದ ರಾಯರ ವಂಶಾವಳಿ, ನಿರಂಜನ ವಂಶರತ್ನಾಕರ, ಕೊಡಗಿನ ಸಂಸ್ಥಾನದ ರಾಜೇಂದ್ರನಾಮೆ*** ಮೊದಲಾದುವು ಇನ್ನೂ ಕೆಲವು. ಸಾಹಿತ್ಯ ಪರಂಪರೆಯ ಆಳವಾದ ಅರಿವಿನ ಜೊತೆಗೆ ಚಾರಿತ್ರಿಕ ಪ್ರಜ್ಞೆಯೂ ಅಗತ್ಯವೆಂದು ಭಾವಿಸಿದ ಹಳಕಟ್ಟಿಯವರು ಕನ್ನಡ ನಾಡಿನ ಇತಿಹಾಸ, ಇತರರಿಗೆ ಸರಿಯಾಗಿ ತಿಳಿಯದಿದ್ದಾಗ, ಅಲ್ಲಲ್ಲಿ ಕೆಲವರು ಕೆಲವು ಐತಿಹಾಸಿಕ ಸಂಗತಿಗಳನ್ನು ತಪ್ಪಾಗಿ ಅಥವಾ 'ತಿರುಚಿ' ಬರೆದಾಗ ಅಂಥವರನ್ನು ಕುರಿತು, ತಮ್ಮ ಆಕ್ರೋಶವನ್ನು ವ್ಯಕ್ತಪಡಿಸದೆ, ಅದಕ್ಕೆ ಸಂಬಂಧಿಸಿದ ವಿವಿಧ ಆಕರ ಸಾಮಗ್ರಿಗಳನ್ನು ಹೆಕ್ಕಿ, ವಾಸ್ತವ ಘಟನೆಗಳನ್ನು ಸಂಯೋಜಿಸಿ, ಆಧಾರಸಹಿತವಾಗಿ 'ಸಂಪ್ರಬಂಧ' ಬರೆದು ಪ್ರಕಟಿಸಿ,

ಇತರರು ಕರ್ನಾಟಕದ ಚರಿತ್ರೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಂತೆ, ವಾಸ್ತವ ಸಂಗತಿಗಳನ್ನು ಗ್ರಹಿಸುವಂತೆ ಯತ್ನಿಸುತ್ತಿದ್ದರು. ಈ ದಿಸೆಯಲ್ಲಿ, ಅವರು ಮಾಡಿದ ಒಂದು ಮಹತ್ವದ ಚಾರಿತ್ರಿಕ ಸಂಶೋಧನಾತ್ಮಕ ಕಾರ್ಯವನ್ನು ಉಲ್ಲೇಖಿಸುವುದು ಅಗತ್ಯವೆನಿಸುತ್ತದೆ.

ಮಹಾರಾಷ್ಟ್ರ ಮತ್ತು ಕರ್ನಾಟಕದ ಜನತೆ ಐತಿಹಾಸಿಕವಾಗಿ ಸಾಂಸ್ಕೃತಿಕವಾಗಿ ಪರಸ್ಪರ ಪ್ರೀತಿ ಗೌರವಗಳಿಂದ ಬಾಳಿದ ಕೆಲವು ಐತಿಹಾಸಿಕ ಸಂಗತಿಗಳಲ್ಲಿ, ಶಿವಾಜಿ ದಿಗ್ವಿಜಯ ಮತ್ತು ಬೆಳವಡಿ ಮಲ್ಲವ್ವಾಬಾಯಿ ದೇಸಾಯಿಗೆ ಸಂಬಂಧಿಸಿದ ಒಂದು ಹೋರಾಟದ ಪ್ರಸಂಗ ಬಹು ಮುಖ್ಯವಾದುದು. ಇದು ಸು. ೧೬೭೭ ನೆಯ ಮಾರ್ಚ್ ತಿಂಗಳ ಕಾಲಾವಧಿಯಲ್ಲಿ ನಡೆದ ಘಟನೆ.

ಶಿವಾಜಿಯ ರಣಯಾತ್ರೆ; ಹೋದೆಡೆಯಲ್ಲೆಲ್ಲ ವಿಜಯ, ಸೋಲು, ಹೋರಾಟ ಮತ್ತು ವಿಜಯ ಹೀಗೆ ತಂಜಾವೂರು ವರಗೆ ಮುನ್ನಡೆದ ಶಿವಾಜಿ, ಮರಳಿ ಕನ್ನಡನಾಡನ್ನು ಪ್ರವೇಶಿಸಿದಾಗ, ಬೆಳಗಾಂವಿ ಜಿಲ್ಲೆಯ ಸಂಪಗಾಂವಿ ಹತ್ತಿರದ ಬೆಳವಡಿ ದೇಸಗತಿಯ ದಾಳಿಯನ್ನು ಆತ ಎದುರಿಸಬೇಕಾಯಿತು. ಈಶಪ್ರಭು ದೇಸಾಯಿ, ಆತನ ಧೀರಪತ್ನಿ ಮಲ್ಲವ್ವಾಬಾಯಿ ದೇಸಾಯಿಣಿ; ಶಿವಾಜಿ ಸೈನ್ಯದ ಜೊತೆ ಹೋರಾಟ ಮಾಡುತ್ತ ಈಶಪ್ರಭು ಮಡಿದುದು; ತಕ್ಷಣ ದೇಸಾಯಿಣಿ ನೇರವಾಗಿ ಹೋರಾಡಿ ಶಿವಾಜಿಯನ್ನು ಸೈನ್ಯ ಸಮೇತ ತನ್ನ ಕೋಟೆಯ ಹೊರಗಟ್ಟಿ ಸೋಲಿಸಿದ್ದು, ರೋಷಗೊಂಡ ಶಿವಾಜಿ ಮತ್ತೆ ಕೋಟೆಯನ್ನು ಅಧಿಕ ಸೈನ್ಯ ಶಕ್ತಿಗಳೊಡನೆ ಮುತ್ತಿ ತನ್ನ ವಶಕ್ಕೆ ತೆಗೆದುಕೊಂಡದ್ದು, ಬೆಳವಡಿ ಮಲ್ಲವ್ವಾಬಾಯಿ ದೇಸಾಯಿಣಿಗೆ ಅಪಾರ ಗೌರವ ವ್ಯಕ್ತಮಾಡಿದ್ದು – ಇತ್ಯಾದಿ ಇನ್ನೂ ಕೆಲವು ಸಂಗತಿಗಳು ಇತ್ತೀಚಿನವರೆಗೂ ಚರ್ಚಿತವಾಗುತ್ತಿವೆ. ಆದರೆ ಇದಕ್ಕೆ ಸಂಬಂಧಿಸಿದಂತೆ ಇಂದಿಗೆ ಸುಮಾರು ೬೫–೭೦ ವರ್ಷಗಳ ಮೊದಲೇ ಹಳಕಟ್ಟಿಯವರು ಒಂದು ಸಂಶೋಧನಾ ಲೇಖನ **ಮಲ್ಲವ್ವಾಬಾಯಿ ದೇಸಾಯಿಣಿ ಬೆಳವಡಿ** ಬರೆದು ಶಿವಾನುಭವ ಪತ್ರಿಕೆಯ ಆಗಸ್ಟ್ ೧೯೨೬ ರ ೩ ನೆಯ ಸಂಚಿಕೆಯಲ್ಲಿ ಪ್ರಕಟಿಸಿದರು. ಆ ಲೇಖನ ಸಿದ್ಧಪಡಿಸುವಲ್ಲಿ ಅವರು ಬಳಸಿಕೊಂಡಿದ್ದ ಈ ಕೆಳಗಿನ ವಿವಿಧ ಆಕರ ಸಾಮಗ್ರಿಗಳು, ಅವರ – ಸಂಶೋಧಕ ಪ್ರವೃತ್ತಿಯಲ್ಲಿರಬೇಕಾದ – ಪ್ರಾಮಾಣಿಕತೆಯನ್ನು ಎತ್ತಿ ತೋರಿಸುತ್ತದೆ:

೧. ಶಿವಛತ್ರಪತೀಚೆ ಚರಿತ್ರ – ಸಭಾಸದ
೨. ಶಿವಾಜೀ ಬಖರ (ಬಖೈರು) – ಚಿತ್ರಗುಪ್ತ
೩. ಶಿವದಿಗ್ವಿಜಯ
೪. ಮರಾಠೀ ದಫ್ತರ
೫. ತಾರೀಖ–ಎ–ಶಿವಾಜಿ
೬. ಪ್ರಭು ರತ್ನಮಾಲಾ

೭. ರಿಯಾಸತ್–ಎ–ಸರದೇಸಾಯಿ

೮. ಶಿವಚರಿತ್ರ–ಕೇಳೂಸಕರ್

ಮತ್ತು ಅಂದಿನ ಪ್ರಸಿದ್ಧ ಇತಿಹಾಸ ಸಂಶೋಧಕರಾದ– ೯. ಗ್ರ್ಯಾಂಟ್ ಡಫ್, ೧೦. ಕಿಂಕೇಡ್, ೧೧. ಜದುನಾಥ ಸರ್ಕಾರ್, ಅವರ ಇಂಗ್ಲಿಷ್ ಗ್ರಂಥ ಲೇಖನಗಳು ಮತ್ತು 'ಮಾಡರ್ನ್ ರಿವ್ಯೂ'ದಂಥ ಪತ್ರಿಕೆ (೧೯೧೮ ನವೆಂಬರ್ ಸಂಚಿಕೆ): ದೇಸಗತಿ ಯಾವುದು? ಅದರ ನೆಲೆಯೆಲ್ಲಿ? ಮಲ್ಲವ್ವಾಬಾಯಿಯ ಸರಿಯಾದ ಹೆಸರು, ಆಕೆಯ ಶೌರ್ಯ ಧೈರ್ಯಗಳು, ಶಿವಾಜಿಯ ಹೋರಾಟ ಮತ್ತು ಮಲ್ಲವ್ವ ದೇಸಾಯಿಣಿಯ ಬಗೆಗೆ ಆತನಿಗುಂಟಾದ ಗೌರವ ಮುಂತಾದ ಸಂಗತಿಗಳನ್ನು ನಿಖರಗೊಳಿಸುವ ಪ್ರಾಮಾಣಿಕ ಪ್ರಯತ್ನ ಅವರ ಸಂಪ್ರಬಂಧದಲ್ಲಿ ಕಂಡುಬರುತ್ತದೆ.

೧. ಮಲವಾಯಿ, ಸಾವಿತ್ರಿಬಾಯಿ ಅಥವಾ ಲಾಲ್‌ಬೀ ಎನ್ನುವುದು ಸರಿಯಲ್ಲ; ಮಲ್ಲವ್ವಾಬಾಯಿ ದೇಸಾಯಿಣಿ ಸರಿಯಾದ ಹೆಸರು.

೨. ಬೆಳವಡಿಯ ದೇಸಗತಿ ಚಿತ್‌ಪಾವನ ಬ್ರಾಹ್ಮಣರ ದೇಸಗತಿ ಅಲ್ಲ; ಮಲ್ಲವ್ವಾಬಾಯಿ ದೇಸಾಯಿಣಿ ವೀರಶೈವಳು.

೩. ಬೆಳವಡಿ ಮಾಮಲೇ ಪರಗಣೆಯ ಮಲ್ಲವ್ವ ದೇಸಾಯಿಣಿ ೧೭೧೩ ನೆಯ ಇಸ್ವಿಯಲ್ಲಿ ವೀರಭದ್ರ ದೇವರ ಆರಾಧನೆಗಾಗಿ ಗುಡಿಕಟ್ಟಿ, ಗ್ರಾಮದ ಒಂದು ಮಾರು ಜಮೀನನ್ನು ವೇ. ಮೂ. ಶ್ರೀಪಾದ್ ಭಟ್ ಬಿನ್ ಕೃಷ್ಣಭಟ್ಟ ಜೋಷಿ ಅವರಿಗೆ, ಒಂದು ಸನದಿನ ಮೂಲಕ ವಂಶಪಾರಂಪರ್ಯವಾಗಿ ದಾನ ಕೊಟ್ಟಿದ್ದಾಳೆ.

ಇದಲ್ಲದೆ ಕರ್ನಾಟಕದ ಚರಿತ್ರಗೆ, ಚರಿತ್ರೆಯ ಪುನರ್ನಿರ್ಮಾಣಕ್ಕೆ ನೆರವಾಗುವ ಇನ್ನೂ ಅನೇಕ ಮಹತ್ವದ ಸಂಶೋಧನ ಲೇಖನಗಳನ್ನು ಹಳಕಟ್ಟಿಯವರು ಬರೆದು ಪ್ರಕಟಿಸಿದ್ದಾರೆ. ಅವುಗಳಲ್ಲಿ ಈ ಕೆಳಗಿನ ಲೇಖನಗಳು ಶಿವಾನುಭವ ಪತ್ರಿಕೆಯ ವಿವಿಧ ಸಂಚಿಕೆಗಳಲ್ಲಿ ಬೆಳಕು ಕಂಡಿವೆ:

**(ಶಿವಾನುಭವ ಪತ್ರಿಕೆಯ ಸಂಪುಟ ಮತ್ತು ಸಂಚಿಕೆ)**

| | ಸಂ. ಸಂ. |
|---|---|
| ೧. ಕೆಳದಿ ಮತ್ತು ಸ್ವಾದಿ ರಾಜ್ಯಗಳು | ೧ - ೪ |
| ೨. ಕೆಳದಿಯ ಸದಾಶಿವರಾಯರು | ೫ - ೧೧, ೧೨ |
| ೩. ಕೆಳದಿಯ ವೆಂಕಟಪ್ಪ ನಾಯಕನು | ೪ - ೫ |
| ೪. ಕೊಡಗಿನ ವೀರರಾಜೇಂದ್ರನು | ೨ - ೬ |
| ೫. ಬೀಳಗಿಯ ಸಂಸ್ಥಾನ | ೨೯ - ೯ |

| | | |
|---|---|---|
| ೬. ಬೀಳಗಿ ಅರಸರು | ೯ - ೧ |
| ೭. ಹಾಗಲವಾಡಿ ಅರಸುಗಳ ವೃತ್ತಾಂತ | ೭ - ೪ |
| ೮. ನವಲಗುಂದ ದೇಸಾಯರ ಇತಿಹಾಸ | ೭ - ೫ |
| ೯. 'ದಾನಸೂರ' ರಾಮವ್ವಗೌಡತಿ ಕಾಖಂಡಕಿ | ೩೨ - ೧೨ |

ಕನ್ನಡನಾಡಿನ ಸಾಮಾಜಿಕ ಚರಿತ್ರೆ, ವೀರಶೈವ ಧರ್ಮ ಸಾಹಿತ್ಯಗಳ ಪುನರುಜ್ಜೀವನಕ್ಕಾಗಿ ಸರ್ವಸ್ವವನ್ನೂ ಧಾರೆಯೆರೆದ ಹಳಕಟ್ಟಿಯವರನ್ನು ದಾರ್ಶನಿಕ ಎಂದು ಕರೆಯಬಹುದು. ಸಂಶೋಧಕರಾಗಿ, ಪತ್ರಿಕೆಗಳ ಸಂಪಾದಕರಾಗಿ ಮತ್ತು ಪ್ರಕಾಶಕರಾಗಿ ಸಾರಸ್ವತಲೋಕಕ್ಕೆ ಅಪೂರ್ವ ಕಾಣಿಕೆ ಸಲ್ಲಿಸುತ್ತ ಬಂದ ಶ್ರೀ ಹಳಕಟ್ಟಿಯವರಿಗೆ ದೊರೆತ ಪದವಿ, ಪಟ್ಟ ಮನ್ನಣೆಗಳು ಹಲವಾರು.

೧೯೨೬ ರ ಬಳ್ಳಾರಿಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಗೊಂಡು, ತಾವು ಮೊದಲಿನಿಂದಲೂ ವಿಶೇಷ ಆಸಕ್ತಿ ವಹಿಸುತ್ತ ಬಂದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಧೋರಣೆಗೆ, ಹೊಸ ಚಾಲನೆ ನೀಡಿದರು.

ತರುವಾಯ ಕೆಲವು ವರ್ಷಗಳ ಬಳಿಕ ೧೯೩೩ ರಲ್ಲಿ ಜರುಗಿದ ವೀರಶೈವ ಮಹಾಸಭೆಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ, ಕನ್ನಡ ಜನಾಂಗಕ್ಕೆ ಮತ್ತು ಕನ್ನಡ ಸಾಹಿತ್ಯಕ್ಕೆ ವಿಶೇಷ ಕಾಣಿಕೆ ಸಲ್ಲಿಸಿದ ಅಪೂರ್ವ ಸಾಂಸ್ಕೃತಿಕ ಪರಂಪರೆ ಹೊಂದಿದ ವೀರಶೈವರು ಒಳಪಂಗಡಗಳಲ್ಲಿ ಹೋಳಾಗದೆ, ಸುಸಂಘಟಿತರಾಗಿ ತಮ್ಮ ಸಂಸ್ಕೃತಿಯ ಹಿರಿಮೆಯನ್ನು ಅರಿತು ಕಾರ್ಯಮಾಡಬೇಕೆಂದು ಕರೆಕೊಟ್ಟರು.

ಕರ್ನಾಟಕ ವಿಶ್ವವಿದ್ಯಾಲಯ ಈ ಪ್ರದೇಶದ ಪುತ್ರ ಶ್ರೀ ಫ.ಗು. ಹಳಕಟ್ಟಿಯವರು ಕನ್ನಡ ನಾಡಿಗೆ ಸಲ್ಲಿಸಿದ ಬಹುಮುಖಿ ಸೇವೆಯನ್ನು ಮನಗಂಡು, ವಿಶೇಷ ರೀತಿಯಲ್ಲಿ ತನ್ನ ಕೃತಜ್ಞತೆ ಸಲ್ಲಿಸಿತು. ೧೯೫೬ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಶ್ರೀ ಹಳಕಟ್ಟಿಯವರಿಗೆ ಗೌರವ ಡಿ.ಲಿಟ್ ಪದವಿ ನೀಡಿ ಗೌರವಿಸಿದಾಗ, ನಾಡಿನ ಸತ್ ಪರಂಪರೆಗೆ ಗರಿ ಮೂಡಿತ್ತು.

ಅದೇ ವರ್ಷ (೧೯೫೬ ಡಿಸೆಂಬರ್ ೧೨) ಕನ್ನಡ ಸಾಹಿತ್ಯ ಪರಿಷತ್ತು ಈ 'ವಾಙ್ಮಯ ತಪಸ್ವಿ'ಯನ್ನು ಬೆಂಗಳೂರಿಗೆ ಬರಮಾಡಿಕೊಂಡು ಮಾನಪತ್ರ ಕೊಟ್ಟು ಸನ್ಮಾನಿಸಿತು.

ಎಂದೂ ಯಾವುದಕ್ಕೂ ಕೊರಗದೆ, ಯಾವುದೇ ಮಾನ ಸನ್ಮಾನಗಳಿಗೆ ಆಶಿಸದೆ, ಜೀವನದಲ್ಲಿ ಬಂದ ಆಪತ್ತು ವಿಪತ್ತುಗಳನ್ನು ನುಂಗಿ ಸ್ವಾರ್ಥಸಾಧನೆಯನ್ನು ಬದಿಗೊತ್ತಿ, ಸದಾ ಸಾಹಿತ್ಯ, ಸಂಶೋಧನೆ ಸಮಾಜ ಚಿಂತನೆಗಳನ್ನೇ ತಮ್ಮ ಪ್ರಾಣವಾಗಿಸಿಕೊಂಡ ಡಾ. ಫ.ಗು. ಹಳಕಟ್ಟಿಯವರನ್ನು ಕನ್ನಡ ಜನ 'ಆಧುನಿಕ ಶರಣ', 'ವಚನ ಪಿತಾಮಹ' ಎಂದು ಮುಂತಾಗಿ ಕೊಂಡಾಡಿದರು. ದುಃಖ,

ಸಂಕಟಗಳು ಬಂದಾಗ ಕುಗ್ಗದೆ, ಸುಖ ಸನ್ಮಾನಗಳು ಬಂದಾಗ ಹಿಗ್ಗದೆ, ಸಮಾಧಾನಚಿತ್ತರಾಗಿದ್ದುಕೊಂಡು ಕಾರ್ಯಪ್ರವೃತ್ತರಾದ ಡಾ. ಫ.ಗು. ಹಳಕಟ್ಟಿಯವರನ್ನು ಕುರಿತ ಒಂದು ಘಟನೆ ಚಿರಸ್ಮರಣೀಯ.

## 'ಜ್ಞಾನಗುಮ್ಮಟ'

'ಕನ್ನಡದ ಕಣ್ವ' ಎಂದು ಖ್ಯಾತರಾಗಿದ್ದ ಬಿ.ಎಂ. ಶ್ರೀಕಂಠಯ್ಯ (ಬಿ.ಎಂ.ಶ್ರೀ.) ಒಮ್ಮೆ ನಾಡಹಬ್ಬದ ಕಾರ್ಯನಿಮಿತ್ತ ವಿಜಾಪುರಕ್ಕೆ ಬಂದರು. ಉಪನ್ಯಾಸ ಕಾರ್ಯಕ್ರಮ ಇತ್ಯಾದಿ ಔಪಚಾರಿಕತೆಗಳು ಮುಗಿದ ಬಳಿಕ ವಿಜಾಪುರದ ಕೆಲವು ಸಾಹಿತಿಗಳು ಜಗತ್ಪ್ರಸಿದ್ಧವಾದ ಗೋಳಗುಮ್ಮಟ ನೋಡಲು ಬಿ.ಎಂ.ಶ್ರೀ. ಅವರನ್ನು ಕರೆದೊಯ್ಯಬೇಕೆಂದರು. ಬಿ.ಎಂ.ಶ್ರೀ. 'ಆಯ್ತು, ಅದನ್ನೂ ನೋಡೋಣ. ಅದಕ್ಕೆ ಮೊದಲು ವಿಜಾಪುರದ **ಜ್ಞಾನಗುಮ್ಮಟ** ಹಳಕಟ್ಟಿಯವರನ್ನು ನೋಡೋಣ' ಎಂದು ನುಡಿದರು. ನಿಜ; ಗೋಳಗುಮ್ಮಟ ಒಂದು ಸಲ ನುಡಿದರೆ, ಏಳು ಸಲ ಮಾತ್ರ ಮಾರ್ನುಡಿಯುತ್ತದೆ; ಆದರೆ ವಚನಧರ್ಮ ಹುದುಗಿದ ಈ **ಜ್ಞಾನಗುಮ್ಮಟ** ಕನ್ನಡಿಗರ ಹೃದಯದಲ್ಲಿ ಚಿರಂತನವಾಗಿ ಮಾರ್ನುಡಿಯುತ್ತದೆ; ಅರಿವಿನ ತರಂಗಗಳನ್ನು ಮಿಡಿಯುತ್ತಿರುತ್ತದೆ!

# ೪. ಅವಿಸ್ಮರಣೀಯ ಸಂವಹನಕಾರ

ವಚನ ಸಂಶೋಧನೆಗೆ ಒಂದು ಭದ್ರ ಅಡಿಪಾಯ ಹಾಕಿ, ವೀರಶೈವ ಸಾಹಿತ್ಯ ವಿಶೇಷತಃ ವಚನ ಸಾಹಿತ್ಯದ ಅಧ್ಯಯನ ವಿಶ್ಲೇಷಣೆಗಳ ಪಥವನ್ನು ನಿರ್ಮಿಸಿದ ಡಾ. ಹಳಕಟ್ಟಿ, ತಮ್ಮ ಸೇವಾವಿಸ್ತರಣೆಗೆ ಆಯ್ದುಕೊಂಡ ಮತ್ತೊಂದು ಮಹತ್ವದ ಕ್ಷೇತ್ರ, ವೃತ್ತಪತ್ರಿಕೆ. ವಿಜ್ಞಾನದ ವಿದ್ಯಾರ್ಥಿಗಳಾಗಿದ್ದ ಅವರಲ್ಲಿ ಸಹಜವಾದ ವೈಜ್ಞಾನಿಕ ದೃಷ್ಟಿಯಿತ್ತು. ಸಂಶೋಧಕರಾದ ಅವರಲ್ಲಿ ಸತ್ಯಾನ್ವೇಷಣೆ ಮತ್ತು ವೈಚಾರಿಕ ನಿಷ್ಠೆ ಮೈಗೂಡಿದ್ದವು. ಎಲ್ಲಕ್ಕೂ ಮಿಗಿಲಾಗಿ ವಚನ ಸಾಹಿತ್ಯದ ವ್ಯಾಪಕ ಅಧ್ಯಯನ ಮತ್ತು ಆಳವಾದ ಚಿಂತನೆಗಳಿಂದ ಮಾನವೀಯ ಸಂವೇದನೆಗಳು, ಸೇವಾಮನೋಭಾವನೆಗಳು ಅವರಲ್ಲಿ ಒಡವರೆದಿದ್ದವು. ತಮ್ಮ ವೃತ್ತಿಯ ಸುದೀರ್ಘಾವಧಿಯ ಜನಸಂಪರ್ಕದಿಂದಾಗಿ ವಿವಿಧ ಸ್ತರದ ಜನಸಮೂಹದಲ್ಲಿ ಹುದುಗಿದ ಅಜ್ಞಾನ, ಅಶಿಕ್ಷಿತತೆ ಮತ್ತು ಜೀವನ ಸಮೃದ್ಧಿ ಅಥವಾ ವಿಕಾಸ ಕುರಿತಾದ ಪರಮ ನಿರ್ಲಕ್ಷಗಳನ್ನು ಮನಗಂಡ ಹಳಕಟ್ಟಿಯವರಲ್ಲಿ ಏನಾದರೂ ಹೊಸತು, ಸಮಾಜೋಪಯೋಗಿ, ಘನವಾದ ಕಾರ್ಯ ಕೈಕೊಳ್ಳಬೇಕು ಎನ್ನುವ ಸಂಕಲ್ಪ ತುಡಿಯುತ್ತಿತ್ತು.

ನಾಡಿನ ಜನತೆಗೆ ಧಾರ್ಮಿಕ ಆಲೋಚನೆ ಮುಟ್ಟಿಸಬೇಕು. ಸಾಹಿತ್ಯ ಸಂವೇದನೆಗಳ ಮೂಲಕ ಅವರಲ್ಲಿ ಸಾಹಿತ್ಯಾಸಕ್ತಿ, ಗಂಭೀರ ವಿವೇಚನೆ, ಆತ್ಮಪ್ರತ್ಯಯ ಗುಣಗಳನ್ನು ಬೆಳೆಸಬೇಕು. ನಮ್ಮ ಸುತ್ತಮುತ್ತು, ನಾಡಿನ ಉದ್ದಗಲಕ್ಕೆ ನಡೆಯುವ ರಾಜಕೀಯ, ಸಾಮಾಜಿಕ ಕೃಷಿ ಕಾರ್ಮಿಕ ಆಧ್ಯಾತ್ಮಿಕ ಸಂಗತಿ ಘಟನೆಗಳ ಸರಿಯಾದ ಪರಿಚಯ ನೀಡಿ, ಅವರಲ್ಲಿ ಒಟ್ಟಾರೆ ಸಾಂಸ್ಕೃತಿಕ ಜಾಗೃತಿ ಮೂಡಿಸಬೇಕು; ಆತ್ಮಾಭಿಮಾನ ಆತ್ಮಗೌರವದಿಂದ ಜನರು ಬಾಳುವಂತಾಗಬೇಕು ಇತ್ಯಾದಿ ಆದರ್ಶ ಚಿಂತನೆಗಳು, ಅವರಲ್ಲಿ ಬಹುಕಾಲ ಗಾಢವಾಗಿ ನಡೆದಂತೆ ಕಾಣುತ್ತದೆ. ಇವೆಲ್ಲದರ ಫಲವಾಗಿ, ಹಳಕಟ್ಟಿ ಅವರು, ವೃತ್ತಪತ್ರಿಕಾ ಪ್ರಪಂಚದಲ್ಲಿ ಅಡಿಯಿಟ್ಟರು.

ಜನರಲ್ಲಿ ಸಮೂಹ ಸಂವಹನಮಾಧ್ಯಮಗಳನ್ನು ಕುರಿತು, ಅಂದು ಅಂಥ ವಿಶೇಷ ಆಸಕ್ತಿಯಾಗಲಿ, ಜ್ಞಾನವಾಗಲಿ ಇರಲಿಲ್ಲ. ಆದರೆ ಒಬ್ಬ ನಿಜವಾದ

ಸಂವಹನಕಾರ, ಜನತೆಗಾಗಿ ಒಬ್ಬ ಪ್ರವಾದಿಯಾಗಿ ಕಾರ್ಯ ಮಾಡುತ್ತಾನೆ. ಹಳಕಟ್ಟಿ ಅಂಥ ದೂರದರ್ಶಕ ಗುಣವುಳ್ಳ ವ್ಯಕ್ತಿಯಾಗಿದ್ದರು. ಈ ಕಾರಣದಿಂದಲೇ ಅವರು ಪತ್ರಿಕಾಕ್ಷೇತ್ರದಲ್ಲಿ ಮಾಡಿದ ಕಾರ್ಯ, ಸಲ್ಲಿಸಿದ ಸೇವೆ, ಕಾಲಮಾನದ ದೃಷ್ಟಿಯಿಂದ ಪವಾಡಸದೃಶವಾದುದು.

ಹಳಕಟ್ಟಿಯವರು ಪತ್ರಿಕಾ ಸಂವಹನಮಾಧ್ಯಮದ ಹಿರಿಮೆಯನ್ನು ಅರಿತವರಾಗಿದ್ದರು. ಒಂದು ಪತ್ರಿಕೆ, ನಾಡಿನ ಅಂತರಂಗ ಮತ್ತು ಬಹಿರಂಗದ ಬದುಕನ್ನು, ಜನತೆಗೆ ತೆರೆದು ತೋರಿಸುವ ಕಿಟಕಿಯಾಗಬೇಕು. ಸಾಹಿತ್ಯ ಮತ್ತು ಆಧ್ಯಾತ್ಮದ ಉನ್ನತ ಪರಂಪರೆ, ಧಾರ್ಮಿಕ ಸತ್ಯ ಸೌಂದರ್ಯಗಳ ಅರಿವುಗಳಿಂದ, ಜನಸಮುದಾಯದ ಅಂತರಂಗದ ಬದುಕು ಅರಳಬೇಕು; ಚಿಂತನಶೀಲತೆ ಬೆಳೆಯಬೇಕು. ರಾಜಕೀಯ, ಸಾಮಾಜಿಕ, ವಾಣಿಜ್ಯ, ಕೃಷಿ, ಸಹಕಾರ ಮುಂತಾದ ಸಮಕಾಲೀನ ಘಟನೆಗಳನ್ನು ಅವರು ತಿಳಿದುಕೊಳ್ಳಬೇಕು. ಅವರಲ್ಲಿ ಜೀವನ ಸಮೃದ್ಧಿಗಾಗಿ ಬಾಳುವ, ಕ್ರಿಯಾಶೀಲ ಪ್ರಜ್ಞೆ ಮೂಡಬೇಕು. ಇದು, ಅವರು, ಹಮ್ಮಿಕೊಂಡ ಪತ್ರಿಕಾ ಮಾಧ್ಯಮದ ಯೋಜನೆ. ಅದಕ್ಕಾಗಿ ಅವರು ಎರಡು ಪತ್ರಿಕೆಗಳನ್ನು, ಏಕಕಾಲಕ್ಕೆ ಸಂಪಾದಿಸಿ ಪ್ರಕಟಿಸುವ, ಮಹತ್ತರವಾದ ಹೊಣೆಗಾರಿಕೆಯನ್ನು ಹೊತ್ತರು.

೧೯೨೬ ರಲ್ಲಿ **ಶಿವಾನುಭವ** ಆರಂಭಿಸಿದರು. ಅದರ ಮೂಲಕ ಜನತೆಯಲ್ಲಿ ಧಾರ್ಮಿಕ ಶ್ರದ್ಧೆ, ಆಧ್ಯಾತ್ಮಿಕತೆ, ಸಾಹಿತ್ಯಾಧ್ಯಯನ, ಸಾಮಾಜಿಕ ಚಿಂತನೆಗಳು ಪ್ರಸರಣಗೊಳ್ಳತೊಡಗಿದುವು. ಆದರೆ ಇದರಿಂದ ತೃಪ್ತರಾಗದ ಹಳಕಟ್ಟಿ, ಮುಂದೆ ಒಂದೇ ವರ್ಷದ ಬಳಿಕ, ೧೯೨೭ ರಲ್ಲಿ ***ನವ ಕರ್ನಾಟಕ*** ವಾರಪತ್ರಿಕೆಯನ್ನು ಹೊರಡಿಸಿ, ತಮ್ಮ ರಾಜಕೀಯ, ಆರ್ಥಿಕ, ಕೃಷಿ, ಶಿಕ್ಷಣ, ಸಹಕಾರ ಮುಂತಾದ ಆಲೋಚನೆಗಳನ್ನು ಜನರಿಗೆ ತಲುಪಿಸುವ ಮತ್ತು ಜನಾಭಿಪ್ರಾಯ ರೂಪಿಸಿ ಅವರಲ್ಲಿ ಹೊಸ ವಿಚಾರಗಳನ್ನು ಪಬ್ಬಿಸುವ ಕಾರ್ಯ ಕೈಕೊಂಡರು.

## 'ಶಿವಾನುಭವ' ಪತ್ರಿಕೆ: ಧಾರ್ಮಿಕ ಸಂವಹನ

೧೯೨೩ ರಲ್ಲಿ ಹಳಕಟ್ಟಿ ಅವರು, ತಾವು ಸಂಪಾದಿಸಿ ರೂಪಿಸಿದ **ವಚನಶಾಸ್ತ್ರಸಾರ ಭಾಗ–೧** ಪ್ರಕಟಿಸಿದರು. ವಿವಿಧ ಭಾಗದ ಅನೇಕ ವಿದ್ವಾಂಸರು ಮತ್ತು ಧಾರ್ಮಿಕ ಕ್ಷೇತ್ರದ ಪ್ರಮುಖರು, ವಚನ ಸಾಹಿತ್ಯದ ಅಪೂರ್ವ ಗುಣಲಕ್ಷಣಗಳಿಗೆ ಮಾರುಹೋಗಿ, ಹಳಕಟ್ಟಿಯವರಿಗೆ ಮನತುಂಬಿ ಮೆಚ್ಚಿಗೆಯ ಮಾತನ್ನಾಡಿದರು. ಪ್ರಶಂಸೆಯ ಪತ್ರಗಳನ್ನು ಬರೆದು, ಈ ಸಾಹಿತ್ಯದ ಪ್ರಚಾರ ಮತ್ತು ಧಾರ್ಮಿಕ ಆಧ್ಯಾತ್ಮಿಕ ಮೌಲ್ಯಗಳ ಪ್ರಸರಣ ಕಾರ್ಯ, ಹೆಚ್ಚು ಅರ್ಥಪೂರ್ಣವಾಗಿ ಮುಂದುವರಿಯಲಿ ಎಂದು ಹಾರೈಸಿದರು. ೧೯೨೬ ರ ಸುಮಾರಿಗೆ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ, ಕೆಲವು ಧಾರ್ಮಿಕ ಹಿನ್ನೆಲೆಯ ಪ್ರಕಾಶನ ಸಂಸ್ಥೆ ಮತ್ತು

ಪತ್ರಿಕೆಗಳು ಪ್ರಕಟಗೊಳ್ಳುತ್ತಿದ್ದು ಜನರ ವಾಚನಾಭಿರುಚಿಯನ್ನು ಕೆಲಮಟ್ಟಿಗೆ ಬೆಳೆಸುವ ಕಾರ್ಯದಲ್ಲಿ ಮಗ್ನವಾಗಿದ್ದುವು: ಪಿ.ಆರ್. ಕರಿಬಸವ ಶಾಸ್ತ್ರಿಗಳ 'ವೀರಶೈವ ಮತಪ್ರಕಾಶಿಕಾ' ಎನ್ನುವ ಮಾಸಪತ್ರಿಕೆ ಎನ್.ಆರ್. ಕರಿಬಸವ ಶಾಸ್ತ್ರಿಗಳ 'ವೀರಶೈವ ಗ್ರಂಥಪ್ರಕಾಶಿಕಾ', ರಾಮಾನುಜ ಅಯ್ಯಂಗಾರ್ ಅವರ 'ಕರ್ನಾಟಕ ಕಾವ್ಯಮಂಜರಿ' ಮುಂತಾದುವು ಮೈಸೂರು ಪ್ರದೇಶದಲ್ಲಿ ಕಾರ್ಯಪ್ರವೃತ್ತವಾಗಿದ್ದ ಕೆಲವು ಪತ್ರಿಕೆ–ಪ್ರಕಾಶನಗಳು (೧೮೪೮ ರಿಂದ ೧೯೭೨ ರ ಕಾಲಾವಧಿ) ಅಂದಿನ ನಿರುತ್ಸಾಹಕ ಪರಿಸರದಲ್ಲಿಯೂ ಗಣನೀಯ ಕೆಲಸ ಮಾಡುತ್ತ ಬಂದುವು. ಪ್ರತಿಶತ ಎಂಬತ್ತು(?) ಅನಕ್ಷರಸ್ಥರಾಗಿರಬಹುದಾದ ಅಂದಿನ ಜನಸಮುದಾಯದ ಅಮಾಯಕ ಮನಸ್ಸುಗಳಿಗೆ, ಧಾರ್ಮಿಕ ಸಂಗತಿಗಳನ್ನು ವಿವರಿಸುವ ಕಾರ್ಯಕ್ಕೆ ಇದೊಂದು ಆರಂಭದ ಕಾಲ.

ಇದರ ಬೆಂಬಳಿವಿಡಿದು ೨೦ ನೆಯ ಶತಮಾನದ ಆರಂಭದಲ್ಲಿ ೧೯೨೬ ರ ಮೊದಲು ಉತ್ತರ ಕರ್ನಾಟಕದಲ್ಲಿ ಪ್ರಕಟವಾಗುತ್ತಿದ್ದ ಕೆಲವು ಪತ್ರಿಕೆಗಳನ್ನೂ ಗಮನಿಸಬಹುದು. ಹಾನಗಲ್ಲ ಕುಮಾರಶಿವಯೋಗಿಗಳ ಮಾರ್ಗದರ್ಶನದಿಂದ ಪ್ರೇರಿತವಾದ ಶಿವಯೋಗ ಮಂದಿರದ ಧರ್ಮೋತ್ತೇಜಕ ಸಭೆಯ, ಧಾರವಾಡದ ಶಿವಲಿಂಗಶಾಸ್ತ್ರಿ ಸಂಪಾದಕತ್ವದ 'ಧರ್ಮತರಂಗಿಣಿ' (ಡಿಸೆಂಬರ್ ೧೯೧೧) ಪತ್ರಿಕೆ, ೧೯೧೮ ರ ನವೆಂಬರ್ ತಿಂಗಳಿನಿಂದ ಪ್ರಕಟವಾಗತೊಡಗಿದ ಶಿ.ಶಿ. ಬಸವನಾಳ ಸಂಪಾದಿತ 'ಪ್ರಬೋಧ', ಆಲೂರು ವೆಂಕಟರಾಯರಿಂದ ಆರಂಭಗೊಂಡ 'ಜಯ ಕರ್ನಾಟಕ' ಮುಂತಾದುವು ಉಲ್ಲೇಖನೀಯ. ಹಳಕಟ್ಟಿಯವರ 'ಶಿವಾನುಭವ' ಪತ್ರಿಕೆಯ ಸ್ವರೂಪ ಮತ್ತು ಉದ್ದೇಶಗಳನ್ನು ನಿಖರಗೊಳಿಸುವಲ್ಲಿ ಈ ಮೇಲೆ ಸೂಚಿಸಿದ ಕೆಲವು ಪತ್ರಿಕೆಗಳು ಒಂದಲ್ಲ ಒಂದು ರೀತಿಯಿಂದ ಸಹಕಾರಿಯಾಗಿದ್ದವೆಂದು ಹೇಳಬಹುದು. ಅವರ 'ವಚನಶಾಸ್ತ್ರಸಾರ' ಕೃತಿಯು ಪ್ರಕಟವಾದ ಬಳಿಕ, ಈ ಸಾಹಿತ್ಯ ಕುರಿತು ನಾಡಿನ ಗಣ್ಯರು, ವಿದ್ವಾಂಸರು ಮತ್ತು ಇತರ ಸಾರ್ವಜನಿಕ ಪ್ರಮುಖರಿಂದ ಬಂದ ಮೆಚ್ಚುಗೆ ಪ್ರಶಂಸೆಯ ಮಾತು, ಹಳಕಟ್ಟಿಯವರ ಸಾಹಸ ಮನೋಭಾವಕ್ಕೆ ಹೊಸಬಗೆಯ ಪ್ರೇರಣೆಯನ್ನೇ ನೀಡಿದುವು. ಈಗಾಗಲೇ ಅವರದೇ ಆದ 'ಹಿತಚಿಂತಕ ಮುದ್ರಣಾಲಯ' ತೃಪ್ತಿಕರವಾಗಿ ಕೆಲಸ ಮಾಡುತ್ತಿತ್ತು. ಯಾಕೆ ತಾವೂ ಒಂದು ನಿಯತಕಾಲಿಕ ಪತ್ರಿಕೆ ತೆಗೆಯಬಾರದು? ಯಾಕೆ ಈ ಪತ್ರಿಕೆಯ ಮೂಲಕ ಶಿವಶರಣರು ಸಾರಿದ ಸಾಮಾಜಿಕ ಜೀವನ ಮೌಲ್ಯ, ಧಾರ್ಮಿಕ ಹಿರಿಮೆ ಮತ್ತು ಆಧ್ಯಾತ್ಮಿಕ ಉದಾತ್ತ ತತ್ವಗಳನ್ನು ಪ್ರಸರಣಗೊಳಿಸಬಾರದು? ಎನ್ನುವ ಆಲೋಚನೆಗಳು ಏಕಕಾಲಕ್ಕೆ ಅವರಲ್ಲಿ ಮೂಡಿನಿಂತವು. ಧರ್ಮಪ್ರವೃತ್ತಿ, ಧಾರ್ಮಿಕ ಶ್ರದ್ಧೆಗಳು ಸಾಹಿತ್ಯದ ಮೂಲಕ ಜನತೆಗೆ ತಲುಪುವುದು ಅಗತ್ಯ. ಅಂಥ ಕಾರ್ಯನಿರ್ವಹಣೆ ನೂರಾರು ಉಪನ್ಯಾಸಗಳಿಂದಲೂ ಸಾಧ್ಯವಾಗದು. ಆದರೆ ಈ ಬಗೆಯ ಉದ್ದೇಶಕ್ಕೇ

ಮೀಸಲಾದ ಪತ್ರಿಕೆ, ಅದನ್ನು ಸಹಜವಾಗಿ ಸಾಧಿಸಬಹುದು ಎಂದು ಬಗೆದ ಹಳಕಟ್ಟಿಯವರು, ಫೆಬ್ರವರಿ ೧೯೨೬ ರಲ್ಲಿ **ಶಿವಾನುಭವ** ಹೆಸರಿನಲ್ಲಿ ಒಂದು ನಿಯತಕಾಲಿಕ ಪತ್ರಿಕೆ ಆರಂಭಿಸಿದರು.

ಜನ ಸಮೂಹಕ್ಕೆ ಧಾರ್ಮಿಕ ವಿಚಾರ, ವಿಶಿಷ್ಟವಾದ ವಚನ ಸಾಹಿತ್ಯದ ಹಿರಿಮೆ ಗರಿಮೆಗಳನ್ನು ಸಂವಹನಗೊಳಿಸಲು, ಪತ್ರಿಕೆ ಒಂದು ಪ್ರಬಲ ಮಾಧ್ಯಮ ಎನ್ನುವ ಸತ್ಯವನ್ನು ಹಳಕಟ್ಟಿಯವರು ಮನಗಂಡರೆಂದು ತೋರುತ್ತದೆ. ಸರಳ ಮತ್ತು ಸುಲಭವಾದ ಭಾಷೆ, ಶೈಲಿಗಳ ಸಾಹಿತ್ಯ ಮತ್ತು ಆ ಸಾಹಿತ್ಯದ ಜೊತೆ ವೀರಶೈವ ಧರ್ಮದ ಚರಿತ್ರೆ, ತೌಲನಿಕ ವಿವೇಚನೆ, ಸಾಧಾರವಾದ ಬರಹಗಳು, ನಿರ್ಲಕ್ಷ್ಯಕ್ಕೊಳಗಾದ ಸಾಮಾನ್ಯ ವರ್ಗದಿಂದ ಬಂದು ಅಸಾಮಾನ್ಯರೆನ್ನಿಸಿಕೊಂಡ ಶರಣ ಸಂತ ಅನುಭಾವಿಗಳಿಗೆ ಸಂಬಂಧಿಸಿದ ಅಗಣಿತ ದಾಖಲೆಗಳನ್ನು ಪ್ರಕಟಿಸಿ, ಐತಿಹಾಸಿಕ ಅಂಶಗಳನ್ನು ಖಚಿತಗೊಳಿಸುವುದು ಮತ್ತು ಜನತೆಯಲ್ಲಿ ತಮ್ಮ ಪರಂಪರೆ, ಚರಿತ್ರೆಗಳ ಅರಿವು ಮೂಡಿಸುವುದು ಹೀಗೆ ಹಲವಾರು ಆದರ್ಶಗಳು, ಅವರಲ್ಲಿ ಒಂದು ಬಗೆಯ ಆಂತರಿಕ ಅಸ್ವಸ್ಥತೆಯನ್ನು ಮೂಡಿಸಿ, ಸಾಮಾಜಿಕರಲ್ಲಿ ಧಾರ್ಮಿಕ ಪ್ರಜ್ಞೆ ಜಾಗ್ರತಗೊಳಿಸುವ ಒಂದು ವಿಶಿಷ್ಟ ಪತ್ರಿಕೆಯನ್ನು ರೂಪಿಸಲು ಪ್ರಚೋದನೆ ನೀಡಿದವು. ಅದೇ **ಶಿವಾನುಭವ** ಪತ್ರಿಕೆ. ೧೯೨೬ ರಲ್ಲಿ ಪ್ರಕಟಗೊಂಡ **ಶಿವಾನುಭವ** ಮಾಸಪತ್ರಿಕೆಯ ಮೊದಲನೆಯ ಸಂಚಿಕೆಯಲ್ಲಿ ಈ ಪತ್ರಿಕೆಯ ಉದ್ದೇಶವನ್ನು ಅವರು ಹೀಗೆ ವಿವರಿಸಿದ್ದಾರೆ:

> "**ಶಿವಾನುಭವ** ಮಾಸಪತ್ರಿಕೆಯ ಉದ್ದೇಶವು, ವೀರಶೈವ ಧರ್ಮದಲ್ಲಿಯ ಧರ್ಮಗ್ರಂಥಗಳನ್ನು ಪ್ರಸಿದ್ಧಪಡಿಸುವುದೇ ಮುಖ್ಯವಾಗಿರುತ್ತದೆ. ಈ ಉದ್ದೇಶದಿಂದ ಹೊರಡಿಸಲ್ಪಟ್ಟ ಪತ್ರಿಕೆಗಳಾಗಲಿ ಇಲ್ಲವೆ ಪುಸ್ತಕಮಾಲಿಕೆಗಳಾಗಲಿ ಈಗ ಯಾವವೂ ಇರುವುದಿಲ್ಲ. ಕೈ.ವಾ. ರಾವಬಹದ್ದೂರ ಮಲ್ಲಪ್ಪ ವಾರದ ಇವರು ಬಹಳ ಹಣ ವ್ಯಯ ಮಾಡಿ, ಅನೇಕ ಧಾರ್ಮಿಕ ಗ್ರಂಥಗಳನ್ನು ಮೊದಲು ಹೊರಪಡಿಸಿದರು. ಅವರ ಪ್ರಯತ್ನಗಳಿಂದ ಅನೇಕ ಧಾರ್ಮಿಕ ಗ್ರಂಥಗಳು ವಿಶೇಷವಾಗಿ ಸಂಸ್ಕೃತ ಗ್ರಂಥಗಳು ಹೊರಬಿದ್ದವು.... ತರುವಾಯ ಕೈ.ವಾ. ಎನ್.ಆರ್ ಕರಿಬಸವಶಾಸ್ತ್ರಿಗಳು ಈ ಮಹತ್ವದ ಕಾರ್ಯ ಕೈಕೊಂಡು 'ವೀರಶೈವ ಗ್ರಂಥ ಪ್ರಕಾಶಿಕಾ' ಎಂಬ ಹೆಸರಿನಿಂದ ಒಂದು ಮಾಸಪತ್ರಿಕೆಯನ್ನು ಹೊರಡಿಸಹತ್ತಿದರು.... ಅನೇಕ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಪ್ರಕಾಶಿತವಾದುವು. ಆದರೆ ಈಚೀಚೆಗೆ ಇಂಥ ಗ್ರಂಥ ಪ್ರಕಾಶನ ಕಾರ್ಯಗಳು ನಿಂತುಹೋ ವೆ."

ಹಳಕಟ್ಟಿಯವರು **ಶಿವಾನುಭವ** ಪತ್ರಿಕೆಯ ಮೂಲಕ ಹಮ್ಮಿಕೊಂಡ ಕಾರ್ಯಗಳು ಎರಡು ಬಗೆಯಾಗಿದ್ದುವು. ಒಂದು: ವೀರಶೈವ ಧರ್ಮಜಿಜ್ಞಾಸೆ, ಧರ್ಮಚಿಂತನೆ,

ಆಧ್ಯಾತ್ಮಿಕ ವೈಶಿಷ್ಟ್ಯಗಳನ್ನು ಜನರಿಗೆ ತಿಳಿಸುವುದು; ಎರಡು: ವೀರಶೈವ ಧರ್ಮಕ್ಕೆ ಸಂಬಂಧಿಸಿದ ಮೌಲಿಕ ಕಾವ್ಯ, ವಚನ ಇತ್ಯಾದಿ ಸಾಹಿತ್ಯ ಕೃತಿಗಳನ್ನು ಖಂಡಖಂಡವಾಗಿ ಈ ಪತ್ರಿಕೆಯಲ್ಲಿ ಪ್ರಕಟಿಸಿ, ಬಳಿಕ ಅವುಗಳನ್ನು ಬೇರೆ ಬೇರೆ ಪುಸ್ತಕಗಳಾಗಿ ಹೊರತರುವುದು.

**ಶಿವಾನುಭವ** ಪತ್ರಿಕೆಯ ಸಂಚಿಕೆಗಳನ್ನು ನೋಡುತ್ತ ಹೋದಂತೆ ವೀರಶೈವ ಸಾಹಿತ್ಯದ ವಿವಿಧ ಪ್ರಕಾರಗಳು: ಇತಿಹಾಸ, ಧರ್ಮ, ತತ್ವ, ಪ್ರಸಿದ್ಧ ತೀರ್ಥಕ್ಷೇತ್ರ ಮಠಮಾನ್ಯಗಳ ಪರಿಚಯ, ಪ್ರಾಚೀನ ಅರ್ವಾಚೀನ ಶರಣ ಶರಣೆಯರ, ಯೋಗಿ ಸಂತರ ಸಂಕ್ಷಿಪ್ತ ಜೀವನ ಚರಿತೆ, ವೀರಶೈವ ಅರಸು–ಅರಸಿ, ದೇಸಾಯಿ–ದೇಸಗತಿ ಮುಂತಾದ ಐತಿಹಾಸಿಕ ದಾಖಲೆಗಳು – ಹೀಗೆ ಬೆಳಕು ಕಂಡು, 'ಶಿವಾನುಭವ' ಪತ್ರಿಕೆ ವರ್ಷದಿಂದ ವರ್ಷಕ್ಕೆ ಜನಪ್ರಿಯತೆಯನ್ನು ಪಡೆಯಿತು. ಆದರೆ ಅದರ ಆರ್ಥಿಕ ಸ್ಥಿತಿ ಅಷ್ಟೊಂದು ಸುಧಾರಿಸಲಿಲ್ಲ. ಈ ನಡುವೆ ಕಾರವಾರದ ಕಡೆಯ ಶ್ರೀ ನಾಯಕ ಎನ್ನುವ(ಐ.ಎ.ಎಸ್)ವರು ಬಿಜಾಪುರ ಜಿಲ್ಲೆಯ ಆಡಳಿತಾಧಿಕಾರಿಗಳಾಗಿ ಬಂದಿದ್ದರು. ಹಳಕಟ್ಟಿಯವರ ಕಾರ್ಯವಿಧಾನ, ವಿಧಾಯಕತೆ, ಪ್ರಾಮಾಣಿಕತೆಗಳು ಶ್ರೀ ನಾಯಕರಿಗೆ ಮೆಚ್ಚುಗೆಯಾದವು. **ಕನ್ನಡೇಶ್ವರಿ**ಯ ಒಂದು ಗುಡಿ ಕಟ್ಟಿಸಲು ಕೂಡ ಅವರು ಉತ್ಸಾಹ ತೋರಿದರೆಂದು ಹೇಳಲಾಗುತ್ತದೆ. ಆದರೆ ಈ **ಧರ್ಮಾಭಿಮಾನಿ**, ಪ್ರಾಮಾಣಿಕ **ಆಡಳಿತಾಧಿಕಾರಿ**, ಹಳಕಟ್ಟಿಯವರ ಪತ್ರಿಕೆಯ ಆರ್ಥಿಕ ಸ್ಥಿತಿ ಸುಧಾರಿಸುವಲ್ಲಿ ಕೆಲಮಟ್ಟಿಗೆ ನೆರವು ನೀಡಿದರೂ, **ಶಿವಾನುಭವ** ಪತ್ರಿಕೆ ಮೇಲುನೋಟಕ್ಕೆ ಜನಪ್ರಿಯವಾಯಿತು; ಆಂತರಿಕವಾಗಿ ಆರ್ಥಿಕ ದೃಷ್ಟಿಯಿಂದ ಕ್ಷೀಣಿಸುತ್ತ ನಡೆಯಿತು. ಕೆಲವೊಮ್ಮೆ ತ್ರೈಮಾಸಿಕವಾಗಿ, ೨–೩ ತಿಂಗಳು ಕೂಡಿ ಒಂದೇ ಸಂಚಿಕೆಯಾಗಿ ಬೆಳಕು ಕಾಣುವಂತಾಯಿತು. ಶ್ರೀ ಹಳಕಟ್ಟಿ ಅವರು ಒಬ್ಬ ಕಾಯಕ ಯೋಗಿಯಂತೆ, ನಿಷ್ಠೆಯಿಂದ ತಮ್ಮ ಧಾರ್ಮಿಕ ಸಂವಹನ ಕಾರ್ಯವನ್ನು ಮುಂದುವರೆಸಿದರು. **ಶಿವಾನುಭವ** ಪತ್ರಿಕೆಯ ಕೆಲವೊಂದು ಲೇಖನಗಳು ಗಂಭೀರವಾಗಿರುತ್ತಿದ್ದರೆ, ಇನ್ನು ಕೆಲವು ಜನಸಾಮಾನ್ಯರಿಗೂ ಅರ್ಥವಾಗುವಂತೆ ಆಸಕ್ತಿ ಹುಟ್ಟಿಸುವಂತೆ ಮೂಡಿಬರುತ್ತಿದ್ದುವು. ಸಂಶೋಧನೆ, ವಿಮರ್ಶೆ, ವಾದವಿವಾದಗಳ ಜೊತೆಗೆ ಸೃಜನಶೀಲ ಬರಹಗಳೂ, ಕವಿತೆ ನಾಟಕ ಇತ್ಯಾದಿ **ಶಿವಾನುಭವ** ಪತ್ರಿಕೆಯಲ್ಲಿ ಸ್ಥಾನ ಪಡೆದುವು.

ಕಾಲಾನಂತರ ರಾಜಕೀಯ ಪರಿಸ್ಥಿತಿ ಬದಲಾಗಿ, ಕರ್ನಾಟಕ ಏಕೀಕರಣ ಚಳವಳಿ ಕನ್ನಡ ನಾಡಿನಲ್ಲಿ ತೀವ್ರಗೊಂಡಾಗ, **ಶಿವಾನುಭವ** ಪತ್ರಿಕೆಯ ಧೋರಣೆಯಲ್ಲಿ ಒಂದಷ್ಟು ಬದಲಾವಣೆ ತರುವತ್ತ ಹಳಕಟ್ಟಿಯವರು ಆಲೋಚಿಸಿದಂತೆ ತೋರುತ್ತದೆ. ೧೯೫೦ ರ ದಶಕದಲ್ಲಿ ಬಿ. ಶಿವಮೂರ್ತಿ ಶಾಸ್ತ್ರಿಗಳು 'ಹೊಸೂರು ತಾಲ್ಲೂಕು', 'ಮಡಕಶಿರಾ ತಾಲ್ಲೂಕು', 'ನೀಲಗಿರಿ ತಾಲ್ಲೂಕು' ಎನ್ನುವ ಮೂರು ಪುಸ್ತಿಕೆಗಳನ್ನು ಪ್ರಕಟಿಸಿ **ಶಿವಾನುಭವ** ಪತ್ರಿಕೆಗೆ ಕಳಿಸಿ, ಅವುಗಳ ವಿಮರ್ಶೆ ಮಾಡಿ ಈ ತಾಲ್ಲೂಕಿನ

ಕನ್ನಡ ಜನರ ಸ್ಥಿತಿಗತಿ ಮತ್ತು ಅವು ಕರ್ನಾಟಕಕ್ಕೆ ಸೇರಬೇಕಾದ ಅಗತ್ಯತೆಯನ್ನು ಅಂಕಿ ಸಂಖ್ಯೆಗಳ ಆಧಾರಗಳಿಂದ ಸಮರ್ಥಿಸಿ, ಕನ್ನಡದ ಜನತೆಗೆ ಮತ್ತು ಸರಕಾರಕ್ಕೆ ಈ ವಾಸ್ತವ ಸಂಗತಿಗಳ ಪರಿಚಯ ಮಾಡಿಕೊಡಬೇಕು ಎಂದು, ಶ್ರೀ ಹಳಕಟ್ಟಿಯವರನ್ನು ಕೇಳಿಕೊಂಡರು. ಶಿವಾನುಭವ (ಜೂನ್–ಜುಲೈ ೧೯೩೪ಳ ಸಂಚಿಕೆ ಆರು ಮತ್ತು ಏಳು, ಸಂಪುಟ ೨ಽ) ಪತ್ರಿಕೆಯ ಸಂಪಾದಕ ಹಳಕಟ್ಟಿಯವರು ***ಕರ್ನಾಟಕ ಏಕೀಕರಣ ಸಮಸ್ಯೆಯು*** ಎನ್ನುವ ತಲೆಬರಹದ ಲೇಖನ ಬರೆದು ವಿವರಿಸಿದ ಕೆಲವು ಮಾತು ಗಮನಾರ್ಹವಾಗಿವೆ:

> "ಒಂದು ನಾಡಿನ ಸರ್ವಾಂಗಪೂರ್ಣ ಸುಧಾರಣೆಯು ಅದರ ಆರ್ಥಿಕ ಸಾಂಸ್ಕೃತಿಕ ರಾಜಕೀಯ ಇಂಥ ವಿಷಯಗಳ ಮೇಲೆ ಅವಲಂಬಿಸಿರುತ್ತದೆ. ಶಿವಾನುಭವ ಪತ್ರಿಕೆಯು ಕೇವಲ ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಷಯಗಳ ಬಗ್ಗೆ ಯಾವಾಗಲೂ ಚರ್ಚೆ ಮಾಡುತ್ತ ಬಂದಿದೆ. ಈ ವಿಷಯಗಳ ಬಗ್ಗೆ ಅದು ಕೆಲಮಟ್ಟಿಗೆ ಉಪಯುಕ್ತ ಕಾರ್ಯಗಳನ್ನು ಮಾಡಿರುತ್ತದೆ. ಆದರೆ ಈ ಪತ್ರಿಕೆಯಲ್ಲಿ ನಾವು ರಾಜಕೀಯ ವಿಷಯಗಳ ಚರ್ಚೆಗೆ ಅನೇಕ ಕಾರಣಗಳ ಮೂಲಕ ಸ್ಥಾನವನ್ನು ಕೊಟ್ಟಿರುವುದಿಲ್ಲ. ಹಿಂದೂಸ್ಥಾನದ ಈಗಿನ ಪರಿಸ್ಥಿತಿಯಲ್ಲಿ ಬಹಳ ಬದಲಾವಣೆಯಾಗುತ್ತ ಬಂದದ್ದರಿಂದ ನಾಡಿನ ಸಮಸ್ಯೆಗಳ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ನಾವು ಕೊಡುತ್ತಿರಲಿಲ್ಲ. ಆದರೆ, ಈ ಪರಿಸ್ಥಿತಿಯು ಈಗ ಉಳಿಯದೆ, ಎಲ್ಲ ಪ್ರಾಂತಗಳ ಆಡಳಿತಗಳು ಕೇವಲ ಒಂದು ಮಾರ್ಗವನ್ನು ಅನುಸರಿಸಹತ್ತಿರುತ್ತವೆ. ಶಿವಾನುಭವ ಪತ್ರಿಕೆಯ ಮುಖ್ಯ ಧ್ಯೇಯವು ವಾಙ್ಮಯ ಸಂಶೋಧನೆಯಾಗಿರುವುದರಿಂದ, ಇತರ ವಿಷಯಗಳ ಚರ್ಚೆಗೆ ನಾವು ಪ್ರಾಮುಖ್ಯತೆಯನ್ನು ಕೊಡುತ್ತ ಬರಲಿಲ್ಲ. ಆದರೆ ಈ ಮಾರ್ಗವನ್ನು ನಾವು ಇನ್ನು ಮುಂದೆ ಅನುಸರಿಸುತ್ತ ಹೋದರೆ ಜನತೆಯ ಸುಧಾರಣೆಗೆ ಈ ಪತ್ರಿಕೆಯು ಸಹಾಯಕಾರಿಯಾಗಲಾರದೆಂದು ಭಾವಿಸಿ, ಸಮಾಜ ಸುಧಾರಣೆಗೆ ಪೋಷಕವಾಗಿರುವ ಇತರ ವಿಷಯಗಳ ಬಗ್ಗೆಯೂ ನಾವು ಪತ್ರಿಕೆಯಲ್ಲಿ ಚರ್ಚೆ ಮಾಡುವುದು ಅವಶ್ಯವೆಂದು ನಮಗೆ ತೋರುತ್ತದೆ. ಈ ಕಾಲಕ್ಕೆ ರಾಜಕೀಯ ಸಮಸ್ಯೆಗಳಲ್ಲಿ ಕರ್ನಾಟಕ ಏಕೀಕರಣವು ಒಂದು ಅತ್ಯಂತ ಮಹತ್ವದ ವಿಷಯವಾಗಿದೆಯೆಂಬುದು ನಿರ್ವಿವಾದವು."

ಈ ಮೇಲಿನ ವಿಚಾರಗಳು ಒಬ್ಬ ಸಂವಹನಕಾರನ ಸಮಕಾಲೀನ ಪ್ರಜ್ಞೆಗೆ ದ್ಯೋತಕವಾಗಿವೆ. ಆದರೆ ತಮ್ಮ ಈ ಬಗೆಯ ಆಲೋಚನೆ ಅಭಿಪ್ರಾಯಗಳನ್ನು ಜನರಿಗೆ ತಲುಪಿಸಲು ಹಳಕಟ್ಟಿಯವರು, ಮತ್ತೊಂದು ಪ್ರತ್ಯೇಕವಾದ ***ನವ ಕರ್ನಾಟಕ*** ವಾರಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸುತ್ತಿದ್ದುದರಿಂದ, **ಶಿವಾನುಭವ** ಪತ್ರಿಕೆಯ ಧೋರಣೆಯಲ್ಲಿ ಅವರು ಯಾವುದೇ ಬದಲಾವಣೆ ತಾರದೆ ಅದರ ವೈಶಿಷ್ಟ್ಯವನ್ನು

– ವೀರಶೈವ ಸಾಹಿತ್ಯ, ಚರಿತ್ರೆ ಮತ್ತು ಸಂಸ್ಕೃತಿಯ ಪ್ರಾಧಾನ್ಯ – ಹಾಗೆಯೇ ಮುಂದುವರೆಯಿಸಿದಂತೆ ಕಾಣುತ್ತದೆ. ಶಿವಾನುಭವ ಪತ್ರಿಕೆಯ ಈ ಸೀಮಿತ ಧೋರಣೆಯಿಂದ ಚಂದಾದಾರರ ಸಂಖ್ಯೆ ಇಳಿಮುಖವಾಗಿ, ಅದರ ಆರ್ಥಿಕ ಭಾರವನ್ನು ಸಂಪಾದಕರೇ ಹೊರಬೇಕಾಗಿ ಬಂದರೂ, ಅವರದೇ ಮತ್ತೊಂದು ಸಮಕಾಲೀನ ವಿವಿಧ ವಿಷಯ ಸಂಗತಿ ಸುದ್ದಿಗಳನ್ನು ಒಳಗೊಂಡು ಪ್ರಕಟವಾಗುತ್ತಿದ್ದ **ನವ ಕರ್ನಾಟಕ** ಮತ್ತು **ಶಿವಾನುಭವ** ಪತ್ರಿಕೆಯಲ್ಲಿ ಪ್ರಕಟವಾದ ಕಾವ್ಯ, ವಚನ ಇತ್ಯಾದಿಗಳನ್ನು ಶಿವಾನುಭವ ಗ್ರಂಥಮಾಲೆಯ ಮೂಲಕ, ವಿವಿಧ ಕೃತಿ ರೂಪದಲ್ಲಿ ಹೊರತಂದು, ಅವುಗಳ ಮಾರಾಟ ದೇಣಿಗೆಗಳಿಂದ ಸಂಗ್ರಹವಾಗಬಹುದಾದ ಅಲ್ಪ ಸ್ವಲ್ಪ ಆರ್ಥಿಕ ಆಧಾರದ ಮೂಲಕ ಈ ಪತ್ರಿಕೆಯ ಮುಂದುವರಿಕೆಗೆ ಉಂಟಾದ ತೊಂದರೆಗಳನ್ನು ನಿವಾರಿಸಿಕೊಂಡು, ಅದರ ಕಾರ್ಯ ನಿರಾತಂಕವಾಗಿ ನಡೆಯುವಂತೆ ನೋಡಿಕೊಳ್ಳಲಾಯಿತು.

೧೯೨೬ ರ ಫೆಬ್ರವರಿ ತಿಂಗಳು ಪ್ರಕಟಗೊಂಡ ಈ ಪತ್ರಿಕೆ ೧೯೨೮ ರವರೆಗೆ ತ್ರೈಮಾಸಿಕವಾಗಿ, ೧೯೨೮ ರಿಂದ ಮಾಸಿಕವಾಗಿ ಪರಿವರ್ತನೆಗೊಂಡಿತು. ಜನತೆಗೆ ತಮ್ಮ ಸಾಹಿತ್ಯ ಸಂಸ್ಕೃತಿಗಳ ಅರಿವು ಮೂಡಿಸುತ್ತ ಪತ್ರಿಕಾನೀತಿಗೆ ಚ್ಯುತಿ ಬಾರದ ರೀತಿಯಲ್ಲಿ ಕಾರ್ಯ ಮಾಡಿದ **ಶಿವಾನುಭವ** ೧೯೫೧ ರಲ್ಲಿ ತನ್ನ ರಜತಮಹೋತ್ಸವ ಆಚರಿಸಿತು.

ಶಿವಾನುಭವ ಪತ್ರಿಕೆಯ ಕಾರ್ಯ ಎರಡು ಹಂತದಲ್ಲಿ ಮುಂದುವರೆಯಿತು. ಒಂದೆಡೆ ಸರಳ ಸುಂದರ ಲೇಖನಗಳು, ಮತ್ತೊಂದೆಡೆ ವಿವಿಧ ವಚನ, ಕಾವ್ಯ ಕೃತಿಗಳು. ಪ್ರತಿ ಸಂಚಿಕೆಯಲ್ಲೂ ಖಂಡಖಂಡವಾಗಿ ಹೊರಬರುತ್ತಿದ್ದ ವಚನಗಳನ್ನು ಓದಿ ಜನ ತಮ್ಮ ಮೆಚ್ಚುಗೆ ಸೂಚಿಸುತ್ತ ಬಂದಾಗ, ಹಳಕಟ್ಟಿಯವರಿಗೆ ಬೇರೊಂದು ವಿಚಾರ ಹೊಳೆಯಿತು. ಅದರ ಫಲವಾಗಿ ಪ್ರಕಟಗೊಂಡ ವಚನಗಳು **ಶಿವಾನುಭವ *ಗ್ರಂಥಮಾಲೆ***ಯ ಕೃತಿಗಳಾಗಿ ಬೆಳಕು ಕಂಡವು. ವಚನಗಳಲ್ಲಿ ಹುದುಗಿರುವ ಸಾಹಿತ್ಯದ ಸೌಂದರ್ಯ, ವೀರಶೈವತತ್ವ, ಅವು ಪ್ರತಿಪಾದಿಸಿದ ಸಾಮಾಜಿಕ ಮೌಲ್ಯ, ಕಾಯಕ ನಿಷ್ಠೆ, ವೈಚಾರಿಕತೆ, ಮಾನವೀಯ ಸಮಾನತೆ, ವೀರಶೈವ ಇತಿಹಾಸ ವಚನಕಾರರು, ಶರಣರು, ಸಂತರು, ಮತಮಾನ್ಯಗಳು, ದೇಸಾಯಿ ದೇಸಗತಿಗಳ ಸಾಧಾರ ಚರಿತ್ರೆ ಮುಂತಾದ ಹಲವಾರು ವಿಷಯಗಳ ಪ್ರಕಟನೆಯಿಂದಾಗಿ ಶಿವಾನುಭವ ಪತ್ರಿಕೆ ಒಂದು ಮೌಲಿಕ ಪತ್ರಿಕೆಯಾಗಿ ಮನ್ನಣೆ ಪಡೆಯಿತು. ನಾಡಿನ ನಾನಾ ಭಾಗದ ಸಂಶೋಧಕರು, ಆಲೋಚಕರು, ವಿದ್ವಾಂಸರ ಲೇಖನಗಳು ಪ್ರಕಟವಾದುವು. ವಿದ್ವಜ್ಜನರ ಪ್ರತಿಕ್ರಿಯೆ, ಚರ್ಚೆ ಪರಿಚರ್ಚೆಗಳಿಗೆ ಪತ್ರಿಕೆ ಒಂದು ಗಮನಾರ್ಹ ವೇದಿಕೆಯಾಯಿತು. ಈ ಕಾರಣದಿಂದಾಗಿ ಸುಮಾರು ೩–೪ ದಶಕಗಳಲ್ಲಿ ಕನ್ನಡನಾಡಿನ ಉದ್ದಗಲಕ್ಕೆ ವಚನಗಳನ್ನು ಕುರಿತ ಸಂಗ್ರಹ ಪ್ರಕಟನೆಯ ಕಾರ್ಯ ತೀವ್ರಗತಿಯಿಂದ ಮುಂದುವರೆಯುವಂತಾಯಿತು. ಮನೆಮಠ, ಶಾಲೆಕಾಲೇಜು,

ವಿಶ್ವವಿದ್ಯಾಲಯಗಳ ವಿವಿಧ ಎಡೆಗಳಲ್ಲಿ ವಚನಗಳ ಅಧ್ಯಯನ, ಅಧ್ಯಾಪನ, ವಿವೇಚನೆ, ಸಂಶೋಧನೆ ವಿಮರ್ಶಾ ಕಾರ್ಯ ಅವ್ಯಾಹತವಾಗಿ ನಡೆಯಿತು.

ಶಿವಾನುಭವ ಪತ್ರಿಕೆಯ ಸಂಚಿಕೆಗಳನ್ನು ಅವಲೋಕಿಸಿದಾಗ, ಕನ್ನಡನಾಡಿನ ಗಣ್ಯ ವಿದ್ವಾಂಸ ಸಂಶೋಧಕ, ಸಾಹಿತ್ಯ ವಿಮರ್ಶಕರ ಆಲೋಚಕರ ತಂಡವೇ ಬರೆದ ಅನೇಕ ಮಹತ್ವದ ವಿಚಾರಪರಿಪ್ಲುತ ಲೇಖನಗಳು ಕಂಡುಬರುತ್ತವೆ. ಹೀಗೆ ಪ್ರಕಟವಾದ ಲೇಖನಗಳಲ್ಲಿ ೨೫ಕ್ಕೂ ಹೆಚ್ಚು ಪ್ರಬಂಧಗಳು ಅಂದಿನ ಸಂಶೋಧನೆಯ ಮಾರ್ಗವನ್ನು ರೂಪಿಸಿದವು ಎಂದರೆ ತಪ್ಪಾಗಲಾರದು. ಅವುಗಳಲ್ಲಿ ಡಾ. ಎಸ್.ಸಿ. ನಂದೀಮಠರ ***ಚೌಡದಾನಪುರದ ಶಿಲಾಶಾಸನಗಳು*** (೪–೩, ೪), ***ಐತಿಹಾಸಿಕ ಟಿಪ್ಪಣಿಗಳು*** (೫–೯ ರಿಂದ ೧೨), ***ಸುಗ್ಗಲದೇವಿಯ ಶಿಲಾಶಾಸನ ತೊರಗಲ್*** (೭–೧), ***ಕುರುಂಬೆಟ್ಟದ ಶಿಲಾಶಾಸನ*** (೭–೬), ಕೆ. ಜಿ. ಕುಂದಣಗಾರರ ***ಕೊಕಟನೂರು ಚಂದ್ರಶೇಖರ ದೇವಾಲಯದ ಶಿಲಾಶಾಸನ*** (೧೩–೨), ವೀ. ರು. ಕೊಪ್ಪಳರ ***ಹೂಲಿಯ ಮರುಳಸಿದ್ಧೇಶ್ವರ*** (೪–೯), ಚನ್ನಮಲ್ಲ ಅವರ ***ಇತಿಹಾಸದ ಕಣಗಳು*** (೩–೧೧), ***ಹೂಲಿಯ ಪಂಚವಣ್ಣಿಗೆಯ ಮಠ***, ಹಳಕಟ್ಟಿಯವರದೇ ***ಅಗರಖೇಡ ಶಿಲಾಶಾಸನವು*** (೯–೬), ***ಏಕಾಂತದ ರಾಮಯ್ಯ ಮತ್ತು ಅಬ್ಬಲೂರು ಶಿಲಾಶಾಸನವು*** (೪–೩), ಪಿ. ಬಿ. ದೇಸಾಯರ ***ಕರ್ನಾಟಕದಲ್ಲಿ ಸಿದ್ಧನಾಥರು*** (೧೬–೪) ಮುಂತಾದುವು ಚಾರಿತ್ರಿಕ ಚರ್ಚೆ ಪರಿಚರ್ಚೆಗಳ ದೃಷ್ಟಿಯಿಂದ ಗಮನಾರ್ಹವಾಗಿದ್ದು, ವೀರಶೈವ ಧಾರ್ಮಿಕ ಚರಿತ್ರೆಯ ನಿರ್ಮಾಣಕಾರ್ಯದಲ್ಲಿ ಮಹತ್ವದ ಆಕರಗಳಾಗಿವೆ; ಅನೇಕ ಸಂಶೋಧನೆ, ಹೊಸದಿಕ್ಕಿನ ಆಲೋಚನೆಗೆ ಪ್ರೇರಣೆ ನೀಡಿವೆ.

ಶಿವಾನುಭವ ಪತ್ರಿಕೆಯ ಸಂವಹನ ಸ್ವರೂಪದ ಮತ್ತೊಂದು ವೈಶಿಷ್ಟ್ಯವೆಂದರೆ ಇತರ ಪತ್ರಿಕೆಗಳಲ್ಲಿ (ಕನ್ನಡ ಮತ್ತು ಇಂಗ್ಲಿಷ್ ಸಂಸ್ಕೃತಿ ಮುಂತಾದ) ವೀರಶೈವ ಧರ್ಮ, ಕವಿ ಸಾಹಿತ್ಯ ಕುರಿತ ಗಮನಾರ್ಹ ವಿಚಾರ ಲೇಖನಗಳು ಪ್ರಕಟವಾದರೆ, ಅವುಗಳ ಸಾರವನ್ನು, ಕೆಲವೊಮ್ಮೆ ಅಂಥ ಲೇಖನ–ಅನುವಾದಗಳನ್ನು, ತಮ್ಮ ವಾಚಕರ ಪ್ರಯೋಜನಕ್ಕಾಗಿ ಶಿವಾನುಭವದ ಪತ್ರಿಕೆಯಲ್ಲಿ ಮುದ್ರಿಸುವುದು. ಉದಾ: ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ (೨೬–೨) ಪ್ರಕಟವಾಗಿದ್ದ 'ಮಂಗಳವಾಡವು ಬಿಜ್ಜಳನ ರಾಜಧಾನಿಯಾಗಿತ್ತೇ?' ಎನ್ನುವ ಎನ್. ಲಕ್ಷ್ಮೀನಾರಾಯಣರಾವ್ ಅವರ ಲೇಖನದ ನೇರ ಪುನರ್ಮುದ್ರಣ (ಶಿವಾನುಭವ ೧೬–೯), ಡಾ. ನಂದೀಮಠ ಅವರ 'The Hand Book Of Veerashaivism' ಕೃತಿಯ ಜೆ. ಶಾಂತವೀರಪ್ಪನವರ ಇಂಗ್ಲಿಷ್ ಭಾಷೆಯ ವಿಮರ್ಶಾ ಲೇಖನದ ಕನ್ನಡಾನುವಾದದ (ಶಿವಾನುಭವ ೧೭–೨) ಪ್ರಕಟನೆ, ಪಾವಟೆ ಸಿದ್ಧರಾಮಪ್ಪ ಅವರ Veerashaiva Philosophy in Sivagamas ಶಿವಾಗಮಗಳಲ್ಲಿ ವೀರಶೈವ ತತ್ವಜ್ಞಾನ–ಕೃತಿ ಮತ್ತು ಬಿ.ರಾಮರಾವ್ ಪ್ರಕಟಿಸಿದ ಕೆಳದಿಯ ಬಸಪ್ಪನಾಯಕನ 'ಶಿವತತ್ವರತ್ನಾಕರ' ಸಂಸ್ಕೃತ

ಕೃತಿಗಳನ್ನು ಸ್ವತಃ ಸಂಪಾದಕರೇ (ಹಳಕಟ್ಟಿ) ಕನ್ನಡದಲ್ಲಿ ವಿಮರ್ಶಿಸಿ **ಶಿವಾನುಭವದಲ್ಲಿ** ಪ್ರಕಟಿಸಿದ್ದು (೩–೯) ಇವೆಲ್ಲ **ಶಿವಾನುಭವ** ಪತ್ರಿಕೆಯ ವ್ಯಾಪಕ ದೃಷ್ಟಿ ಮತ್ತು ಅದಕ್ಕಿದ್ದ ಧಾರ್ಮಿಕ– ಚಾರಿತ್ರಿಕ ಕಾಳಜಿಗಳ ಪ್ರತೀಕವಾಗಿವೆ.

೧೯೫೧ ರಲ್ಲಿ ರಜತ ಮಹೋತ್ಸವ ಆಚರಿಸಿದ **ಶಿವಾನುಭವ** ೧೯೬೧ ರವರೆಗೂ ಅಖಂಡವಾಗಿ ಜನರಲ್ಲಿ ಧಾರ್ಮಿಕ, ಸಾಹಿತ್ಯಿಕ, ಆಲೋಚನೆ ವಿಚಾರಗಳನ್ನು ಪ್ರಸರಣಗೊಳಿಸುತ್ತ ಬಂದಿತು. ಸುಮಾರು ಮೂರು ದಶಕಗಳಿಗೂ ಮಿಕ್ಕಿ, ಹಳಕಟ್ಟಿಯವರ ದೃಢ ಸಂಕಲ್ಪದ ಫಲವಾಗಿ ಜ್ಞಾನಪ್ರಸಾರದ ಸೇವೆ ಮಾಡಿದ ಶಿವಾನುಭವ ಪತ್ರಿಕೆ, ಕರ್ನಾಟಕ ಪತ್ರಿಕಾ ಪ್ರಪಂಚದ ಒಂದು ಅವಿಸ್ಮರಣೀಯ ಸಂಪುಟ.

## 'ನವಕರ್ನಾಟಕ' ವಾರಪತ್ರಿಕೆ: ಸಂವಹನ ವೈವಿಧ್ಯ

೧೯೨೬ ರಲ್ಲಿ ಧಾರ್ಮಿಕ ಸಾಹಿತ್ಯ ಸಂವಹನಕ್ಕಾಗಿ ಮೀಸಲಿಟ್ಟ ತಮ್ಮ ಮಾಸ ಪತ್ರಿಕೆ **ಶಿವಾನುಭವ** ಪತ್ರಿಕೆಯ ಹೊಣೆ ಹೊತ್ತ ಹಳಕಟ್ಟಿಯವರು, ನಾಡಿನ ಜನತೆಗೆ ಸಾಮಾನ್ಯ ಜ್ಞಾನ ಸುದ್ದಿ, ತಿಳುವಳಿಕೆಗಳನ್ನು ತಲುಪಿಸುವ ದೃಷ್ಟಿಯಿಂದ, ಮುಂದೆ ಒಂದೇ ವರ್ಷದಲ್ಲಿ (೧೯೨೭) **ನವಕರ್ನಾಟಕ** ವಾರಪತ್ರಿಕೆಯನ್ನು ಸ್ಥಾಪಿಸಿ, ವ್ಯಾಪಕ ರೀತಿಯ ಜ್ಞಾನ ಪ್ರಸರಣದ ಜವಾಬ್ದಾರಿ ಪೂರೈಸಿದರು.

೧೮೧೯ ರಲ್ಲಿ ಗಂಗಾಧರ ಭಟ್ಟಾಚಾರ್ಯ ಆರಂಭಿಸಿದ ಬೆಂಗಾಲ್ ಗೆಝೆಟ್ ಮೊದಲ ಭಾರತೀಯ ಪತ್ರಿಕೆ. ಅಂದಿನಿಂದ ಸುಮಾರು ಐದು ದಶಕಗಳ ಅವಧಿಯಲ್ಲಿ ಹುಟ್ಟಿಕೊಂಡ ಪರ್ಷಿಯನ್ 'ಮೀರತ್ ಉಲ್ ಅಕ್ಬರ್', ಬಂಗಾಲಿ ಭಾಷೆಯ 'ಸಂಬಂಧ ಕೌಮುದಿ' ಮುಂತಾದ ಪತ್ರಿಕೆಗಳು ಬ್ರಿಟಿಷರ ದುರಾಡಳಿತವನ್ನು ಬಯಲಿಗೆಳೆಯತೊಡಗಿದವು. ೧೮೭೦ ರಲ್ಲಿ ಅಂದಿನ ಸರಕಾರ ತಂದ ಪತ್ರಿಕಾ ಮಸೂದೆ, ಜನತೆಯ ಸ್ವತಂತ್ರ್ಯ ಮನೋಭಾವನನೆಗಳನ್ನು ದಮನಗೊಳಿಸುವ ಮತ್ತು ಪತ್ರಿಕೆಗಳನ್ನು ತಮ್ಮ ನಿಯಂತ್ರಣಕ್ಕೆ ಒಳಪಡಿಸುವ ಗುರಿ ಹೊಂದಿತ್ತು. ಆದರೆ ಈ ಬಗೆಯ ಎಲ್ಲ ಕುತಂತ್ರಗಳನ್ನು ಕತ್ತರಿಸುತ್ತ ಭಾರತೀಯ ಪತ್ರಿಕಾರಂಗ ವಿಕಾಸಗೊಂಡು ಕಾರ್ಯ ನಿರ್ವಹಿಸುತ್ತ ಬಂದುದೇ ಒಂದು ಪ್ರತ್ಯೇಕ ರೋಮಾಂಚಕಾರಿ ಚರಿತ್ರೆ.

ಕ್ರಿ.ಶ. ೧೭೮೦ ರ ಜನವರಿ ೨೯ ರಂದು ಕಲ್ಕತ್ತಾದಲ್ಲಿ ಮುದ್ರಣಗೊಂಡು ಪ್ರಕಟವಾದ 'ದಿ ಬೆಂಗಾಲ್ ಗೆಜೆಟ್' ಅಥವಾ 'ದಿ ಕಲ್ಕತ್ತಾ ಜನರಲ್ ಅಡ್ವರ್ಟೈಜರ್' ಭಾರತದಲ್ಲಿ ಅಚ್ಚಾದ ಪ್ರಥಮ ವೃತ್ತಪತ್ರಿಕೆ. ಇದರ ಸಂಪಾದಕ ಜೇಮ್ಸ್ ಅಗಸ್ಟಸ್ ಹಿಕ್ಕಿ. ಇಂಗ್ಲಿಷ್ ಭಾಷೆಯ ಈ ಪತ್ರಿಕೆ ಅಂದಿನ ರಾಜಕೀಯ, ವ್ಯಾಪಾರ, ವಾಣಿಜ್ಯ ಮತ್ತು ಇತರ ವ್ಯಕ್ತಿಗತವಾದ ಸುದ್ದಿಸಂಗತಿಗಳನ್ನು ಪ್ರಕಟಿಸುತ್ತ ಬಂದಿತು. ಈಸ್ಟ್ ಇಂಡಿಯಾ ಕಂಪೆನಿಯ ಸಾಮ್ರಾಜ್ಯಶಾಹೀ ಧೋರಣೆಯನ್ನು

ವಿರೋಧಿಸುತ್ತ ಬಂದ, ಸ್ವತಂತ್ರ ಮನೋಭಾವದ ಅಗಸ್ಟಸ್ ಹಿಕ್ಕಿ, ಕಂಪೆನಿಯ ಕ್ರೂರ ದೃಷ್ಟಿಗೆ ಒಳಗಾಗಿ ಅನೇಕ ತೊಂದರೆಗಳನ್ನು ಅನುಭವಿಸಿದ. ಯಾವುದಕ್ಕೂ ಜಗ್ಗದ ಹಿಕ್ಕಿ, ಮಾನವನ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಲೇಖನಗಳನ್ನು ಪ್ರಕಟಿಸಿದ. ಜನರನ್ನು ಸಂಘಟಿಸಿ, ವಿವಿಧ ಬಗೆಯ ಸರಿಯಾದ ಅಭಿಪ್ರಾಯಗಳನ್ನು ಜನತೆಗೆ ಸಂವಹನಗೊಳಿಸುವ ಸಂಘಟನಾ ಸ್ವಾತಂತ್ರ್ಯ, ಭಾಷಣ ಸ್ವಾತಂತ್ರ್ಯ, ಎಲ್ಲರಿಗೂ ದೊರೆಯಬೇಕಾದ ಶಿಕ್ಷಣದ ಅಗತ್ಯತೆ, ಸಾಮಾಜಿಕ, ಧಾರ್ಮಿಕ ರಂಗದಲ್ಲಿ ತನಗೆ ತೋಚಿದ ಸತ್ಯವನ್ನು ನಿರ್ಭಯವಾಗಿ ಬಿಚ್ಚಿ ಹೇಳುವ ವ್ಯಕ್ತಿ ಸ್ವಾತಂತ್ರ್ಯ ಮುಂತಾದ ವಿಷಯಗಳನ್ನು, ಅಗಸ್ಟಸ್ ಹಿಕ್ಕಿ ನಿರ್ಭಿಡೆಯಿಂದ ತನ್ನ ಪತ್ರಿಕೆಯಲ್ಲಿ ಬಲವಾಗಿ ಪ್ರತಿಪಾದಿಸಿದ ಕಂಪನಿ ಸರಕಾರದ ಜನವಿರೋಧಿ ಧೋರಣೆಗಳ ಖಂಡನೆ, ಬ್ರಿಟಿಷ್ ಅಧಿಕಾರಿಗಳ ನಡವಳಿಕೆಯ ಟೀಕೆ ಸಹ ಈ ಪತ್ರಿಕೆಯ ಅಂಕಣಗಳಲ್ಲಿ ಪ್ರಕಟಗೊಂಡವು. ವಾರನ್ ಹೇಸ್ಟಿಂಗ್ಸ್ ಮುಂತಾದ ಉನ್ನತಾಧಿಕಾರಿಗಳ ಕ್ರೌರ್ಯಕ್ಕೆ ಹಿಕ್ಕಿ ತುತ್ತಾದ. ಯಾವುದಕ್ಕೂ ಸೊಪ್ಪು ಹಾಕದ ಅಗಸ್ಟಸ್ ಹಿಕ್ಕಿ, ಅಧಿಕಾರಿಗಳ ಹೀನ ಪ್ರವೃತ್ತಿಯನ್ನು ಖಂಡಿಸುತ್ತ ವ್ಯಕ್ತಿಯ ಮೂಲಭೂತ ಹಕ್ಕುಗಳನ್ನು ಹತ್ತಿಕ್ಕುವ, ದುರಾಕ್ರಮಣ ನಡೆಸುವ ಶಕ್ತಿಗಳಿಗೆ ಎಂದೂ ತಲೆ ಬಾಗಕೂಡದು ಎನ್ನುವ ದೃಢನಿರ್ಧಾರಕ್ಕೆ ಅಂಟಿಕೊಂಡ. ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಮತ್ತು ಈತ ಪ್ರತಿಪಾದಿಸಿದ ಜನಪರ ಧೋರಣೆಗಳಿಗಾಗಿ ಈತನನ್ನು 'ಭಾರತೀಯ ಪತ್ರಿಕೋದ್ಯಮದ ಪಿತಾಮಹ' ಎಂದೂ ಆತನ ಸಾಧನೆಯನ್ನು ನೆನಪು ಮಾಡಿಕೊಳ್ಳುವುದೇ ಅವನು ಭಾರತೀಯ ಪತ್ರಿಕೋದ್ಯಮಕ್ಕೆ ಕೊಟ್ಟ ಕಾಣಿಕೆಯ ಶ್ರೇಷ್ಠ ಸ್ಮಾರಕ; ದ್ಯೋತಕ' ಎಂದೂ ಕರೆಯಲಾಗಿದೆ. ೧

ಭಾರತೀಯ ಪತ್ರಿಕೋದ್ಯಮ, ೧೯೯೦ ರ ಈ ದಶಕದಲ್ಲಿ ತುಂಬ ವ್ಯಾಪಕವಾಗಿ ಕಾರ್ಯ ನಿರ್ವಹಿಸುತ್ತಿದ್ದು ದಿನಪತ್ರಿಕೆ, ವಾರ, ಪಾಕ್ಷಿಕ, ಮಾಸ, ವಾರ್ಷಿಕದ ವರೆಗೆ ಹರಹು ಪಡೆದು, ಇದರಲ್ಲಿ ಏನುಂಟು ಏನಿಲ್ಲ ಎನ್ನುವ ಗತಿಯಲ್ಲಿ ಒಂದು ಅತ್ಯಂತ ಪ್ರಭಾವಶಾಲಿ ಸಮೂಹ ಸಂವಹನ ಮಾಧ್ಯಮವಾಗಿದೆ; ಮತ್ತು ಅದು ಒಂದು ಉದ್ಯಮವಾಗಿ ರೂಪುಗೊಂಡು ವಿವಿಧ ಪ್ರದೇಶ, ಭಾಷೆಗಳ ಜನಸಮೂಹಕ್ಕೆ ಅಗತ್ಯವಾದ ಎಲ್ಲ ಬಗೆಯ ಸುದ್ದಿ, ತಿಳಿವಳಿಕೆ ಆಲೋಚನೆಗಳನ್ನು ಸಂವಹನಗೊಳಿಸುವಲ್ಲಿ ಮಹತ್ವದ ಪಾತ್ರವಾಡುತ್ತಿದೆ. ವೃತ್ತಪತ್ರಿಕಾ ರಂಗದ ಈ ಬೆಳವಣಿಗೆಗೆ ಸುಮಾರು ಎರಡು ಶತಮಾನಗಳ ಚರಿತ್ರೆಯಿದ್ದು ಅದು ವಿವಿಧ ಘಟ್ಟಗಳನ್ನು ದಾಟಿ, ಬಂದ ಅಡ್ಡಿಆತಂಕಗಳನ್ನು ಎದುರಿಸಿ ಮುನ್ನಡೆದಿರುವುದು ಗಮನಾರ್ಹ.

---

೧. ನಾಡಿಗ ಕೃಷ್ಣಮೂರ್ತಿ: 'ಭಾರತೀಯ ಪತ್ರಿಕೋದ್ಯಮ', ಮೈಸೂರು ವಿಶ್ವವಿದ್ಯಾಲಯ, ೧೯೬೯, ಪು. ೨೩.

ಶ್ರೀ ಹಳಕಟ್ಟಿಯವರ **ನವಕರ್ನಾಟಕ** ವಾರಪತ್ರಿಕೆ ಕುರಿತ ವಿವೇಚನೆ ವಿಶ್ಲೇಷಣೆಗಳನ್ನು ಕೈಗೆತ್ತಿಕೊಳ್ಳುವ ಮೊದಲು, ಈ ಪತ್ರಿಕೆ ಪ್ರಕಟವಾದ 20ನೆಯ ಶತಮಾನದ ಎರಡನೆಯ ದಶಕದ ಸ್ವಲ್ಪ ಆಚೆ ಈಚೆ ಕಣ್ಣಾಡಿಸಿದರೆ, ಕರ್ನಾಟಕದ ಪತ್ರಿಕಾರಂಗದ ಈ ಬಗೆಯ ಚಟುವಟಿಕೆಗಳು ಕುತೂಹಲಕಾರಿಯಾಗಿರುವುದು ಕಂಡುಬರುತ್ತದೆ. ಜೊತೆಗೆ ಈ ಕಾಲಾವಧಿಯಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಗಳು ಅನೇಕ ದೃಷ್ಟಿಯಿಂದ ಮಹತ್ವ ಪಡೆದಿರುವುದು ನಿಶ್ಚಿತ. ಏಕೆಂದರೆ ಇದು ಎರಡು ಮಹತ್ವದ ರಾಷ್ಟ್ರೀಯ ಮತ್ತು ಪ್ರಾದೇಶಿಕ ಸಮಸ್ಯೆಗಳ ಸಂಘರ್ಷದ ಕಾಲಾವಧಿ. ಒಂದು: ಭಾರತ ರಾಷ್ಟ್ರಕ್ಕೆ ಸ್ವಾತಂತ್ರ್ಯ ಲಭ್ಯವಾಗಿರಲಿಲ್ಲ; ಎರಡು: ಚದುರಿದ್ದ ಕನ್ನಡ ಪ್ರದೇಶಗಳು ಒಂದುಗೂಡಿ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದಿರಲಿಲ್ಲ. ೧೯೨೦ ರಿಂದ ೧೯೪೭ ರವರೆಗಿನ ಕಾಲಾವಧಿ ಭಾರತದ ಜನತೆಗೆ ಹೇಗೋ ಹಾಗೆ ವೃತ್ತ ಪತ್ರಿಕಾರಂಗಕ್ಕೂ ಒಂದು ಆಹ್ವಾನವನ್ನು ನೀಡಿದ ಸಮಯ. ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕದ ಏಕೀಕರಣ, ಕರ್ನಾಟಕ ರಾಜ್ಯೋದಯ ಈ ಜ್ವಲಂತ ಸಮಸ್ಯೆಗಳ ಚೂಲ ಮೂಲವನ್ನು ವಿವೇಚಿಸುವ, ಜನತೆಯನ್ನು ಎಚ್ಚರಿಸುವ ಮತ್ತು ಜನತೆಯನ್ನು ಸಂಘಟಿಸಿ, ಈ ಉದ್ದೇಶಗಳನ್ನು ಸಾಧಿಸುವತ್ತ ಅವರನ್ನು ಮುನ್ನಡೆಸುವ ಮಹತ್ವದ ಹೊಣೆಯನ್ನು, ಈ ಕಾಲದ ಪತ್ರಿಕೆಗಳು ಹೊತ್ತುಕೊಳ್ಳಬೇಕಾಯಿತು.

೧೮೪೨ ರ ಸುಮಾರು ಮಂಗಳೂರಿನ ಜರ್ಮನ್ ಮಿಶನ್‌ದವರು ಪ್ರಕಟಿಸಿದ 'ಕನ್ನಡ ಸಮಾಚಾರ' ಎನ್ನುವ ಪತ್ರಿಕೆ, ಕನ್ನಡ ಪತ್ರಿಕಾ ಪ್ರಪಂಚದ ನಾಂದಿ ಎಂದು ಭಾವಿಸಲಾಗಿದೆ.[೧] ಕಾಲಾನಂತರದಲ್ಲಿ ಪ್ರಕಟವಾದ ವಿವಿಧ ಭಾಗದ ವಾರ, ಪಾಕ್ಷಿಕ, ಮಾಸ, ವಾರ್ಷಿಕ ಮುಂತಾದ ಪತ್ರಿಕೆಗಳು ಕನ್ನಡ ಜನತೆಯ ಸಾಮಾಜಿಕ, ರಾಜಕೀಯ ಮತ್ತು ಸಾಹಿತ್ಯಿಕ ಆಶೋತ್ತರಗಳನ್ನು ರೂಪಿಸುವಲ್ಲಿ ಹೆಚ್ಚಿನ ಕಾರ್ಯವೆಸಗಿದಂತೆ ತೋರ್ಬುತ್ತದೆ. ಆ ಅವಧಿಯಲ್ಲಿ ತಲೆಯೆತ್ತಿದ ಕೆಲವು ದಿನಪತ್ರಿಕೆ, ವಾರಪತ್ರಿಕೆ ಇತ್ಯಾದಿಗಳ ಹೆಸರು: 'ಕರ್ನಾಟಕ ಪ್ರಕಾಶಿಕೆ', 'ಕರ್ನಾಟಕ ವೈಭವ', 'ಜಯಕರ್ನಾಟಕ', 'ನವಕರ್ನಾಟಕ', 'ಸಂಯುಕ್ತ ಕರ್ನಾಟಕ', 'ವಿಶಾಲ ಕರ್ನಾಟಕ' ಮುಂತಾಗಿ. ಇದರಿಂದ ಅಂದಿನ ಕನ್ನಡಿಗರಲ್ಲಿ ತಾವೆಲ್ಲ ಒಂದುಗೂಡಬೇಕು, ತಮ್ಮದೇ ಆದ ಪ್ರಾಂತ ರೂಪುಗೊಳ್ಳಬೇಕು ಎನ್ನುವ ಪ್ರಬಲವಾದ ಹಂಬಲ ಮೂಡಿದ್ದು ಸ್ಪಷ್ಟ. ಅವರ ಈ ಪ್ರಾದೇಶಿಕ ಪ್ರಜ್ಞೆ, ರಾಷ್ಟ್ರೀಯ ಪ್ರಜ್ಞೆಯೊಂದಿಗೆ ಸಮರಸಗೊಂಡಿತ್ತೆನ್ನುವುದೂ ಇಲ್ಲಿ ಗಮನಾರ್ಹ. ಅಂದು ಪ್ರಕಟವಾಗುತ್ತಿದ್ದ ಕೆಲವು ಪತ್ರಿಕೆಗಳು: ೧೮೮೩ ರ ಧಾರವಾಡದ ( ಹೊನ್ನಾಪುರ ಮಠ ಗದಿಗೆಯ್ಯ) 'ಚಂದ್ರೋದಯ', ೧೯೦೦ ರ ಮೈಸೂರಿನ (ಯಜಮಾನ ವೀರಬಸಪ್ಪ) 'ಮೈಸೂರ ಸ್ಟಾರ್', ಬಳ್ಳಾರಿಯ (ಪಂ. ನಾಗೇಶಶಾಸ್ತ್ರಿ) 'ಕರ್ನಾಟಕ ಬಂಧು', ಹೊಸಕೇರಿ ಅಣ್ಣಾಚಾರ್ಯರ 'ವಿಜಯ', ಜಠಾರ ವಾಮನರಾಯರ 'ರಾಜಹಂಸ',

೧. ಕನ್ನಡದ ಕಾಲು ಶತಮಾನ, ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ, ೧೯೬೫, ಪು. ೩೪೪.

ಬೆಳಗಾಂವಿಯ (ಪಂಡಿತಪ್ಪ ಚಿಕ್ಕೋಡಿ) 'ವಿಭಾಕರ', (ಸವಣೂರ ಹನುಮಂತರಾವ್) 'ಕರ್ನಾಟಕ ಮಿತ್ರ', 'ಕರ್ನಾಟಕ ವೈಭವ', (ಜಿ.ಎಮ್.ದೇಶಪಾಂಡೆ) ಉತ್ತರಕನ್ನಡ ಜಿಲ್ಲೆಯ 'ಕಾನಡಾ ವೃತ್ತ', 'ಕಾನಡಾ ಧುರೀಣ'– ಹೀಗೆ ಹತ್ತಾರು ವಾರಪತ್ರಿಕೆಗಳು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಮೂಡಿಬಂದುವು. ಇದೇ ಸಂದರ್ಭದಲ್ಲಿ ಮಹಿಳೆಯರಿಗಾಗಿ ಪ್ರಕಟವಾಗುತ್ತಿದ್ದ 'ಸರಸ್ವತಿ' (ಆರ್. ಕಲ್ಯಾಣಮ್ಮ) ಹೀಗೆ ಹೆಸರಿಸಬಹುದಾದ ಇನ್ನೂ ಕೆಲವು ಪತ್ರಿಕೆಗಳು ವಿಚಾರ ಪ್ರಸರಣ ಕಾರ್ಯ ಮಾಡುತ್ತ ಬಂದುವು.

ಸಾಹಿತ್ಯ, ಧರ್ಮಗಳ ಕ್ಷೇತ್ರವನ್ನು ಗಮನಿಸಿದಾಗ ಶ್ರೀ ಹಳಕಟ್ಟಿಯವರು ಮಾಡಿದ ಕಾರ್ಯ ಚಿರಸ್ಮರಣೀಯ. ೧೯೨೬ ನೆಯ ಫೆಬ್ರುವರಿ ತಿಂಗಳಲ್ಲಿ ಆರಂಭಿಸಿದ ಅವರ 'ಶಿವಾನುಭವ' ಪತ್ರಿಕೆ, ಮರೆತುಹೋದ ವಚನತವನಿಧಿಯನ್ನು ಅಖಂಡವಾಗಿ ನಾಲ್ಕು ದಶಕಗಳವರೆಗೆ ಪ್ರಕಟಿಸಿ, ಕನ್ನಡನಾಡಿಗೆ ಮಹದುಪಕಾರ ಮಾಡಿದ ಕಾರ್ಯ ಯಾರೂ ಮರೆಯುವಂಥದಲ್ಲ. ಅವರನ್ನು ಜನ ಮನ್ನಿಸಿ **ವಚನ ಪಿತಾಮಹ** ಎಂದು ಕರೆದು ಗೌರವಿಸಿದುದೇ ಸಾಕ್ಷಿ.

ಶ್ರೀ ಹಳಕಟ್ಟಿಯವರ ಜೀವನದ ಗುರಿ ಇಷ್ಟಕ್ಕೇ ಸೀಮಿತವಾಗಲಿಲ್ಲ. 'ಕರ್ನಾಟಕಸ್ಥರು' ಸರ್ವತೋಮುಖವಾದ ಏಳಿಗೆ ಪಡೆಯಬೇಕು; ರಾಜಕೀಯ, ಸಾಮಾಜಿಕ ಪ್ರಜ್ಞೆಯುಳ್ಳ ಜಾಗ್ರತ ನಾಗರಿಕರಾಗಿ ಬಾಳಬೇಕು; ಸಮಕಾಲೀನ ಜೀವನದ ಎಲ್ಲ ಮಗ್ಗುಲುಗಳನ್ನು ಆಮೂಲಾಗ್ರವಾಗಿ ಅರ್ಥ ಮಾಡಿಕೊಳ್ಳಬೇಕು. ನಡೆಯುತ್ತಿರುವ ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಪ್ರತಿಯೊಂದು ರಂಗದ ಮಹತ್ವದ ಸಂಗತಿಗಳನ್ನು ಅರಿತು ಸ್ಪಂದಿಸುತ್ತಲೇ ರಾಷ್ಟ್ರೀಯ ಪ್ರಜ್ಞೆ ಮತ್ತು ಜನಾಂಗ ಪ್ರಜ್ಞೆಗಳನ್ನು ಸಂವರ್ಧಿಸುತ್ತ, ನಾಡಿನ ಸರ್ವಾಂಗೀಣ ಪ್ರಗತಿಗೆ ಅಹರ್ನಿಶಿ ಶ್ರಮಿಸಬೇಕು; ಈ ದೇಶದ ಪ್ರಜ್ಞಾವಂತ ಪ್ರಜೆಗಳಾಗಿ ಬದುಕಿನ ವಿವಿಧ ರಂಗ ಗಳಲ್ಲಿ ವಿಕಾಸ ಹೊಂದಿ, ಕರ್ನಾಟಕದ ವಿಕಾಸಕ್ಕೆ, ತನ್ಮೂಲಕ ಭಾರತದ ಪ್ರಗತಿಗೆ ಸಿದ್ಧರಾಗಬೇಕು – ಇತ್ಯಾದಿ ಘನವಾದ ಉದ್ದೇಶಗಳಿಂದ ಅವರು ಪ್ರೇರಿತರಾದರು. ತಮ್ಮ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ಹಗಲಿರುಳು ಚಿಂತನೆ ಮಾಡಿದ ಈ ಮಹಾನುಭಾವ, **ಶಿವಾನುಭವ** ತ್ರೈಮಾಸಿಕ ಪತ್ರಿಕೆ ಆರಂಭಿಸಿದ ಮಾರನೆಯ ವರ್ಷವೇ **ನವಕರ್ನಾಟಕ** ಎನ್ನುವ ವಾರಪತ್ರಿಕೆಯನ್ನು ಆರಂಭಿಸಿ, ತಮ್ಮ 'ಹಿತಚಿಂತಕ' ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟಿಸಿದರು.

೧೯೨೬ ರಲ್ಲಿ ತ್ರೈಮಾಸಿಕ 'ಶಿವಾನುಭವ'ದ ಪ್ರಥಮ ಸಂಪುಟದ ಮೊದಲ ಸಂಚಿಕೆ ಬೆಳಕು ಕಂಡಿತು. ಈ ಪತ್ರಿಕೆಗೆ ಕ್ರೌನ್ ಹಾಫ್ ಶೀಟ್ ಆಕಾರದಲ್ಲಿ ೧೨ ಪುಟಗಳು; ಪ್ರತಿಯೊಂದು ಪುಟಕ್ಕೆ ಎರಡು ಕಾಲಂ (ಇಂದಿನ ವೃತ್ತ ಪತ್ರಿಕೆಯ ಎರಡು ಕಾಲಂಗಳಿಗೆ ಸಮವಾದ ಒಂದು ಕಾಲಂ). ಆಶ್ವಿನ ಶುದ್ಧ ೧೦ ಶಕೆ ೧೮೪೯, ಗುರುವಾರ, ಆರನೆಯ ಅಕ್ಟೋಬರ್ ೧೯೨೭ ರಂದು ಪ್ರಕಾಶಗೊಂಡ

***ನವಕರ್ನಾಟಕ*** ವಾರಪತ್ರಿಕೆಯ ***ಬಿಡಿ ಸಂಚಿಕೆಯ ಬೆಲೆ ೧ ಆಣೆ*** ಮತ್ತು ವಾರ್ಷಿಕ ವರ್ಗಣಿ ೩ ರೂ ೧೨ ಆಣೆ. ಸಂಪಾದಕ: ರಾ.ಸಾ.ಫ.ಗು.ಹಳಕಟ್ಟಿ. ಸಂಪಾದಕರ ಹೆಸರು ನಮೂದಿಸುವಲ್ಲಿಯೇ ಅವರು ಇಂಗ್ಲಿಷ್ ಭಾಷೆಯ ಆಂಗ್ಲರ ನಡವಳಿಕೆಗೆ ಜೋತುಬಿದ್ದ 'ರಾವಸಾಹೇಬ'ರಲ್ಲ ಎನ್ನುವ ಮಾತು ಸ್ಪಷ್ಟವಾಗುತ್ತದೆ. ಎಫ್.ಜಿ. ಹಳಕಟ್ಟಿ ಎಂದು ಬರೆದುಕೊಳ್ಳದೆ ಫ.ಗು.ಹಳಕಟ್ಟಿ ಎಂದು ಬರೆದಿರುವುದೇ ಅದಕ್ಕೆ ಒಂದು ನಿದರ್ಶನ.

ವಿವಿಧ ಸಮೂಹ ಸಂವಹನ ಮಾಧ್ಯಮಗಳಲ್ಲಿ ಮುದ್ರಣ ಮಾಧ್ಯಮ, ಭಾರತದಂಥ ದೇಶದಲ್ಲಿ ಬಹಳ ಪ್ರಬಲವಾದುದು. ಪ್ರತಿಶತ ೬೫–೭೭ ಅನಕ್ಷರಸ್ಥರಿರುವ ಈ ದೇಶದಲ್ಲಿ, ಮುದ್ರಿತ ವಿಷಯ ಸತ್ಯವೆಂದೇ ಭಾವಿಸುವ, ನಂಬುವ ಜನರೇ ಅಧಿಕ. ಈ ದೃಷ್ಟಿಯಿಂದ ಈ ಮಾಧ್ಯಮದ ಮೂಲಕ ತನ್ನ ವಿಚಾರ, ಆಲೋಚನೆ, ವಿವೇಚನೆ, ಸಂದೇಶಗಳನ್ನು ಜನತೆಗೆ ಮುಟ್ಟಿಸುವ ವ್ಯಕ್ತಿ, ಒಬ್ಬ ಸಮರ್ಥ ಮತ್ತು ಸಮಗ್ರ ದೃಷ್ಟಿಯ ಸಂವಹನಕಾರನಾಗಿರುವುದು ಅತ್ಯಗತ್ಯ. ತನ್ನ ಸುತ್ತಣ ಯಾವುದೇ ಬಗೆಯ ಎಲ್ಲ ಸ್ತರದ ಆಗುಹೋಗುಗಳಿಗೆ ಘಟನೆಗಳಿಗೆ ಮನಸ್ಸನ್ನು ತೆರೆದಿಟ್ಟು, ಸತ್ಯಾಸತ್ಯತೆಗಳನ್ನು ಗಮನಿಸಿ, ಜನಪರವಾದ ನಿಲವು ತಳೆದು, ಜನಹಿತ ಧೋರಣೆಗಳನ್ನು ತನ್ನ ವೃತ್ತಪತ್ರಿಕೆಯ ಮೂಲಕ ಸಂವಹನಗೊಳಿಸುವ ಹೊಣೆಗಾರಿಕೆಯನ್ನು ನಿರಂತರ ಜಾಗರೂಕತೆಯಿಂದ ನಿರ್ವಹಿಸುವ ವ್ಯಕ್ತಿ ಹಳಕಟ್ಟಿ, – ವರದಿಗಾರ, ಸಂಪಾದಕ – ಒಬ್ಬ ಶ್ರೇಷ್ಠ ಸಂವಹನಕಾರರಾಗಿದ್ದರು ಎನ್ನುವುದಕ್ಕೆ ಅವರ ***ನವಕರ್ನಾಟಕ*** ಪತ್ರಿಕೆ ಕೈಗನ್ನಡಿಯಾಗಿದೆ.

ಸುಮಾರು ೨೫ ವರ್ಷಗಳ ಕಾಲ 'ನವಕರ್ನಾಟಕ' ವಾರಪತ್ರಿಕೆಯ ಸಂಪಾದಕರಾಗಿ, ಅದನ್ನು ವಾರದಿಂದ ವಾರಕ್ಕೆ ವಿಶಿಷ್ಟವಾಗಿ ರೂಪಿಸುತ್ತ, ವರ್ಷದಿಂದ ವರ್ಷಕ್ಕೆ ಅದೊಂದು ಸಮರ್ಥ ಸಂವಹನ ಮಾಧ್ಯಮವಾಗಿ ಉತ್ಕರ್ಷ ಹೊಂದಿ, ಜನತೆಗೆ ಅವರ ಭಾಷೆಯಲ್ಲಿಯೇ ಹೇಳುವುದಾದರೆ – ***ಕರ್ನಾಟಕಸ್ಥ***ರಿಗೆ – ಅಗತ್ಯವಾದ ಪ್ರಜ್ಞೆ ಮೂಡಿಸುವಲ್ಲಿ ಅರಿವು ನೀಡುವಲ್ಲಿ, ಎಚ್ಚರಗೊಳಿಸುವಲ್ಲಿ ಅಗತ್ಯವಾದ ವಿಷಯಗಳನ್ನು ಸಂಗ್ರಹಿಸಿ ಪ್ರಸರಣಗೊಳಿಸುವಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. ***ನವಕರ್ನಾಟಕ*** ಪತ್ರಿಕೆಯ ಉದ್ದೇಶವನ್ನು ಅದರ ಪ್ರಥಮ ಸಂಪುಟದ ಮೊದಲ ಸಂಚಿಕೆಯ ಸಂಪಾದಕೀಯ ಟಿಪ್ಪಣಿಯಲ್ಲಿ, ಸಂಪಾದಕ ಶ್ರೀ ಹಳಕಟ್ಟಿ ಸ್ಪಷ್ಟಪಡಿಸುವುದು ಹೀಗೆ:

> ‘‘ಇದರಲ್ಲಿ ರಾಜಕೀಯ, ಸಾಮಾಜಿಕ, ಔದ್ಯೋಗಿಕ, ಶೈಕ್ಷಣಿಕ ಮುಂತಾದ ವಿಷಯಗಳಲ್ಲಿ ಕರ್ನಾಟಕಸ್ಥರು ಹ್ಯಾಗೆ ಮುಂದುವರಿಯಬೇಕು ಎಂಬುದರ ಬಗ್ಗೆ ವಿವೇಚನೆಗಳೂ, ಆ ಬಗ್ಗೆ ಪ್ರಯತ್ನಗಳೂ ಈ ಪತ್ರಿಕೆ ದ್ವಾರಾ ಮಾಡಲ್ಪಟ್ಟವು. ಇದು ಸಮಾಜ, ಪಂಗಡ, ಜಾತಿ ಈ ಬಗ್ಗೆ ಯಾವ ತರದ ಭೇದಭಾವಗಳನ್ನು ಎಣಿಸದೆ ಯಾವುದು ಸತ್ಯವಾದದ್ದೋ ನ್ಯಾಯವಾದದ್ದೋ

ಅದನ್ನೇ ನಿಷ್ಪಕ್ಷಪಾತತೆಯಿಂದಲೂ, ನಿರ್ಭಯದಿಂದಲೂ ಜರುಗಿಸಲಿಕ್ಕೆ ಸಿದ್ಧವಾಗಿರುವದು. ಇದರಲ್ಲಿ ಕರ್ನಾಟಕದ ಸಂಸ್ಕೃತಿಯ ಹೆಚ್ಚಳವು ಬಹು ವಿಶದವಾಗಿ ವಾಚಕರ ಮುಂದೆ ಇಡಲ್ಪಡುವುದು. ಸರ್ವ ವಿಷಯದಲ್ಲಿಯೂ ಕರ್ನಾಟಕವು ಮುಂದುವರಿದು **ನವಕರ್ನಾಟಕ**ವನ್ನು ಸಿದ್ಧಗೊಳಿಸುವುದೇ ಈ ಪತ್ರಿಕೆಯ ಮುಖ್ಯ ಧ್ಯೇಯವಾಗಿದೆ...."

೧೯೨೭ ರ ಈ ಸಂಪಾದಕೀಯ ಟಿಪ್ಪಣಿ ೧೯೯೭ ರ ಯಾವುದೇ ಪತ್ರಿಕಾ ಸಂಪಾದಕನಿಗೂ ಒಂದು ಮಾರ್ಗದರ್ಶಿ ಸೂತ್ರವಾಗಿದೆ.

ಶ್ರೀ ಹಳಕಟ್ಟಿ ವಿವರಿಸಿದ ಪತ್ರಿಕೆಯ ಧ್ಯೇಯಗಳನ್ನು ಸೂತ್ರಬದ್ಧವಾಗಿ ಹೇಳುವುದಾದರೆ:

ಅ. ಕರ್ನಾಟಕಸ್ಥರು ರಾಜಕೀಯ, ಸಾಮಾಜಿಕ, ಔದ್ಯೋಗಿಕ, ಶೈಕ್ಷಣಿಕ ವಿಷಯಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕು.

ಆ. ಪತ್ರಿಕೆ ವಿಷಯ ನಿರೂಪಣೆಯಲ್ಲಿ ಯಾವುದೇ ತರದ ಭೇದಭಾವಗಳನ್ನು ಎಣಿಸಕೂಡದು ಮತ್ತು ಸತ್ಯವಾದದ್ದನ್ನು, ನ್ಯಾಯವಾದದ್ದನ್ನು ನಿಷ್ಪಕ್ಷಪಾತವಾಗಿ ಮತ್ತು ನಿರ್ಭೀತವಾಗಿ ಜನರಿಗೆ ಮುಟ್ಟಿಸಲು ಸಿದ್ಧವಾಗಿರಬೇಕು.

ಇ. ಕರ್ನಾಟಕ ಸಂಸ್ಕೃತಿಯ ವಿಕಾಸಕ್ಕೆ ಸಂಬಂಧಿಸಿದ ಸಂಗತಿಗಳನ್ನು ಸವಿಸ್ತಾರವಾಗಿ ವಾಚಕರಿಗೆ ವಿವರಿಸಿ, ತಿಳಿಸಿ ಹೇಳಬೇಕು.

ಈ. ಮುಂದೆ ಅಸ್ತಿತ್ವದಲ್ಲಿ ಬರುವ **ನವಕರ್ನಾಟಕ** ಎಲ್ಲ ದೃಷ್ಟಿಯಿಂದಲೂ ಮುಂದುವರೆದ ರಾಜ್ಯವಾಗಿರಬೇಕು. ಆ ದಿಕ್ಕಿನಲ್ಲಿ ಜನತೆಯನ್ನು ಸಿದ್ಧಗೊಳಿಸಬೇಕು. ಇದೇ ಈ ಪತ್ರಿಕೆಯ ಮುಖ್ಯ ಧ್ಯೇಯ.

ಯಾವುದೇ ಜನಾಂಗದ ಸರ್ವಾಂಗೀಣ ವಿಕಾಸವಾಗಬೇಕಾದರೆ ಜನತೆ, ಎಲ್ಲ ಬಗೆಯ ವಿಷಯ ಸುದ್ದಿ– ಸಂಗತಿಗಳ ತಿಳುವಳಿಕೆ ಪಡೆಯುತ್ತ ಪ್ರಜ್ಞಾವಂತ ನಾಗರಿಕರಾಗಬೇಕು ಮತ್ತು ತಮ್ಮ ಪ್ರದೇಶದ, ನಾಡಿನ ಸಂಸ್ಕೃತಿ ಸಂವರ್ಧನೆಗೆ ಕಾರಣರಾಗಬೇಕು. ಶ್ರೀ ಹಳಕಟ್ಟಿಯವರ ಈ ಧ್ಯೇಯ ಧೋರಣೆ, ವಿಶಾಲದೃಷ್ಟಿ, ಪತ್ರಿಕಾಕರ್ತರಿಗೆ ನಿರಂತರ ಪ್ರಸ್ತುತ ಎಂದು ಪ್ರತ್ಯೇಕವಾಗಿ ವಿವರಿಸುವ ಅಗತ್ಯವಿದೆಯೇ?

'ನವಕರ್ನಾಟಕ' ಪತ್ರಿಕೆಯ ಮೂಲಕ ಜನತೆಗೆ ಸಂವಹನಗೊಂಡ ವಿಷಯ ಪಟ್ಟಿಗಳನ್ನು ಗಮನಿಸಿದರೆ, ಶ್ರೀ ಹಳಕಟ್ಟಿ ಎಂಥ ಅದ್ಭುತ ವ್ಯಕ್ತಿ ಮತ್ತು ಎಂಥ ಪ್ರಜ್ಞಾವಂತ ಪತ್ರಿಕಾಕರ್ತರಾಗಿದ್ದರು ಎನ್ನುವುದು ಸ್ಫುಟಗೊಳ್ಳುತ್ತದೆ. ಒಂದು

ಸ್ಥೂಲವಾದ ವಿಷಯ ಪಟ್ಟಿಯನ್ನು (ಕೇವಲ ಒಂದು ವರ್ಷದ ೫೨ ಸಂಚಿಕೆಗಳನ್ನು ಗಮನಿಸಿ) ಕೊಡಲಾಗಿದೆ. ಒಂದನೆಯ ಸಂಪುಟದ ೧೫ ನೆಯ ಸಂಚಿಕೆಯಿಂದ (೧೯ ಜನವರಿ ೧೯೨೮) ಪತ್ರಿಕೆಯ ವಿನ್ಯಾಸದಲ್ಲಿ ಬದಲಾವಣೆ ಮಾಡಿದಂತೆ ತೋರುತ್ತದೆ. ಈ ಸಂಚಿಕೆಯಿಂದ ಮುಂದಿನ ಎಲ್ಲ ಸಂಚಿಕೆಗಳಲ್ಲಿಯೂ ವಿಷಯಾನುಕ್ರಮಣಿಕೆಯನ್ನು ಮುದ್ರಿಸಲಾಗಿದೆ.

ಈ ಪತ್ರಿಕೆಯ ಸಂವಹನ ವಿನ್ಯಾಸದಲ್ಲಿ ಎದ್ದು ಕಾಣುವ ಅಂಶಗಳು:

೧. ಸಂಪಾದಕೀಯ ಟಿಪ್ಪಣಿ – ಓರ್ವ ಕನ್ನಡಿಗನಿಂದ
೨. ಲೇಖನ ಮಾಲೆಗಳು
೩. ಪತ್ರ ವ್ಯವಹಾರ
೪. ಸುದ್ದಿಗಳು – ವಿಮರ್ಶೆಗಳು
೫. ವಿವಿಧ ವಿಷಯಗಳು
೬. ವರ್ತಮಾನ ಸಾರ
೭. ಜಾಹೀರಾತುಗಳು
೮. ನೋಟೀಸು, ಇತ್ಯಾದಿ.

ಮೊದಲ ೧೪ ಸಂಚಿಕೆಗಳ ವಿಷಯಪಟ್ಟಿಯ ವಿವರಣೆಗಳನ್ನು ಗಮನಿಸಿದರೆ ಇನ್ನುಳಿದ ಸಂಚಿಕೆಗಳ ರೂಪ – ಸ್ವರೂಪಗಳ ವ್ಯಾಪ್ತಿ ಬೆರಗುಗೊಳಿಸುತ್ತದೆ.

ಹಳ್ಳಿ, ತಾಲೂಕು, ಜಿಲ್ಲೆ, ವಿವಿಧ ರಾಜಧಾನಿಗಳು, ಮೊದಲುಗೊಂಡು ಪರರಾಷ್ಟ್ರಗಳವರೆಗೆ ಇಲ್ಲಿಯ ವಿಷಯ ವೈವಿಧ್ಯದ ವಿಸ್ತಾರ ಹರಡಿಕೊಂಡಿದೆ.

ಅ) ಮಳೆ–ಬೆಳೆ, ಕೃಷಿ (ಒಕ್ಕಲುತನ) ಶೇತಕಿ – ಬೋರ್ಡ್, ರೈತರ ಸ್ಥಿತಿಗತಿ, ಒಕ್ಕಲುತನದ ಸಂಗತಿ, ದನಗಳ ಸಂಗೋಪನೆ, ಒಕ್ಕಲುತನದ ಪ್ರದರ್ಶನ, ಹತ್ತಿಬೆಳೆ, ಗ್ರಾಮ – ಸುಧಾರಣೆ ಮುಂತಾದುವು ಗ್ರಾಮೀಣ ಕೃಷಿಪ್ರಧಾನ ಸುದ್ದಿಸಂಗತಿಗಳು;

ಆ) ನೌಕಾ ಕಂಪನಿ, ಮಹಾರಾಷ್ಟ್ರ ವ್ಯಾಪಾರೀ ಮಂಡಳಿ, ಬಾಂಬೇ ಕಾಟನ್ ಮಾರ್ಕೆಟ್ ಬಿಲ್ಲು, ಮುಂಬಯಿ ಗಿರಣಿಗಳು, ಮಂಗಳೂರು ಹೆಂಚಿನ ಕಾರ್ಖಾನೆ, ಮೈಸೂರ ರೇಲ್ವೆ, ಬ್ಯಾಂಕು, ಸಹಕಾರೀ ಜಮೀನು ವತ್ತಿ ಮತ್ತು ಬ್ಯಾಂಕು, ಸಹಕಾರೀ ಸಂಘಗಳ ಬೆಳವಣಿಗೆ ಮುಂತಾದುವು ***ವ್ಯಾಪಾರ ವಾಣಿಜ್ಯ ಕ್ಷೇತ್ರದ ವಿಷಯಗಳು***

ಇ) ಶಿಕ್ಷಣ ಕ್ಷೇತ್ರವನ್ನು ಕುರಿತ ಶ್ರೀ ಹಳಕಟ್ಟಿಯವರ ವಿಶೇಷ ಕಾಳಜಿ ಪತ್ರಿಕೆಯ ಮಹತ್ವದ ಅಂಶವಾಗಿದೆ. ಹಿಂದೂಸ್ತಾನದ ಪ್ರಾಚೀನ ಶಿಕ್ಷಣ, ಗಾಂವಠೀ

ಶಾಲೆ, ಆಲಮಟ್ಟಿ ಹರ್ಡೇಕರ ಮಂಜಪ್ಪನವರ ವಿದ್ಯಾಲಯ, ಶಾರೀರಿಕ ಶಿಕ್ಷಣ, ಪ್ರಾಥಮಿಕ ಮಾಧ್ಯಮಿಕ ಶಾಲೆಗಳು, ಸ್ಕೂಲ್ ಬೋರ್ಡ್, ಒತ್ತಾಯದ ಶಿಕ್ಷಣ, ಉನ್ನತ ಶಿಕ್ಷಣ, ಡೆಹರಾಡೂನಿನ ಲಷ್ಕರೀ ಕಾಲೇಜು, ಒಕ್ಕಲುತನದ ಶಾಲೆ–ಕಾಲೇಜು, ಶಿಲ್ಪಶಾಸ್ತ್ರ ಶಿಕ್ಷಣ, ಬಾಲಪೀಠ ಅಥವಾ ಸ್ಕೌಟ್, ಅರಣ್ಯ ಕಾಲೇಜು, ಸಿರಸಂಗೀಕರ ಕಾಲೇಜು, ಆಂಧ್ರ ವಿಶ್ವವಿದ್ಯಾಲಯ, ರಂಗೂನ್ ವಿಶ್ವವಿದ್ಯಾಲಯ, ಶಿಕ್ಷಕ–ಶಿಕ್ಷಣ, ಸಿವಿಲ್ ಸರ್ವೀಸ್ ಪರೀಕ್ಷೆ, ಲಂಡನ್ನಿನಲ್ಲಿ ಜರುಗಿದ ಮುಸಲ್ಮಾನ ಶಿಕ್ಷಣ ಪರಿಷತ್ತು– ಹೀಗೆ ಅಗಣಿತ ಸ್ತರದ ಶೈಕ್ಷಣಿಕ ಕಾರ್ಯ ಚಟುವಟಿಕೆ ಪ್ರಗತಿಪರ ಧೋರಣೆಗಳು ನಿರೂಪಿತವಾಗಿವೆ.

ಈ) ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದಂತೆ ಕಾಣುವ ವಿಷಯಗಳು: ಮರಾಠಿ, ಕನ್ನಡ, ತೆಲುಗು, ಕನ್ನಡ ಪಠ್ಯಪುಸ್ತಕಗಳು, ಅವುಗಳ ಪರಿಷ್ಕರಣ, ವೀರಶೈವ ಕಾವ್ಯ, ವಚನ ವಾಙ್ಮಯ, ಜೈನ ವಾಙ್ಮಯ ಪ್ರದರ್ಶನ, ದಾಸ ಸಾಹಿತ್ಯ, ಫಿರತೀ ಲೈಬ್ರರಿ, ಆಗಮ ವಾಙ್ಮಯ ಪ್ರಚಾರ, ಸಂಸ್ಕೃತ ಪಾಠಶಾಲೆ, ಉರಿಯಾ ಭಾಷೆಯ ಸುಧಾರಣೆ ಇತ್ಯಾದಿ.

ಉ) ಸಾಮಾಜಿಕ, ಧಾರ್ಮಿಕ ರಂಗದ ವಿಷಯ ಸಂಗ್ರಹ ಮತ್ತು ವಿವೇಚನೆ ಈ ಪತ್ರಿಕೆಯ ಮತ್ತೊಂದು ವೈಶಿಷ್ಟ್ಯ. ಗಂಗಾಮತ ಪರಿಷತ್ತು, ಅಸ್ಪೃಶ್ಯರ ಉದ್ಧಾರ, ವೀರಶೈವ ತರುಣ ಸಂಘ, ಒಳಪಂಗಡಗಳ ಏಕೀಕರಣ, ಬ್ರಾಹ್ಮಣ ಸಭೆ, ವೀರಶೈವ ಮಹಾಸಭೆ, ಸೋಮವಂಶ ಕ್ಷತ್ರಿಯರ ಸಭೆ, ಆಲ್ ಇಂಡಿಯಾ ಮುಸ್ಲಿಂ ಲೀಗ್, ಹಿಂದೂಸ್ತಾನೀ ಸೇವಾದಲದ ಹನುಮಾನ ಶಿಬಿರ, ಹಿಂದೂ ಮುಸಲ್ಮಾನರ ಐಕ್ಯ, ಈ ಕೆಲವು ಗಮನಾರ್ಹ ವಿಷಯಗಳ ಪಟ್ಟಿಗಳು ಶ್ರೀ ಹಳಕಟ್ಟಿಯವರ ಸಮತೋಲ ದೃಷ್ಟಿಗೆ ದ್ಯೋತಕವಾಗಿವೆ.

ಊ) ರಾಜಕೀಯಕ್ಕೆ ಸಂಬಂಧಿಸಿದ ವಿಷಯಪಟ್ಟಿ, ಜನರಲ್ಲಿ ಪ್ರಾಂತ ಮತ್ತು ರಾಷ್ಟ್ರೀಯ ಪ್ರಜ್ಞೆಯನ್ನು ಕುದುರಿಸುವ ಮಹತ್ವದ ಕಾರ್ಯ ನಿರ್ವಹಿಸಿರುವುದು, ಪತ್ರಿಕೆಯ ಪುಟಪುಟದಲ್ಲಿ ಎದ್ದು ಕಾಣುವ ಸಂಗತಿ. ಕರ್ನಾಟಕ ಏಕೀಕರಣ, ಕರ್ನಾಟಕಸ್ಥರ ಕರ್ತವ್ಯ, ಭಾರತ ಸ್ವಾತಂತ್ರ್ಯ, ಕಾಂಗ್ರೆಸ್ ಅಧಿವೇಶನ, ಕರ್ನಾಟಕದ ಏಳ್ಗೆ, ಮುಂಬಯಿ ಇಲಾಖೆಯಿಂದ ಕರ್ನಾಟಕಕ್ಕೆ ಹಾನಿ, ಆಲ್ ಇಂಡಿಯಾ ವಿದ್ಯಾರ್ಥಿ ಪರಿಷತ್ತು, ಸ್ವದೇಶೀ ಸರಕುಗಳು, ಖಾದಿ, ಕರ್ನಾಟಕದ ಸಾಂಪತ್ತಿಕ ಉನ್ನತಿ, ಇನಾಮದಾರರ ಪರಿಷತ್ತು, ಮೊದಲ ಮಹಾಯುದ್ಧದ ಪರಿಣಾಮ, ಕಾಂಗ್ರೆಸ್ ಠರಾವು, ಸೈಮನ್ ಕಮಿಶನ್, ರಾಯಲ್ ಕಮಿಶನ್ – ಹೀಗೆ ಸಮಕಾಲೀನ ಸಾಮಾಜಿಕ ರಾಜಕೀಯ ಸಂಗತಿಗಳನ್ನು ಸಂವಹನಗೊಳಿಸಿದ ಶ್ರೀ ಹಳಕಟ್ಟಿ, ಕನ್ನಡಿಗರು ಸುಸಂಘಟಿತರಾಗಬೇಕು, ರಾಜಕೀಯ ಪ್ರಜ್ಞೆ ಹೊಂದಿ ನಾಡಿನ

ಹಿತಾಹಿತಗಳನ್ನು ವಸ್ತುನಿಷ್ಠ ದೃಷ್ಟಿಯಿಂದ ವಿವೇಚಿಸುವ ಸಾಮರ್ಥ್ಯ ಪಡೆಯಬೇಕು, ಎಂದು ಸಂಕಲ್ಪಿಸಿದರು.

ಎ) ಕಾಯಿದೆ ಪದವೀಧರರಾದ ಅವರು ಕೌಟುಂಬಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ವಿಷಯಗಳನ್ನು ತಾರ್ಕಿಕವಾಗಿ ಪ್ರತಿಪಾದಿಸುತ್ತ ಬಂದರು. ಬಾಲವಿವಾಹ ಪ್ರತಿಬಂಧಕ, ಜನಸಂಖ್ಯೆ, ಬಾಂಬೇ ಕಾಟನ್ ಮಾರ್ಕೆಟ್ ಬಿಲ್ಲು, ಸ್ಕೂಲ್ ಬೋರ್ಡ್ , ಲೋಕಲ್ ಬೋರ್ಡುಗಳ ನಡವಳಿ–ನಡವಳಿಕೆ, ಸಹಕಾರೀ ಬ್ಯಾಂಕು, ಸಹಕಾರಿ ಸಂಘಗಳು, ನಗರ ರಚನೆ, ನಗರ ಸುಧಾರಣೆ, ಮಂತ್ರಿಗಳ ವೆಚ್ಚ, ವಿವಿಧ ಆಯೋಗಗಳ ನೇಮಕಾತಿ, ಕ್ರಮಬದ್ಧತೆ, ಕಾನೂನಿನ ಕ್ರಮಗಳು ಇತ್ಯಾದಿಗಳನ್ನು ಕನ್ನಡ ಜನತೆಗೆ ಕಾಲಕಾಲಕ್ಕೆ ಪರಿಚಯಿಸಿ ಕಾಯಿದೆ– ಕಾನೂನುಗಳ ಅರಿವು ಮತ್ತು ಪಾಲನೆಗಳ ಮಹತಿಯನ್ನು ಎತ್ತಿ ತೋರಿಸಿದ್ದಾರೆ.

ಏ) ಇಷ್ಟೆಲ್ಲದರ ಜೊತೆಗೆ ದೇಶ ವಿದೇಶಗಳ ವೈಜ್ಞಾನಿಕ, ಆರ್ಥಿಕ, ವಾಣಿಜ್ಯ ಸಾಧನೆಯ ವಿಸ್ಮಯಕಾರಿ ಸುದ್ದಿಗಳ ಸಾರ ಕೂಡ ನವಕರ್ನಾಟಕ ಪತ್ರಿಕೆಯ ಸಂವಹನ ವ್ಯಾಪ್ತಿಯನ್ನು ವಿಸ್ತರಿಸಿದೆ.

ಐ) ಈ ಪತ್ರಿಕೆಯ ಬಹು ಮಹತ್ವದ ಮತ್ತು ಪ್ರಭಾವಶಾಲಿ ಭಾಗವೆಂದರೆ 'ಸಂಪಾದಕೀಯ ಟಿಪ್ಪಣಿಗಳು'. ಪ್ರತಿಯೊಂದು ಟಿಪ್ಪಣಿಯೂ ಶ್ರೀ ಹಳಕಟ್ಟಿಯವರ ಸಾಮಾಜಿಕ ಕಳಕಳಿ, ರಾಜಕೀಯ ವಿವೇಚನೆ, ರಾಷ್ಟ್ರೀಯ ನಿಷ್ಠೆ, ಪ್ರಾಂತೀಯ ಹಿತರಕ್ಷಣೆ, ಜನಕಲ್ಯಾಣ ದೃಷ್ಟಿಗಳಿಗೆ ಸಾಕ್ಷಿಯಾಗಿದ್ದು, ಒಂದೊಂದೂ ವಿದ್ವತ್ಪೂರ್ಣ ಸಂಶೋಧನಾತ್ಮಕ ಅಂಶಗಳಿಂದ ತೂಕಬದ್ಧವಾಗಿ ಗೋಚರಿಸುತ್ತದೆ.

ಒ) ಈ ಪತ್ರಿಕೆಯ ಜಾಹೀರಾತು, ಅದರಲ್ಲಿ ಬರುತ್ತಿದ್ದ ನೋಟೀಸು, ಪ್ರಕಟಣೆ, ಪುರವಣಿಗಳು ಪ್ರತಿಯೊಂದು, ಭಾಷೆ, ವಿಷಯಗಳ ದೃಷ್ಟಿಯಿಂದ ವಿಶಿಷ್ಟವಾಗಿದ್ದು, ಅಂದಿನ ವ್ಯಾಪಾರ ವಾಣಿಜ್ಯ ಕ್ಷೇತ್ರದಲ್ಲಿ ಚಲಾವಣೆಯಲ್ಲಿದ್ದ ಕಂಪನಿ, ಕಾರ್ಖಾನೆ, ವ್ಯಕ್ತಿಗಳ ಮಾಹಿತಿ ಒದಗಿಸುತ್ತದೆ.

ಓ) ಸಾಹಿತ್ಯ ಕ್ಷೇತ್ರದ ವಿವಿಧ ಕಾರ್ಯ ಚಟುವಟಿಕೆ, 'ಜಯಕರ್ನಾಟ' 'ಸ್ವಧರ್ಮ', 'ಆರೋಗ್ಯ ಚಂದ್ರಿಕೆ', 'ಸರಸ್ವತಿ' ಮುಂತಾದ ಪತ್ರಿಕೆಗ ವಿಮರ್ಶೆ, ಸಾಹಿತ್ಯ ವಿಮರ್ಶೆ, ಶಿಲ್ಪಾಶಾಸನಗಳ ಸಂಗ್ರಹ, ಆಧ್ಯಾತ್ಮ ವಿವೇಚನ, ಅನುಭಾವ ಸಾಹಿತ್ಯ, ದಾನ,ದತ್ತಿಗಳು ಇತ್ಯಾದಿಗಳ ವಿವೇಚನೆ ಮೂಡಿದೆ.

'ನವ ಕರ್ನಾಟಕ' ಪತ್ರಿಕೆಯ ಕೆಲವು 'ಸಂಪಾದಕೀಯ ಟಿಪ್ಪಣಿ', 'ವಿವಿಧ ವಿಷಯ' 'ವರ್ತಮಾನಸಾರ', 'ನೋಟೀಸು', 'ಪುರವಣಿ' ಇತ್ಯಾದಿಗಳ ಮಾದರಿಗಳನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ. ಪ್ರಥಮ ಸಂಪುಟದ ಮೊದಲ ಸಂಚಿಕೆಯ ಸಂಪಾದಕೀಯ ಟಿಪ್ಪಣಿಯಲ್ಲಿ ಕರ್ನಾಟಕ ಏಕೀಕರಣದ ಅಗತ್ಯ, ಅದಕ್ಕಿರುವ ಅಡ್ಡಿ ಆತಂಕಗಳನ್ನು ವಿವರಿಸುತ್ತ ಕರ್ನಾಟಕಸ್ಥರೆಂದರೆ ಯಾರು? ಕರ್ನಾಟಕದಲ್ಲಿ ಸೇರ್ಪಡೆ ಯಾಗಬಹುದಾದ ಪ್ರದೇಶಗಳಾವುವು? ಯಾವ ದೃಷ್ಟಿಯಿಂದ ಕರ್ನಾಟಕ ಪ್ರಾಂತವನ್ನು ಒಂದು ಆಡಳಿತೆಯ ಚೌಕಟ್ಟಿನಲ್ಲಿ ಸೇರಿಸಬೇಕು? ಮುಂತಾದ ಪ್ರಶ್ನೆಗಳನ್ನು ಎತ್ತಿಕೊಂಡ ಶ್ರೀ ಹಳಕಟ್ಟಿಯವರ, ಪ್ರತಿಯೊಂದು ವಿಷಯವನ್ನು ನಿಸ್ಸಂದಿಗ್ಧವಾಗಿ ಹೇಳುವ ವಿಧಾನ ಮತ್ತು ಆಲೋಚನಾ ಸರಣಿ ಇಂದಿಗೂ ಪ್ರಸ್ತುತ; ಮುಂದೆಯೂ ಪ್ರಸ್ತುತ. ಅವರ ಟಿಪ್ಪಣಿ ಹೀಗಿದೆ:

> "ಕರ್ನಾಟಕಸ್ಥರೆಂದರೆ ಕನ್ನಡ ನುಡಿಯುವವರೆಂದು ತಿಳಿಯುವುದು ತಪ್ಪಾದದ್ದು. ಈ ಶಬ್ದವು ಸಮಾಜವಾಚಕವಲ್ಲ ಅಥವಾ ಧರ್ಮವಾಚಕವಲ್ಲ. ಅದರಲ್ಲಿ ವ್ಯಾಪಕಾರ್ಥವಿದೆ. ಅದು ದೇಶವಾಚಕವು. ಈ ದೇಶದಲ್ಲಿರುವಂಥವರು ಅವರು ಯಾವ ಭಾಷೆ ಮಾತಾಡುತ್ತಿದ್ದರೂ ಅವರು ಕರ್ನಾಟಕಸ್ಥರು. ಇದಲ್ಲದೆ ಏಕೀಕರಣ ಪ್ರಶ್ನೆಯು ರಾಜಕೀಯ ಪ್ರಶ್ನೆಯಾಗಿದೆ. ಹಿಂದುಸ್ಥಾನ ದೇಶವು ಅತ್ಯಂತ ವಿಸ್ತಾರವಾದದ್ದಿರುತ್ತದೆ. ಇಂಥ ದೇಶವನ್ನು ಒಂದೆಡೆಗೆ ಕೇಂದ್ರೀಕರಿಸಿ ಆಳುವುದು ಶಕ್ಯವೂ ಅಲ್ಲ, ಪ್ರಜೆಗಳಿಗೆ ಹಿತವೂ ಅಲ್ಲ. ಆದ್ದರಿಂದ ಇದರಲ್ಲಿ ತಕ್ಕ ಭೂಭಾಗಗಳನ್ನು ಮಾಡಿ, ಯಾವ ಯಾವ ಸ್ಥಳಗಳಲ್ಲಿ ರಾಜ್ಯದ ಕ್ರಮಗಳು ಹ್ಯಾಗೆ ಹ್ಯಾಗೆ ಇದ್ದರೆ ಪ್ರಜೆಗಳಿಗೆ ಹಿತವಾದೀತೆಂಬುದನ್ನು ವಿಚಾರಿಸಿ, ಹಾಗೆ ಪ್ರಾಂತಗಳನ್ನು ರಚಿಸುವುದು ಇರುತ್ತದೆ...... ವ್ಯಾಪಾರದ ಅನುಕೂಲಗಳು, ಪರಸ್ಪರ ಸಾನಿಧ್ಯ, ದೇಶ ಆಚಾರಗಳ ಅಭಿನ್ನತ್ವ ಇವುಗಳನ್ನೆಲ್ಲ ಕಂಡುಹಿಡಿದು.... ವಿಷಮತೆಯು ಕಡಮೆಯಾಗಿ ಜನರು ಒಕ್ಕಟ್ಟಾಗಿ ನಡೆಯುವ ಸಂಭವ ಹೆಚ್ಚೋ, ಆ ಭಾಗಗಳನ್ನು ಒಂದುಗೂಡಿಸಿ ಪ್ರಾಂತ ರಚನೆ ಮಾಡುವುದೇ ಈ ಪ್ರಾಂತ ವಿಭಾಗದ ತತ್ತ್ವವಾಗಿರುವದು..... ಇದರಿಂದಲೆ ಹಿಂದುಸ್ಥಾನ ರಾಜ್ಯಕ್ಕೆ ಒಂದು ಕಟ್ಟು ಮತ್ತು ಬಲವು ಉಳಿಯುವುದೆಂದು ತಿಳಿದು ಈ ಪ್ರಯತ್ನಕ್ಕೆ ತೊಡಗುವುದು ಇರುತ್ತದೆ."

> "ಈ ದೃಷ್ಟಿಯಿಂದ ಕರ್ನಾಟಕವೆಂದರೆ ವಿಶೇಷವಾಗಿ ಕನ್ನಡ ಮಾತನಾಡುವ ಕೆಲ ಜಿಲ್ಲೆಗಳು ಮಾತ್ರವಲ್ಲ.... ಅದರ ವರ್ಚಸ್ಸಿಗೆ ಒಳಗಾಗಿ ಅದರ ಸುತ್ತ-ಮುತ್ತಲೂ ವ್ಯಾಪಿಸಿರುವ ಮಹಾರಾಷ್ಟ್ರ, ತೆಲುಗು, ತಮಿಳು, ತುಳು ಭಾಗಗಳೂ ಸಹ ಬರುತ್ತವೆ."

ಇಲ್ಲಿ ಕಾಣುವ ಶ್ರೀ ಹಳಕಟ್ಟಿಯವರ ಅಭಿಪ್ರಾಯದ ನಿಖರತೆ, ವಿಷಯ ಪ್ರತಿಪಾದನೆಯ ಕ್ರಮಗಳು ಅವರ ಜನಾಂಗ ಪ್ರಜ್ಞೆಯ ಕುರುಹಾಗಿವೆ.

ಕರ್ನಾಟಕದ ಪ್ರಭಾವ, ಸೌಲಭ್ಯಗಳಿಗೆ ಮಾರುಹೋಗಿ ಕರ್ನಾಟಕಕ್ಕೆ ವಲಸೆ ಬಂದ ವಿಭಿನ್ನ ಭಾಷಿಕ ಗುಂಪುಗಳನ್ನು ಕರ್ನಾಟಕದಿಂದ ಬೇರ್ಪಡಿಸಲು ಹೇಗೆ ಸಾಧ್ಯ? ಇದನ್ನು ಚರ್ಚಿಸಿದ ಸಂಪಾದಕರು: "ಈ ಭಾಗಗಳನ್ನು ಕರ್ನಾಟಕದಿಂದ ಹೊರದೂಡಿದರೆ ಅವುಗಳು ಊರ್ಜಿತ ಸ್ಥಿತಿಗೆ ಎಂದಿಗೂ ಬರಲಾರವು" ಎಂದಿದ್ದಾರೆ. ವಿಷಯಗಳನ್ನು ವಸ್ತುನಿಷ್ಠ ಧೋರಣೆಯಿಂದ ವಿವೇಚಿಸಿ ವಿವರಿಸುವುದು, ಸಮರ್ಥ ಸಂವಹನಕಾರನ ಗುಣಲಕ್ಷಣ. ಇದಕ್ಕೆ ಇನ್ನೂ ಅನೇಕ ಬಗೆಯ ಉದಾಹರಣೆಗಳನ್ನು – 'ಸೈಮನ್ ಕಮೀಷನ್', 'ರಾಯಲ್ ಕಮೀಷನ್' ಇತ್ಯಾದಿ ಕುರಿತ ಸಂಪಾದಕರ ವಿವೇಚನೆ– ಕೊಡುತ್ತ ಹೋಗಬಹುದು. ಯಾವ ವಿಷಯವೇ ಇರಲಿ ಅದರಿಂದ ಕರ್ನಾಟಕಸ್ಥರಿಗೆ ಸಮಷ್ಟಿ ಕಲ್ಯಾಣವಾಗಿರಬೇಕು. ಕನ್ನಡಿಗರು ಸರ್ವಾಂಗೀಣ ಪ್ರಗತಿ ಹೊಂದಬೇಕು ಎನ್ನುವ ಕಳಕಳಿಯೇ ಶ್ರೀ ಹಳಕಟ್ಟಿಯವರ ಸಂಪಾದಕೀಯ ಟಿಪ್ಪಣಿಗಳ ತಿರುಳಾಗಿದೆ.

ವಿವಿಧ ವಿಷಯಗಳು: ಐವತ್ತು ವರ್ಷಗಳ ಹಿಂದೆ ಆಕಾಶಯಾನ ಕುರಿತ ಸುದ್ದಿಯೊಂದು ಹೀಗಿದೆ:

> "ಹ್ಯಾಕ್ಯಾಸ್ಟನ್ ಥಾರ್ನ್ ಎಂಬುವರು ಆಕಾಶಯಾನದಿಂದ ೪೩,೦೦೦ ಫೂಟು ಮೇಲಕ್ಕೆ ತಮ್ಮ ವಿಮಾನವನ್ನು ಒಯ್ದಿದ್ದರು. ಇದಕ್ಕೂ ಹೆಚ್ಚಿಗೆ ದೂರ ಯಾರೂ ಹೋಗಿರಲಿಲ್ಲ. ಅಲ್ಲಿ ಅವರು ವಾಸಿಸುತ್ತ ಆಕ್ಸಿಜೆನ್ನದ ಕೊಳವೆಯು ಹರಿದದ್ದರಿಂದ ಉಸಿರು ಸಿಕ್ಕು ಮರಣ ಹೊಂದಿದರು....."

ಆಕಾಶಯಾನದ ಚರಿತ್ರೆಯ ವಿರಳ ಘಟನೆಯೊಂದರ ಈ ದಾಖಲೆ, ಸಂಪಾದಕರು ವಿಜ್ಞಾನ ಸಂಶೋಧನೆಯಲ್ಲಿ ತಾಳಿದ ಆಸಕ್ತಿಗೆ ಸಾಕ್ಷಿಯಾಗಿದೆ.

'ಬ್ರೇನ್ ಡ್ರೇನ್' ಬಗ್ಗೆ ಇತ್ತೀಚೆಗೆ ತುಂಬ ಚರ್ಚೆ ನಡೆದಿದೆ. ನಮ್ಮ ನಾಡಿನ –ಬುದ್ಧಿವಂತ–ವಿದ್ಯಾವಂತರು, ವಿಶೇಷ ಪರಿಣತರಿಗೆ ಈ ನಾಡಿನಲ್ಲಿ ಅವಕಾಶಗಳು ದೊರೆಯದಿದ್ದರೆ ಅವರು ಹೊರನಾಡಿಗೆ, ರಾಷ್ಟ್ರಗಳಿಗೆ ವಲಸೆ ಹೋಗುತ್ತಾರೆ. ಅದು ನಮ್ಮ ನಾಡಿಗೆ ದೊಡ್ಡ ಹಾನಿ ಎನ್ನುವುದನ್ನು 'ಬೆಳಗಾವ ಆರ್ಟ್ಸ್ ಕಾಲೇಜ ಮತ್ತು ರ‍್ಯಾಂಗ್ಲರ್ ಪಾವಟೆಯವರು' ಟಿಪ್ಪಣಿಯಲ್ಲಿ ಶ್ರೀ ಹಳಕಟ್ಟಿ ವಿವೇಚಿಸಿದ್ದಾರೆ. ಬೆಳಗಾಂವಿಯ ಕಾಲೇಜಿಗೆ ಮಿ. ಪಾವಟೆಯವರನ್ನು ಪ್ರಿನ್ಸಿಪಾಲರೆಂದು ನಿಯೋಜಿಸಿದ್ದನ್ನು ಸಮರ್ಥಿಸುತ್ತ —

> "ಪರದೇಶಕ್ಕೆ ಪ್ರವಾಸ ಮಾಡಿ ಒಂದು ವಿಷಯದಲ್ಲಿ ನಿಷ್ಣಾತರಾದ ಕರ್ನಾಟಕಸ್ಥರನ್ನು ಹೊರಗೆ ಬಿಡದೆ, ಅವರು ಕನ್ನಡ ದೇಶದಲ್ಲಿಯೇ ಉಳಿಯುವ ವ್ಯವಸ್ಥೆ ಮಾಡುವುದು ಕನ್ನಡಿಗರ ಆದ್ಯ ಕರ್ತವ್ಯವಾಗಿದೆ...... ಹೀಗೆ ಮಾಡದಿದ್ದರೆ ಅವರು ಪರಪ್ರಾಂತಗಳಿಗೆ ಹೋಗುವರು. ಇದರಿಂದ ಕರ್ನಾಟಕಕ್ಕೆ ದೊಡ್ಡ ಹಾನಿಯು. ಜಸ್ಟಿಸ್ ಚಂದಾವರಕರ್, ಡಾ. ರಾವ್, ಜಸ್ಟಿಸ್ ಮಡಗಾಂವಕರ್, ಪ್ರೊ. ಕಟ್ಟಿ, ಡಾ. ನಾಡಗೀರ ಅವರೆಲ್ಲರೂ ಕನ್ನಡಿಗರಲ್ಲವೇ ?"
>
> (೨೨ ಡಿಸೆಂಬರ್ ೧೯೨೭)

೫.೧.೧೯೨೮ ರ ಸಂಚಿಕೆಯ ಸುದ್ದಿಯೊಂದು ರೇಲ್ವೆ ಪಯಣದ ತಾಂತ್ರಿಕ ಪ್ರಗತಿಯನ್ನು ಸೂಚಿಸುತ್ತದೆ. ಮುಂಬಯಿಯ ಮಹಾಲಕ್ಷ್ಮಿ ರೇಲ್ವೆ ನಿಲ್ದಾಣದಿಂದ ಮೊಟ್ಟ ಮೊದಲ ಸಲ 'ವಿದ್ಯುಲ್ಲತೆಯ ಗಾಡಿ' ಆರಂಭವಾದ ಸುದ್ದಿ. ಅದರಂತೆ ನೌಕಾ ಕಂಪನಿ, ಇಂಗ್ಲಂಡ್ ವ್ಯಾಪಾರ ಮಂಡಳಿ, ನಮ್ಮಲ್ಲಿ ವ್ಯಾಪಾರೀ ಸಂಘಗಳ ಸ್ಥಾಪನೆ ಕುರಿತ ಅನೇಕ ಬಗೆಯ ಕುತೂಹಲಕಾರಿ ಸಂಗತಿಗಳು ಪುಟಪುಟದಲ್ಲಿ ತುಂಬಿವೆ. ನವಲಗುಂದ ಸಿರಸಂಗಿ ಟ್ರಸ್ಟ್ ಫಂಡಿನಿಂದ ಶಿಕ್ಷಣಕ್ಕಾಗಿ ಸ್ಕಾಲರ್‌ಶಿಪ್ ರೂಪದಲ್ಲಿ ಪಡೆದ ಹಣವನ್ನು ಆಯಾ ವ್ಯಕ್ತಿಗಳು ಟ್ರಸ್ಟ್ ಫಂಡಿಗೆ ಮರಳಿ ಪಾವತಿ ಮಾಡುವ ಕುರಿತು ಕಲೆಕ್ಟರ್ ಎಮ್. ವೆಬ್ ಕೊಟ್ಟ ನೋಟೀಸು, ಸಿರಸಂಗಿ ಲಿಂಗರಾಜರ ತ್ಯಾಗ ಮತ್ತು ಅವರ ಪುಣ್ಯತಿಥಿ, ಕರ್ನಾಟಕಕ್ಕೆ ಪ್ರತ್ಯೇಕವಾಗಿ ಬೇಕಾದ ವಿಶ್ವವಿದ್ಯಾಲಯ, ವಿಶ್ವವಿದ್ಯಾಲಯದಲ್ಲಿ ಮಾತೃಭಾಷಾ ಶಿಕ್ಷಣ ಮಾಧ್ಯಮ, ಜೇಲುಗಳ ಸುಧಾರಣೆ, ಗ್ರಾಮದ ಆರ್ಥಿಕ ವ್ಯವಸ್ಥೆಯ ಚಿಂತನೆ, ಪಾನಪ್ರತಿಬಂಧ ಹೀಗೆ ಹಲವು ಹತ್ತಾರು ವಿಷಯಗಳನ್ನು ಓದುತ್ತ ಹೋದಂತೆ, ಐವತ್ತು ವರ್ಷಗಳ ಹಿಂದಿನ ಪ್ರಪಂಚದ ಘಟನೆಗಳು, ಭಾರತದ ರಾಜಕೀಯ ಸ್ಥಿತ್ಯಂತರ, ಕರ್ನಾಟಕದ ಸಾಂಪತ್ತಿಕ ಆಕರಗಳು ಒಂದೊಂದಾಗಿ ಕಣ್ಣಿಗೆ ಕಟ್ಟುತ್ತವೆ, ಮನ ಮುಟ್ಟುತ್ತವೆ.

ಶ್ರೀ ಹಳಕಟ್ಟಿ ತಮ್ಮ ವಿಚಾರಗಳ ಅಭಿವ್ಯಕ್ತಿಗಾಗಿ ಬಳಸುತ್ತಿದ್ದ ನಿಯಂತ್ರಿತ ಭಾಷೆ, ಸಂಯಮದ ಶೈಲಿ, 'ನವ ಕರ್ನಾಟಕ' ಪತ್ರಿಕೆಯ ಎತ್ತಿ ಹೇಳಬೇಕಾದ ವೈಶಿಷ್ಟ್ಯ. ವರ್ತಮಾನದ ಕೆಲವು ಪತ್ರಿಕೆಗಳನ್ನು ಬಿಡೋಣ. ಆದರೆ ಕೆಲವು ಗೌರವಾನ್ವಿತ ಪತ್ರಿಕೆಗಳ ಬರವಣಿಗೆಯಲ್ಲಿ ಕೂಡ ಕೆಲವೊಮ್ಮೆ ಅನಪೇಕ್ಷಿತ ವ್ಯಂಗ್ಯ, ವಿಡಂಬನೆ, ಮನ ನೋಯಿಸುವ ಕೊಂಕುಗಳು ನುಸುಳಿ ಬರುವುದನ್ನು ಕಾಣುತ್ತೇವೆ. ಆದರೆ ಶ್ರೀ ಹಳಕಟ್ಟಿಯವರ ಪತ್ರಿಕೆಯ ಬರವಣಿಗೆಯಲ್ಲಿ ಇಂಥ ದೋಷಗಳು ತಪ್ಪಿ ಕೂಡ ಸಿಗುವುದಿಲ್ಲ. ಇದು ಅವರ ಆರೋಗ್ಯಕರ ಮನಸ್ಸು, ಸಾಮಾಜಿಕರ ಹಿತ ಚಿಂತನೆಯ ತೀವ್ರ ಕಳಕಳಿಗೆ ದ್ಯೋತಕ. ಈ ವಿಷಯ ಕೂಡ ಪ್ರತ್ಯೇಕ ವಿವೇಚನೆಗೆ ವಸ್ತುವಾಗಿದೆ.

ಒಟ್ಟಾರೆ ವೃತ್ತಪತ್ರಿಕಾ ಪ್ರಪಂಚಕ್ಕೆ ಶ್ರೀ ಹಳಕಟ್ಟಿಯವರು ಮಾಡಿದ ಸೇವೆ ದಾಖಲೆಗೊಳ್ಳುವಂಥದು. ಇಂಥ ಅವರ ಐತಿಹಾಸಿಕ ಮಹತ್ವದ ಕಾರ್ಯವನ್ನು ಕುರಿತು ಇದುವರೆಗೂ ಯಾವುದೇ ಸರಕಾರ, ಸಂಸ್ಥೆ, ಅಥವಾ ವ್ಯಕ್ತಿ ಪ್ರಕಟಿಸಿದ ಪತ್ರಿಕೋದ್ಯಮ ವಿಷಯ ಕುರಿತ ಕೃತಿಗಳಲ್ಲಿ, ಒಂದು ವಾಕ್ಯವನ್ನು ಕೂಡಾ ಬರೆಯದಿರುವುದು ವಾಸ್ತವತೆಗೆ, ಸತ್ಯಕ್ಕೆ ಬಗೆದ ಅಪಚಾರ. ಸಮೂಹ ಸಂವಹನ ಮಾಧ್ಯಮ ಕುರಿತು ರಾಜ್ಯದ ವಿವಿಧ ವೇದಿಕೆಗಳ ಮೇಲೆ ಶ್ರೀ ಹಳಕಟ್ಟಿಯವರ ***ನವಕರ್ನಾಟಕ*** ಪತ್ರಿಕೆಯ ಪ್ರಸ್ತಾಪವೇ ಬಾರದಿರುವುದು ವಿಷಾದನೀಯ. ಇನ್ನು ಮೇಲಾದರೂ ನಮ್ಮ ಆಲೋಚಕರು ಸಂವಹನಕಾರರು ಇತ್ತ ತಮ್ಮ ಗಮನ ಹರಿಸುತ್ತಾರೆ ಎಂದು ನಂಬಲಾಗಿದೆ.

ಆಕಾಶವನ್ನು ಅಂಗೈಯಲ್ಲಿ ಅಳೆದ ಹಾಗೆ ಪ್ರಸ್ತುತ ಸಂಪ್ರಬಂಧದ ಸ್ಥಿತಿ. ನವ ಕರ್ನಾಟಕದ ಎಲ್ಲ ಸಂಚಿಕೆಗಳ ವಿಷಯ ಪಟ್ಟಿ ಮಾಡಬೇಕು. ಅವುಗಳನ್ನು ವಿಷಯಕ್ಕನುಗುಣವಾಗಿ ವಿಂಗಡಿಸಿ ವರ್ಗೀಕರಿಸಬೇಕು. ಆಗ ಪತ್ರಿಕೋದ್ಯಮದ ಬೃಹತ್ತಾದ ***ವೃತ್ತಪತ್ರಿಕಾ ವಿಷಯಕೋಶ*** ಅನಾವರಣಗೊಳ್ಳುತ್ತದೆ. ಸಂಪಾದಕರ ಟಿಪ್ಪಣಿ, ಜಾಹೀರಾತು ಇತ್ಯಾದಿ ಬರವಣಿಗೆಗಳ ಪ್ರತ್ಯೇಕ ವಿವೇಚನೆ, ವಿಶ್ಲೇಷಣೆ ನಡೆಯಬೇಕು.

ಈ ದೃಷ್ಟಿಯಿಂದ ಶ್ರೀ ಫ.ಗು. ಹಳಕಟ್ಟಿ ಅವರನ್ನು ***ವೃತ್ತಪತ್ರಿಕಾರಂಗದ ಭೀಷ್ಮ*** ಎಂದು ಕರೆಯುವುದು ಸೂಕ್ತ. ಅವರು ***ನವ ಕರ್ನಾಟಕ***ದ ಮೂಲಕ ಮಾಡಿರುವ 'ಕರ್ನಾಟಕಸ್ಥ'ರ, ಕರ್ನಾಟಕದ ಅಖಂಡ ಸೇವೆಯನ್ನು ಒಂದು ತಲಸ್ಪರ್ಶಿಯಾದ ಅಧ್ಯಯನದ ಮೂಲಕ ದೃಢಪಡಿಸುವ ಕಾರ್ಯ ನಡೆಯಬೇಕು. ಈ ನಿಟ್ಟಿನ ಅವರ ಚಿರಸ್ಮರಣೀಯ ಕಾರ್ಯವನ್ನು ಒಂದು ಪಿಎಚ್.ಡಿ ಪದವಿಯ ಸಂಶೋಧನೆಯ ಮುಖಾಂತರ ಸಾಬೀತುಗೊಳಿಸುವ ವಿದ್ಯಾರ್ಥಿಗಾಗಿ, ವಿಷಯ ಸಾಮಗ್ರಿ ಕಾಯುತ್ತಿದೆ.

ಸಂವಹನ ಮಾಧ್ಯಮಗಳನ್ನು ಕುರಿತ ವಿಶೇಷ ವೈಜ್ಞಾನಿಕ ಅಧ್ಯಯನ ನಡೆಯದಿದ್ದ ನಮ್ಮ ನಾಡಿನಲ್ಲಿ, ಪತ್ರಿಕೆ ಲಾಭದಾಯಕ ಉದ್ದಿಮೆಯಾಗಿ ರೂಪುಗೊಳ್ಳದಿದ್ದ ಅಂದು ಟೆಲಿಪ್ರಿಂಟರ್ (ದೂರಮುದ್ರಣ), ದೂರವಾಣಿ ಮುಂತಾದ ತಾಂತ್ರಿಕ ಸೌಲಭ್ಯವಿಲ್ಲದ ಕಾಲದಲ್ಲಿ, ಶ್ರೀ ಹಳಕಟ್ಟಿ ವೃತ್ತಪತ್ರಿಕೆಯ ಸಂವಹನ ಮಾಧ್ಯಮವನ್ನು ಕೈಗೆತ್ತಿಕೊಂಡು ಅಹರ್ನಿಶಿ ಶ್ರಮಿಸಿ, ಜನಾಂಗ ಕಲ್ಯಾಣವನ್ನೇ ತಮ್ಮ ಪ್ರಾಣವೆಂದು ಭಾವಿಸಿ, ***ನವ ಕರ್ನಾಟಕ***ದ ಮೂಲಕ ತಮ್ಮ ಪ್ರತಿಭೆ, ಬುದ್ಧಿಶಕ್ತಿಗಳನ್ನು ಜನತೆಗೆ ಧಾರೆಯೆರೆದರು. ಶ್ರೀ ಹಳಕಟ್ಟಿ ಅವರನ್ನು ಉತ್ತರ ಕರ್ನಾಟಕದ ಹಿನ್ನೆಲೆಯಲ್ಲಿ, ***ಪತ್ರಿಕಾ ಪ್ರಪಂಚದ ಮಾರ್ಗದರ್ಶಿ*** ಎಂದೂ ಕರೆಯಬಹುದು.

'ನವ ಕರ್ನಾಟಕ' ಪತ್ರಿಕೆಯ ೧೪ ನೆಯ ವರ್ಷದ ಆರಂಭದಲ್ಲಿರುವ ಅವರ ಸಂಪಾದಕೀಯ ಟಿಪ್ಪಣಿಯ ಈ ಕೆಳಗಿನ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ:

> "ನವ ಕರ್ನಾಟಕ ಪತ್ರಿಕೆಯು ಯಾವ ಪಕ್ಷಕ್ಕೂ ಸೇರದೆ ಮತ್ತು ಯಾವ ಪಕ್ಷದ ಅಭಿಮಾನವನ್ನೂ ವಹಿಸದೆ ಸ್ವತಂತ್ರವಾಗಿದ್ದುಕೊಂಡು ತನ್ನ ಉಚ್ಚ ವಿಚಾರಗಳನ್ನು ಪ್ರಕಟಿಸುತ್ತ ಬಂದಿದೆ. ಈ ಸ್ಥಿತಿಯಿಂದ ಪ್ರಚಲಿತ ವಿಷಯಗಳಲ್ಲಿ ಸರಿಯಾದ ಹಾಗೂ ಸತ್ಯವಾದ ಅಭಿಪ್ರಾಯಗಳನ್ನು ಕೊಡಲಿಕ್ಕೆ ಶಕ್ಯವಾಗುತ್ತಿದೆ. ಇದರಿಂದ ಜನತೆಯು ಸರಿಯಾದ ಪರಿಸ್ಥಿತಿಯ ವಿಚಾರಗಳನ್ನು ಅರಿತುಕೊಳ್ಳಲಿಕ್ಕೆ ಒಳ್ಳೇ ಸಹಾಯವಾಗುತ್ತದೆಂದು ನಾವು ಭಾವಿಸಿರುತ್ತೇವೆ."
>
> (ಪು.೧೪, ಸಂ.೧, ೧೦.೧೦.೧೯೪೦)

# ೫. ವಿವಿಧ ಸೇವಾ ನೆಲೆಗಳು

ಡಾ. ಹಳಕಟ್ಟಿ, ತಮ್ಮ ಸಮಕಾಲೀನ ಸಮಾಜದ ವಿವಿಧ ಮಗ್ಗಲುಗಳನ್ನು ತೆರೆದ ಮನಸ್ಸಿನಿಂದ ನೋಡುವ ಧೀಮಂತ ವ್ಯಕ್ತಿಯಾಗಿದ್ದರು. ಈ ಕಾರಣದಿಂದಾಗಿ ಸಮಾಜಕ್ಕೆ ತಗುಲಿದ ರೋಗಗಳನ್ನು, ಸಾಮಾಜಿಕ ವಿಕಾಸಕ್ಕೆ ಅಡ್ಡಿಯುಂಟುಮಾಡಿದ ವಿವಿಧ ಸಮಸ್ಯೆಗಳ ಮೂಲವನ್ನು, ಅನ್ವೇಷಿಸುವ ಸಮಾಜಶಾಸ್ತ್ರಜ್ಞನ ವೈಜ್ಞಾನಿಕ ದೃಷ್ಟಿ ಅವರಿಗೆ ಲೀಲಾಜಾಲವಾಗಿ ಲಭ್ಯವಾಗಿತ್ತು. ಸಮಾಜದ ವಿವಿಧ ಸಮಸ್ಯೆಗಳನ್ನು ಅರಿತು, ಒಂದೊಂದು ನೆಲೆಯನ್ನೂ ತಮ್ಮ ಸೇವಾ ಕಾರ್ಯಕ್ಕಾಗಿ ಆಯ್ದುಕೊಂಡು ಅವುಗಳ ಪರಿಹಾರಕ್ಕಾಗಿ ಅನೇಕ ವಿಧಾಯಕ ಯೋಜನೆಗಳನ್ನು ಹಮ್ಮಿಕ್ರೊಂಡರು. ಅವುಗಳಲ್ಲಿ ಶಿಕ್ಷಣ, ಸಹಕಾರ, ಬ್ಯಾಂಕಿಂಗ್, ರಾಜಕೀಯ, ಒಕ್ಕಲುತನ, ನೇಕಾರಿಕೆ, ಗ್ರಾಮೀಣ ಅಭಿವೃದ್ಧಿ ಮುಂತಾದವು ಮುಖ್ಯವಾದ ಸೇವಾ ನೆಲೆಗಳು.

## ಶಿಕ್ಷಣ

ಜನರ ಎಲ್ಲ ಬಗೆಯ ತೊಳಲಾಟಕ್ಕೆ, ಶೋಷಣೆಗೆ ಅಜ್ಞಾನ ಮತ್ತು ಶಿಕ್ಷಣದ ಅಭಾವವೇ ಕಾರಣ ಎಂದು ಅರಿತ ಡಾ. ಹಳಕಟ್ಟಿ, ಶಿಕ್ಷಣ ಪ್ರಸರಣ ಕಾರ್ಯದಲ್ಲಿ ತೊಡಗಿದರು. ಶಿಕ್ಷಣ ಕುರಿತು ಅವರು ತಮ್ಮ ದಿನಚರಿಯುಲ್ಲಿ ಟಿಪ್ಪಣಿ ಮಾಡಿಟ್ಟುಕೊಂಡ ಕೆಲವು ಆಲೋಚನೆಗಳು ಗಮನಾರ್ಹವಾಗಿವೆ. ಶಿಕ್ಷಣ ಕೇವಲ ಕಾರಕೂನರನ್ನು ತಯಾರಿಸುವ ಕಾರ್ಖಾನೆಯಾಗಕೂಡದು. ವ್ಯಕ್ತಿಯಲ್ಲಿ ಪ್ರಜ್ಞೆ, ಆಲೋಚನಾ ಶಕ್ತಿ ಮತ್ತು ಸ್ವಾವಲಂಬನೆ ಸ್ವಾಭಿಮಾನಗಳನ್ನು ಜಾಗ್ರತಗೊಳಿಸುವುದು ಶಿಕ್ಷಣದ ಗುರಿಯಾಗಬೇಕು. 'ಸಚ್ಚಾರಿತ್ರ್ಯವನ್ನು ರೂಪಿಸುವುದೇ ವಿದ್ಯೆ', 'ಹುಟ್ಟಿದ ನೆಲದ ಮಣ್ಣು ನೀರು ಹಾಗೂ ಬೆಳಕುಗಳೊಡನೆ ಬೆರೆಯದ ಶಿಕ್ಷಣ ನಿಸ್ಸಾರ, ನಿರರ್ಥಕ', 'ವಿದ್ಯಾರ್ಥಿಯಲ್ಲಿರುವ ಶಕ್ತಿಯ ಸಂಪೂರ್ಣತೆಯ ಸಾಕ್ಷಾತ್ಕಾರ ವಾಗುವುದೇ ಶಿಕ್ಷಣದ ಗುರಿ'.

ಇಂಥ ಉದಾತ್ತ ವಿಚಾರಗಳಿಂದ ಪ್ರೇರಿತರಾದ ಶ್ರೀ ಹಳಕಟ್ಟಿ ೧೯೧೦ ರಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯನ್ನು ಆರಂಭಿಸಿದರು. ಆರಂಭದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ

ಆರ್ಥಿಕ ನೆರವು 'ವಿದ್ಯಾರ್ಥಿವೇತನ' ನೀಡುವ ಗುರಿ ಹೊಂದಿದ ಈ ಸಂಸ್ಥೆ, ೧೯೧೪ ರಲ್ಲಿ ಮಿಶನ್ ಹೈಸ್ಕೂಲನ್ನು ತನ್ನ ವ್ಯಾಪ್ತಿಗೆ ಒಳಪಡಿಸಿತು. ೧೯೧೭ ರಲ್ಲಿ ಶ್ರೀ ಸಿದ್ಧೇಶ್ವರ ಶಾಲೆಯಾಗಿ ತರುವಾಯ ಮಾಧ್ಯಮಿಕ ಶಾಲೆಯಾಗಿ ಒಂದು ಉನ್ನತ ಮಾದರಿಯ ವಿದ್ಯಾಸಂಸ್ಥೆಯಾಗಿ ಶಿಕ್ಷಣ ಪ್ರಸರಣದ ಕಾರ್ಯ ಮಾಡುತ್ತ ಬಂದಿತು. ಇಂದು ವಿಜಾಪುರ ಅನೇಕ ಕಲಾ, ವಾಣಿಜ್ಯ, ವಿಜ್ಞಾನ, ವೈದ್ಯಕೀಯ, ತಾಂತ್ರಿಕ ಮಹಾವಿದ್ಯಾಲಯಗಳ ನಗರಿಯಾಗಿ ರೂಪುಗೊಂಡಿದ್ದರೆ, ಅದಕ್ಕೆಲ್ಲ ಅಸ್ತಿವಾರ ಹಾಕಿದವರೇ ಶ್ರೀ ಹಳಕಟ್ಟಿಯವರು. ಬೆಳಗಾಂವಿ ಲಿಂಗರಾಜ ಕಾಲೇಜ, ಬಾಗಿಲುಕೋಟೆಯ ಬಸವೇಶ್ವರ ಕಾಲೇಜುಗಳ ಹುಟ್ಟಿಗೂ ಕಾರಣಕರ್ತರಾದ ಶ್ರೀ ಹಳಕಟ್ಟಿ ಅನೇಕ ಶೈಕ್ಷಣಿಕ ಸಂಸ್ಥೆಗಳಲ್ಲಿ ಆಡಳಿತ ಮಂಡಳಿಯ ಸದಸ್ಯರಾಗಿ, ತಮ್ಮ ಅಮೂಲ್ಯ ಸಲಹೆ ಮಾರ್ಗದರ್ಶನ ನೀಡಿದರು.

ಬಳ್ಳಾರಿಯಲ್ಲಿ ಜರುಗಿದ ೧೯೨೭ ರ ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಆಡಿದ ಅವರ ಮಾತು, ಸಾಮಾಜಿಕ ಪ್ರವಾದಿಯ ನುಡಿಯಂತಿದ್ದವು: "ಉತ್ತರ ಕರ್ನಾಟಕ ನಿಸರ್ಗ ಸಂಪತ್ತನ್ನು ಹೊಂದಿದೆ. ಕಾರವಾರ ಸಮುದ್ರಕ್ಕೆ ಬಂದರವಿದೆ. ಅದಕ್ಕೆ ಹೊಂದಿಕೊಂಡು ವಿಸ್ತಾರವಾದ ಅರಣ್ಯವಿದೆ. ಬಾಗಿಲುಕೋಟೆಯಿಂದ ತಾಳೀಕೋಟೆಯವರೆಗೆ ಸುಣ್ಣದ ಹರಳುಗಳ ಗುಪ್ತನಿಧಿಯಿದೆ. ಆದುದರಿಂದ ಈ ಭಾಗಕ್ಕೆ ವಿಶ್ವವಿದ್ಯಾಲಯವೊಂದು ಸ್ಥಾಪನೆಯಾಗಬೇಕು. ಆದರೆ ಅದು ಉಳಿದ ವಿಶ್ವವಿದ್ಯಾಲಯಗಳಂತೆ ಹೆಸರಿಗೆ ಮಾತ್ರ ವಿಶ್ವವಿದ್ಯಾಲಯ ವಾಗಕೂಡದು. ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದಂತೆ ಔದ್ಯೋಗಿಕ ಮತ್ತು ವೈಜ್ಞಾನಿಕ ಹಿನ್ನೆಲೆಗಳನ್ನೊಳಗೊಂಡು ಮುನ್ನಡೆವ ವಿಶ್ವವಿದ್ಯಾಲಯವಾಗಬೇಕು." ನಾಲ್ಕು ದಶಕಗಳ ಮೊದಲೇ ಕರ್ನಾಟಕ ವಿಶ್ವವಿದ್ಯಾಲಯದ ಕನಸು ಕಂಡ ಹಳಕಟ್ಟಿಯವರು, ತಮ್ಮ ಜೀವಿತ ಕಾಲಾವಧಿಯಲ್ಲಿಯೇ ಅದರ ಸ್ಥಾಪನೆಯನ್ನೂ ಕಂಡರು. ಅಷ್ಟೇ ಅಲ್ಲ ಅದೇ ವಿಶ್ವವಿದ್ಯಾಲಯದಿಂದ ಅಪಾರ ಮನ್ನಣೆಗೆ ಪಾತ್ರರಾದರು; ಡಿ. ಲಿಟ್ ಗೌರವ ಪದವಿ ಹೊಂದಿದರು.

ಶಿಕ್ಷಣ ಕ್ಷೇತ್ರದ ಸರಿಯಾದ ವಿಕಾಸಕ್ಕೆ ಪ್ರಾಥಮಿಕ ಶಿಕ್ಷಣವ ತಳಹದಿ ಅತ್ಯುತ್ತಮವಾಗಿರಬೇಕೆಂದು ನಂಬಿದ್ದ ಹಳಕಟ್ಟಿಯವರು, ಶಾಲಾ ಸಮಿತಿಯ ಅಧ್ಯಕ್ಷರಾಗಿ ಮರಾಠಿ ಶಾಲೆಗಳ ಪ್ರಾಬಲ್ಯಕ್ಕೆ ಸಮನಾಗಿ ಕನ್ನಡ ಶಾಲೆಗಳ, ಕನ್ನಡ ಭಾಷಾ ಶಿಕ್ಷಣದ ಅಭಿವೃದ್ಧಿಗಾಗಿ ಶ್ರಮಿಸಿದರು.

ಒಮ್ಮೆ ಅವರು ಆಕಾಶವಾಣಿಯಲ್ಲಿ ಶಿಕ್ಷಣದ ಹಿರಿಮೆ, ವಿಶೇಷತಃ ಪ್ರಾಥಮಿಕ ಶಾಲಾ ಶಿಕ್ಷಣ ಕುರಿತು ಮಾಡಿದ ಭಾಷಣದ ಕೆಲವು ಮಾತು ಇಂದಿಗೂ ಪ್ರಸ್ತುತವಾಗಿವೆ:

"ಶಾಲಾ ಸಮಿತಿಯ ಅಧ್ಯಕ್ಷನಾದ ಈ ಅವಧಿಯು ನನ್ನ ಜೀವನದ ಅತ್ಯುತ್ತಮ ಭಾಗವೆಂದು ನಾನು ತಿಳಿದುಕೊಂಡಿದ್ದೇನೆ. ***ಯಾವುದೇ ರಾಷ್ಟ್ರೀಯ ಕೆಲಸವನ್ನು ಪ್ರಾರಂಭಿಸಬೇಕಾದರೆ ಅದು ಪ್ರಾಥಮಿಕ ಶಾಲೆಗಳಿಂದಲೇ ಪ್ರಾರಂಭವಾಗಬೇಕೆಂದು ನನ್ನ ಅಭಿಪ್ರಾಯವಾಗಿದೆ.***"

ಬಾಲ್ಯದಿಂದಲೇ ಅನ್ಯ ಸಂಸ್ಕೃತಿಯ ಒತ್ತಡಕ್ಕೊಳಗಾಗುವ ವಿಚಾರ ಧೋರಣೆಯ ಇಂದಿನ ಶಿಕ್ಷಣ ತಜ್ಞರು, ತೆರೆದ ಮನಸ್ಸಿನಿಂದ ಈ ವಿಚಾರಗಳನ್ನು ಪರಿಶೀಲಿಸುವುದು ಅಗತ್ಯವಲ್ಲವೇ?

## ಸಹಕಾರ–ಗ್ರಾಮೀಣಾಭಿವೃದ್ಧಿ–ಬ್ಯಾಂಕ್ ಇತ್ಯಾದಿ

ಒಕ್ಕಲುತನವೇ ಮುಖ್ಯ ಜೀವನಾಧಾರವಾದ ಬಿಜಾಪುರ ಜಿಲ್ಲೆ, ಮತ್ತೆ ಮತ್ತೆ ಬರಗಾಲಕ್ಕೆ ತುತ್ತಾಗುವುದನ್ನು ಕಂಡು ತತ್ತರಿಸಿದವರು ಅನೇಕರಿರಬಹುದು. ಆದರೆ ಕೆಲಮಟ್ಟಿಗಾದರೂ ರೈತರ, ಜನತೆಯ ಗೋಳನ್ನು ಹೋಗಲಾಡಿಸಲು ಪ್ರಯತ್ನಿಸಿದವರಲ್ಲಿ ಹಳಕಟ್ಟಿಯವರ ಹೆಸರು ಮುಂಚೂಣಿಯಲ್ಲಿದೆ. ನಗರಸಭೆಯ ಕಾರ್ಯನಿರ್ವಾಹಕ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಗೊಂಡ ಅವರು, ವಿಜಾಪುರಕ್ಕೆ ನೀರು ಪೂರೈಸುವ ಭೂತನಾಳ ಕೆರೆಯ ಯೋಜನೆಯನ್ನು ಆದ್ಯತೆಯ ಮೇರೆಗೆ ಕೈಕೊಂಡದ್ದು ಒಂದು ದಾಖಲೆ. ರೈತರು ತಾವು ಬೆಳೆದ ಬೆಳೆಗಳ ಮಾರಾಟಕ್ಕೆ ಅನುಕೂಲವಿಲ್ಲದೆ ಅತ್ತಿತ್ತ ಅಲೆದಾಡುವ ಪರಿಸ್ಥಿತಿ. ಅದೇ ರೀತಿ ನೇಕಾರರು ಉತ್ತಮ ನೂಲು, ಬಣ್ಣ ಇತ್ಯಾದಿಗಳ ಬಗ್ಗೆ, ರೈತರು ಉತ್ತಮ ಬೀಜ ಗೊಬ್ಬರದ ಬಗ್ಗೆ ಹತಾಶರಾಗಿ, ಆರ್ಥಿಕ ಮುಗ್ಗಟ್ಟಿನಿಂದ ತೊಳಲಾಡುವ ದೀನ ಸ್ಥಿತಿ. ವ್ಯಾಪಾರಸ್ಥರು ಮಾಲು ಕೊಂಡು, ರೈತ, ನೇಕಾರ ಇತ್ಯಾದಿ ಬೇರೆ ಬೇರೆ ದುಡಿವ ಜನಸಮುದಾಯಕ್ಕೆ ನೆರವು ನೀಡಬೇಕೆಂದರೆ ಹಣದ ಅಭಾವ. ಇದನ್ನೆಲ್ಲ ಪ್ರತ್ಯಕ್ಷವಾಗಿ ಕಂಡ ಹಳಕಟ್ಟಿಯವರು, ಎಲ್ಲ ವರ್ಗದ ಉತ್ಸಾಹಿ ಜನರನ್ನು ಜೊತೆಗೂಡಿ ***ಗ್ರಾಮೀಣಾಭಿವೃದ್ಧಿ ಸಂಘ, ಒಕ್ಕಲುತನ ಸಹಕಾರಿ ಸಂಘ ಮತ್ತು ನೇಕಾರರ ಸಹಕಾರಿ ಸಂಘ, ಹತ್ತಿ ಮಾರಾಟದ ಸಂಘ***ಗಳನ್ನು ಸ್ಥಾಪಿಸಿದರು. ಇವೆಲ್ಲ ಸಂಘಗಳ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಬೆನ್ನೆಲುಬಾಗಿ ನಿಂತು, ಆರ್ಥಿಕ ನೆರವು ನೀಡಲು ಅಗತ್ಯವಾದ ಸಂಸ್ಥೆ ನಿರ್ಮಿಸಿದರು. ೧೯೧೨ ರಲ್ಲಿ ***ಶ್ರೀ ಸಿದ್ಧೇಶ್ವರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್*** ಸ್ಥಾಪಿಸಿದ ಹಳಕಟ್ಟಿಯವರು, ೧೯೨೦ ರ ವರೆಗೆ ಅದರ ಸಂಸ್ಥಾಪಕ ಸದಸ್ಯ–ಅಧ್ಯಕ್ಷರಾಗಿ ಕಾರ್ಯ ಮಾಡಿ, ಅದಕ್ಕೆ ಆರ್ಥಿಕ ಸುಭದ್ರತೆ ಒದಗಿಸಿದರು. ೧೯೧೨ ರಲ್ಲಿ ಕೇವಲ ೨೫೦೦ ರೂಪಾಯಿ ಮೂಲ ಬಂಡವಾಳದಿಂದ ಆರಂಭವಾದ ಶ್ರೀ ಸಿದ್ಧೇಶ್ವರ ಅರ್ಬನ್ ಕೋ-ಆಪ್. ಬ್ಯಾಂಕ್, ಇಂದು ಹತ್ತಾರು ಕೋಟಿ ಭಂಡವಲು ಚಲಾವಣೆಗೆ ತಂದಿರುವ ಒಂದು ಅಭಿವೃದ್ಧಿಶೀಲ ಬ್ಯಾಂಕ್, ಎಂದು ಕೀರ್ತಿ ಪಡೆದಿದೆ.

ರೈತರು ಮತ್ತು ಬಡಜನರು ಬರಗಾಲಕ್ಕೆ ತುತ್ತಾಗಿ ತತ್ತರಿಸುವುದನ್ನು ತಪ್ಪಿಸಲು ಹಳಕಟ್ಟಿ ೧೯೩೮ ರಲ್ಲಿ ವಿಲ್ಸನ್ ಆ್ಯಂಟಿ ಫ್ಯಾಮಿನ್ ಇನ್‌ಸ್ಟಿಟ್ಯೂಟ್ ಸ್ಥಾಪಿಸಿ, ಪರಿಪರಿಯಾಗಿ ಶ್ರಮಿಸಿದರು.

ಧಾರ್ಮಿಕ ಶ್ರದ್ಧೆ ಭಕ್ತಿ ಭಾವಗಳ ಉತ್ಕರ್ಷ ಮತ್ತು ಗ್ರಾಮೀಣ ಜನತೆಯ ಜೀವನೋತ್ಸಾಹಗಳ ಅಭಿವೃದ್ಧಿಯ ದೃಷ್ಟಿಯಿಂದ, ***ಸಿದ್ಧೇಶ್ವರ ಸಂಸ್ಥೆ***ಯ ಅಧ್ಯಕ್ಷರಾಗಿ ಮಾಡಿದ ಕಾರ್ಯ ಕೂಡ ಗಮನಾರ್ಹ. ಜನಸಾಮಾನ್ಯರ ಜಾಗೃತಿಗಾಗಿ, ಕೃಷಿಕರ ಕಾರ್ಮಿಕರ ಮತ್ತು ಕುಶಲಕರ್ಮಿಗಳ ಉತ್ತೇಜನಕ್ಕಾಗಿ ಪ್ರತಿವರ್ಷ ವಿಜಾಪುರ ಸಿದ್ಧೇಶ್ವರ ದೇವಾಲಯದ ಆವರಣದಲ್ಲಿ ನಡೆಯುತ್ತಿದ್ದ ಸಂಕ್ರಾಂತಿ ಕಾಲದ ಜಾತ್ರೆಗೆ ಶ್ರೀ ಹಳಕಟ್ಟಿ ಒಂದು ಬಗೆಯ ಸಾಂಸ್ಕೃತಿಕ ಹಬ್ಬದ ರೂಪ ನೀಡಲು ಯತ್ನಿಸಿದರು. ಒಳ್ಳೆಯ ತಳಿಯ ಹೋರಿ, ಎತ್ತು, ದನಕರುಗಳ ಪ್ರದರ್ಶನ ಏರ್ಪಡಿಸಿ, ಒಂದು ಬಹುದೊಡ್ಡ ಜಾತ್ರೆಯೇ ನಡೆಯುವಂತೆ ಯೋಜಿಸಿದರು. ೧೫-೨೦ ದಿನಗಳವರೆಗೆ ನಡೆಯುತ್ತಿದ್ದ ಸಂಕ್ರಾಂತಿಯ ಉತ್ಸವದ ಪ್ರಮುಖ ಆಕರ್ಷಣೆ ಎಂದರೆ, ಸುಪ್ರಸಿದ್ಧ ತಳಿಯ ದನಕರುಗಳ ಮಾರಾಟ.

ಕರ್ನಾಟಕ ಏಕೀಕರಣ ಮತ್ತು ಭಾರತ ಸ್ವಾತಂತ್ರ್ಯಾಂದೋಲನಗಳ ದಿನಮಾನಗಳಲ್ಲಿ 'ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಹಕ್ಕು' ಎನ್ನುವ ಲೋಕಮಾನ್ಯ ಟಿಳಕರ ವಿಚಾರ ಕ್ರಾಂತಿಗೆ ಹಳಕಟ್ಟಿ ತಮ್ಮ ದನಿಗೂಡಿಸಿದರು. ಕನ್ನಡದ ಜನ ಅಲ್ಲಿಷ್ಟು ಇಲ್ಲಿಷ್ಟು ಹಂಚಿಹೋಗಿದ್ದಾರೆ. ಅವರೆಲ್ಲ ಒಂದು ಆಡಳಿತ ಸೂತ್ರದಲ್ಲಿ ಬದ್ಧರಾಗಬೇಕು. ಕನ್ನಡಿಗರ ಸರ್ವತೋಮುಖ ಏಳಿಗೆಗೆ ಕರ್ನಾಟಕ ಏಕೀಕರಣ ಅತ್ಯಗತ್ಯ ಎಂದು ಆ ಚಳುವಳಿಯ ಮುಂಚೂಣಿಯಲ್ಲಿ ನಿಂತು ಹೋರಾಡಿದರು. ೧೯೨೮ ರಲ್ಲಿ ಧಾರವಾಡದ ಏಕೀಕರಣ ಪರಿಷತ್ತಿನ ಅಧ್ಯಕ್ಷರಾಗಿ, ತಮ್ಮ ಆಲೋಚನೆಗಳನ್ನು ಜನತೆಯ ಮುಂದಿಟ್ಟು, ಅವರಿಗೆ ಹೊಸ ಪ್ರೇರಣೆ ನೀಡಿದರು. ವರ್ತಕರ ಮನೆಮನೆಗೆ ಅಂಗಡಿಯ ಮುಂಗಟ್ಟುಗಳಿಗೆ ಹೋಗಿ 'ಮೋಡಿ' ಬರವಣಿಗೆಯ ಲೆಕ್ಕಪತ್ರ ಬಿಟ್ಟು, ಕನ್ನಡದಲ್ಲಿಯೇ ಖಾತೆ ಕಿರ್ದಿ ವಹಿಗಳನ್ನು ಬರೆಯುವಂತೆ ಅವರ ಮನವೊಲಿಸಿದರು. ಕನ್ನಡದ ಬಳಕೆಗೆ ಒಪ್ಪಿಕೊಂಡ ವ್ಯಾಪಾರಿ ಮತ್ತು ಇತರ ಸಾಂಸ್ಥಿಕ ಜನರ ಹೆಸರುಗಳನ್ನು 'ನವ ಕರ್ನಾಟಕ' ವಾರಪತ್ರಿಕೆಯಲ್ಲಿ ಎದ್ದುಕಾಣುವಂತೆ ಮುದ್ರಿಸಲಾಯಿತು. ಹೀಗೆ ಕಾಲಕ್ರಮೇಣ ಮೋಡಿ ಮರಾಠಿ ಭಾಷೆಗಳ ಬಳಕೆ ದಿನನಿತ್ಯದ ವ್ಯಾಪಾರ ವಾಣಿಜ್ಯ ಪತ್ರವ್ಯವಹಾರಗಳಲ್ಲಿ ಮಾಯವಾಗಿ, ಕನ್ನಡ ಭಾಷೆ - ಜನರ ಭಾಷೆ - ಜನರಿಗೆ ತಿಳಿಯುವ ಭಾಷೆ ಎಲ್ಲೆಡೆ ಹರಡಿತು. ವಿಜಾಪುರ ಪ್ರದೇಶದ ಜನತೆಯಲ್ಲಿ ಕೆಲಕಾಲ ವಿಸ್ಮೃತಿಗೊಳಗಾಗಿದ್ದ ಕನ್ನಡ ಸಾಹಿತ್ಯ ಸಂಸ್ಕೃತಿಗಳ ಅಭಿಮಾನ ಜಾಗೃತಗೊಂಡಿತು; ಉಜ್ವಲಿಸಿತು.

ಹಳಕಟ್ಟಿಯವರ ನಿಸ್ವಾರ್ಥ ಸೇವೆ ಮತ್ತು ಪ್ರಾಮಾಣಿಕತೆಗಳ ಫಲವಾಗಿ ಕೆಲವು ಅವರ ಸ್ನೇಹಿತರು ಅವರನ್ನು ರಾಜಕೀಯ ಕ್ಷೇತ್ರಕ್ಕೆ ಪರಿಚಯಿಸಿದರು. ೧೯೧೭

ರಲ್ಲಿ ಶ್ರೀ ಹಳಕಟ್ಟಿ ವಿಜಾಪುರ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾಗಿ ಸಂಘಟನಾತ್ಮಕ ಕಾರ್ಯ ಕೈಕೊಂಡರು. ತಮ್ಮ ವಿವಿಧ ಬಗೆಯ ಸಾಮಾಜಿಕ ಸೇವೆಗಳ ಮೂಲಕ ಎಲ್ಲ ಭಾಗದ ಜನತೆಗೆ ಚಿರಪರಿಚಿತರಾಗಿದ್ದ ಹಳಕಟ್ಟಿಯವರು, ೧೯೨೦ ರಲ್ಲಿ, ಅಂದಿನ ಮುಂಬಯಿ ವಿಧಾನಸಭೆಯ ಸದಸ್ಯರಾಗಿ ಆಯ್ಕೆಗೊಂಡರು. ಮುಂಬೈ ವಿಶ್ವವಿದ್ಯಾಲಯದ ಅಭ್ಯಾಸ ಮಂಡಳಿ, ಸಿನೇಟ್, ಪ್ರಾಥಮಿಕ ಶಿಕ್ಷಕರ ಸಮಿತಿ, ಕನ್ನಡ ಪಠ್ಯಪುಸ್ತಕ ಸಮಿತಿ, ಕನ್ನಡ ಸಂಶೋಧನಾ ಸಮಿತಿ, ಪ್ರಾಥಮಿಕ ಶಾಲಾ ಅಭ್ಯಾಸ ಪತ್ರಿಕಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತು ಮುಂತಾದ ಸಮಿತಿ ಸಂಸ್ಥೆಗಳ ಸದಸ್ಯರಾಗಿ, ವಿವಿಧ ರೀತಿಯ ವ್ಯಾಪಕ ಹೊಣೆ ಹೊತ್ತು ಕಾರ್ಯ ಮಾಡುತ್ತಿದ್ದ ಹಳಕಟ್ಟಿಯವರಿಗೆ, ರಾಜಕೀಯ ರಂಗದ ಗೌಜು ಗದ್ದಲ, ತಮ್ಮ ಗುರಿ ಸಾಧನೆಗೆ ಅಷ್ಟೊಂದು ಸಮರ್ಥ ಕ್ಷೇತ್ರವಾಗಿ ತೋರಲಿಲ್ಲ. ಅಲ್ಲದೆ ಅವರು ಹಮ್ಮಿಕೊಂಡಿದ್ದ ವಚನ ವಾಙ್ಮಯ ಸಂಶೋಧನ ಕಾರ್ಯ ಇತರ ಯಾವುದೇ ಚಟುವಟಿಕೆಗಿಂತ ಹೆಚ್ಚು ಅರ್ಥಪೂರ್ಣವಾಗಿ ಅವರನ್ನು ತಟ್ಟಿತು. ತಮ್ಮ ಜೀವಿತದ ಗುರಿ ಮುಖ್ಯವಾಗಿ ಸಂಶೋಧನೆ, ಸಾಹಿತ್ಯ ಮತ್ತು ಶಿಕ್ಷಣ ಪ್ರಸರಣ ಎಂದು ಖಚಿತಪಡಿಸಿಕೊಂಡ ಹಳಕಟ್ಟಿಯವರು, ರಾಜಕೀಯ ಕ್ಷೇತ್ರದಿಂದ ದೂರ ಸರಿದರು; ಮತ್ತು ಕಾಲಾನಂತರ ವಕೀಲಿವೃತ್ತಿಗೂ ಶರಣು ಹೊಡೆದರು. ಎಂದಿಲ್ಲದ ಉತ್ಸಾಹ ಮತ್ತು ಉಲ್ಲಾಸಗಳಿಂದ ತಮ್ಮ ಜೀವಿತದ ಕೊನೆಯವರೆಗೆ ವಿನಮ್ರರಾಗಿ ಸಾಹಿತ್ಯ ಸಂಶೋಧನೆ, ತಾತ್ವಿಕ ವಿವೇಚನೆ, ಸಾಮಾಜಿಕ ಕಾರ್ಯಗಳಲ್ಲಿ ತೊಡಗಿ, ಒಟ್ಟು ಸಂಸ್ಕೃತಿ ಪ್ರಸರಣದ ಮಣಿಹದಲ್ಲಿಯೇ ತಮ್ಮ ಬದುಕನ್ನು ಸಫಲಗೊಳಿಸಿದರು; ಸಾರ್ಥಕಗೊಳಿಸಿದರು. ಮಹಾತ್ಮಾ ಗಾಂಧೀಜಿಯವರು ಅಸ್ಪೃಶ್ಯತಾ ನಿವಾರಣೆಯನ್ನು ತಮ್ಮ ವಿಧಾಯಕ ಕಾರ್ಯಕ್ರಮಗಳ ಅಂಗವಾಗಿ ಸೇರಿಸಿಕೊಂಡು, ನಾಡಿನಾದ್ಯಂತ ಅಸ್ಪೃಶ್ಯತಾ ನಿವಾರಣೆಯ ಒಂದು ಚಳುವಳಿಯನ್ನೇ ಆರಂಭಿಸಿದರು. ಈ ಚಳವಳಿಯನ್ನು ಮುಕ್ತಮನಸ್ಸಿನಿಂದ ಸ್ವಾಗತಿಸಿದ ಹಳಕಟ್ಟಿಯವರು, ೧೯೩೩ ರ ಧಾರವಾಡದ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷ ಸ್ಥಾನದಿಂದ ಹೇಳಿದ ಮಾತು, ಜನತೆಯಲ್ಲಿ ಹೊಸ ಉತ್ಸಾಹ ಮೂಡಿಸಿದುವು; ಕನ್ನಡಿಗರಲ್ಲಿ ಅಭಿಮಾನದ ಗರಿಗೆದರಿಸಿದುವು:

> "ವೀರಶೈವರಲ್ಲಿ ಸ್ಪೃಶ್ಯಾಸ್ಪೃಶ್ಯ ಬೇಧವು ಏನೂ ಇರುವುದಿಲ್ಲ. ಇದು ಅವರ ಧರ್ಮ ದೃಷ್ಟಿಯಿಂದ ಇರುವುದೇ ಇಲ್ಲ. ಆದ್ದರಿಂದ ಅವರು ಅಸ್ಪೃಶ್ಯತಾ ನಿವಾರಣೆಯ ಸಲುವಾಗಿ ತಮ್ಮ ಪೂರ್ಣ ಬೆಂಬಲವನ್ನು ಕೊಡತಕ್ಕದ್ದು."

# ೬. ವ್ಯಕ್ತಿ-ವೈಶಿಷ್ಟ್ಯ-ಘನತೆ

ನಿರಾಳ ಕಣ್ಣು, ಸೌಮ್ಯ ಮುಖ, ಸಹಜ ನಿಲುವು, ಸುಟಿಯಾದ ಕಾಯ, ಸುತ್ತಿದ ಬಿಳಿ ರುಮಾಲು, ಉಟ್ಟ ಬಿಳೀ ಧೋತರ, ಉದ್ದ ತೋಳಿನ ಅಂಗಿ, ಕಾಲರ್ ಕೋಟು, ಬಿಳಿ ಕ್ಯಾನ್ವಾಸ್ ಬೂಟು ಮತ್ತೆ ಕನ್ನಡಕ. ಹೀಗೆ ಮೇಲುನೋಟಕ್ಕೆ ಅತಿ ಸರಳವಾಗಿ ಕಾಣುವ ಹಳಕಟ್ಟಿಯವರ ವ್ಯಕ್ತಿತ್ವದ ವೈಶಿಷ್ಟ್ಯವೆಂದರೆ, ಹಿತಮಿತವಾದ ಮಾತು; ಔಚಿತ್ಯಪೂರ್ಣ ವಿನಯಶೀಲತೆ ಮತ್ತು ಯಾವುದೇ ಹಮ್ಮು ಬಿಮ್ಮುಗಳಿಲ್ಲದ ಸರಳ ನಡವಳಿಕೆ.

ಶಕ್ತಿಯಿರುವವರೆಗೆ ಸಾಯಕಲ್ಲನ್ನು ತಮ್ಮ ವಾಹನವನ್ನಾಗಿ ಬಳಸಿದ ಹಳಕಟ್ಟಿಯವರು, ತಮ್ಮ ಹಿತಚಿಂತಕ ಮುದ್ರಣಾಲಯಕ್ಕೆ ಬಂದು, ಸಾಯಕಲ್ ಮೇಲಿಂದ ಇಳಿದಾಗ, ಅದನ್ನು ಎತ್ತಿ ಒಂದು ಕಡೆ ಇಡಲು ಬಂದ ಮುದ್ರಣಾಲಯದ ಕೆಲಸಗಾರನಿಗೆ, ವಿನಯದಿಂದ ಕೂಡದು ಎಂದು ಹೇಳಿ, ತಾವೇ ಸ್ವತಃ ಅದನ್ನು ಮಾಡುತ್ತಿದ್ದ ಸ್ವಾವಲಂಬಿ, ನಿರಾಡಂಬರ ವ್ಯಕ್ತಿ.

ಅನೇಕ ಆರ್ಥಿಕ ಮುಗ್ಗಟ್ಟಿನ ಮಧ್ಯೆ ಅವರ ಮುದ್ರಣಾಲಯದ ಕೆಲಸಗಾರರು ತಮ್ಮ ಜೊತೆಗೇ ಬಳಲುವ ಸಂದರ್ಭ ಒದಗಿ ಬಂದಾಗ, ನೌಕರರಿಗೆ ವೇತನ ಕೊಡಲು ವಿಲಂಬವಾದಾಗ, ಕೆಲವೊಮ್ಮೆ ತಮ್ಮ ಮನೆಯಿಂದಲೇ ಹಿಟ್ಟು ಕಳಿಸುವ ಉದಾರ ಅಂತಃಕರಣ ಅವರದಾಗಿತ್ತು. ತಮ್ಮಲ್ಲಿ ದುಡಿಯುವವರೆಲ್ಲರೂ ತಮ್ಮ ಬಳಗದವರೆಂದೇ ಭಾವಿಸುತ್ತ ಬಂದ ಹಳಕಟ್ಟಿಯವರು, ತಮ್ಮ ಅಂತರಂಗ ಬಹಿರಂಗಗಳೆರಡನ್ನೂ ಶುದ್ಧವಾಗಿರಿಸಿಕೊಂಡ ಸಹಜ ಶರಣ.

ಕಷ್ಟ ಕಾಲದಲ್ಲಿ ತಮಗೆ ವಿವಿಧ ಬಗೆಯಲ್ಲಿ ನೆರವು ನೀಡಿದ ಬಬಲೇಶ್ವರದ ಶಾಂತವೀರಸ್ವಾಮಿ, ಚಿಕ್ಕೋಡಿ ತಮ್ಮಣ್ಣಪ್ಪ, ಚಿಂಚಣಿಯ ಧರ್ಮಗೌಡ, ಹರ್ಡೇಕರ ಮಂಜಪ್ಪ, ಆರ್. ನರಸಿಂಹಾಚಾರ್ ಮುಂತಾದ ಮಹನೀಯರನ್ನು ಹೃದಯ ತುಂಬಿ ನೆನೆದು, ಬಂದ ಹಣವನ್ನೆಲ್ಲ ಮುದ್ರಣಾಲಯ, ಸಾಹಿತ್ಯಕೃತಿ ಮುದ್ರಣಕ್ಕಾಗಿಯೇ ವಿನಿಯೋಗಿಸಿದ ಶ್ರದ್ಧಾಳು.

ದಾವಣಗೆರೆಯ ಮಸಗಿ ಶಾಂತಪ್ಪ, ಶ್ರೀಮತಿ ಶಾಂತಮ್ಮ ಅಜ್ಜಂಪುರ, ಹೊದಿಗ್ಗೆರೆ ಗಂಗಮ್ಮ ಚಿತ್ರದುರ್ಗ ಮುರುಘರಾಜೇಂದ್ರ ಸ್ವಾಮಿಗಳು, ಮೂರು ಸಾವಿರ ಮಠದ ಗುರುಸಿದ್ಧೇಶ್ವರ ಸ್ವಾಮಿಗಳು, ಹಾಲಭಾವಿ ವೀರಭದ್ರಪ್ಪ, ಸಾದರಳ್ಳಿ ಮೂರುಸಾವಿರಪ್ಪ, ಸೊಲ್ಲಾಪುರದ ಕಾಡಾದಿ ನೇಮಪ್ಪ ಇವರೆಲ್ಲರಿಂದ ದೇಣಿಗೆ ರೂಪದಲ್ಲಿ ಬಂದ ಹಣ, ತಮ್ಮ ವಚನ ಗ್ರಂಥಗಳ ಮುದ್ರಣ ಪ್ರಕಾಶನ ಕಾರ್ಯಕ್ಕೆ ಅಗತ್ಯವಾದ ನೆರವು ನೀಡಿದುದನ್ನು ಸ್ಮರಿಸುತ್ತ "ಹೀಗೆ ಸಹಾಯ ಮಾಡಿದ ಮಹನೀಯರಿಗೆಲ್ಲ ನಾನು ಅತ್ಯಂತ ಋಣಿಯಾಗಿದ್ದೇನೆ..... ಕೃತಜ್ಞನಾಗಿದ್ದೇನೆ" ಎಂದು ಶಿವಾನುಭವ ಪತ್ರಿಕೆಯ ೨೫ ವರ್ಷಗಳ ವರದಿಯಲ್ಲಿ ವಿವರಿಸಿದ್ದಾರೆ. ಆದರೆ ಸಮಾಜದ ಸ್ಥಿತಿವಂತರು ಅಭಿಮಾನಿಗಳು ನೀಡಿದ ಆರ್ಥಿಕ ನೆರವಿನ ಋಣವನ್ನು, ಹಳಕಟ್ಟಿಯವರು, ತಮ್ಮ ಸಾಹಿತ್ಯ ಸಮಾಜಸೇವೆಗಳ ಮೂಲಕ, ಒಂದಕ್ಕೆ ನೂರುಮಡಿಯಾಗಿ ಸಮಾಜಕ್ಕೆ ನಾಡಿಗೆ ಸಲ್ಲಿಸಿ ಋಣಮುಕ್ತರಾಗಿದ್ದಾರೆ.

ಸಂಶೋಧನೆಗೆ ಪೂರ್ಣವಿರಾಮ ಎನ್ನುವುದಿಲ್ಲ. ಅದು ಕಾಲಕಾಲಕ್ಕೆ ನಡೆಯುವ ಹೊಸ ಹೊಸ ಅನ್ವೇಷಣೆಗಳ ಬೆಳಕಿನಲ್ಲಿ ಮತ್ತೆ ಮತ್ತೆ ಪರಿಷ್ಕಾರಗೊಳ್ಳಬಹುದಾದ, ಪರಿಷ್ಕಾರಗೊಳ್ಳುವ ಸತ್ಯಶೋಧನೆಯ ನಿರಂತರ ಪ್ರಕ್ರಿಯೆ. ಕಾರಣ, ನಡೆದ ದಾರಿಗಿಂತ ನಡೆಯಬೇಕಾಗಿರುವ ದಾರಿ ನಿಡಿದಾಗಿದೆ ಎಂದು ಹಳಕಟ್ಟಿ ಭಾವಿಸಿದ್ದರು. ಅವರು ಶಿವಾನುಭವ ಸಂಚಿಕೆಯ ೨೫ ನೆಯ ವಾರ್ಷಿಕ ವರದಿಯಲ್ಲಿ ಹೇಳಿದ ಮಾತು ಅವರ ಈ ಧೋರಣೆಗೆ ಸಾಕ್ಷಿ:

> "ಬಹುಜನರು ವೀರಶೈವ ವಾಙ್ಮಯ ಕಾರ್ಯಗಳು ಬಹುಮಟ್ಟಿಗೆ ಈಗ ಆಗಿಹೋಗಿರುತ್ತವೆ. ತಾವು ಮಾಡತಕ್ಕ ಕಾರ್ಯಗಳು ಇನ್ನಾವೂ ಉಳಿದಿರುವುದಿಲ್ಲ ಎಂದು ಸಾರ್ವಜನಿಕ ಸಭೆಗಳಲ್ಲಿ ಹೇಳಿದ್ದನ್ನು ನಾನು ಕೇಳಿದ್ದೇನೆ. ಆದರೆ ಇದು ಅವರ ತಪ್ಪು ತಿಳುವಳಿಕೆಯೆಂದು ಹೇಳುವುದು ಅವಶ್ಯವಿರುತ್ತದೆ. ಆದ್ದರಿಂದ ಮುಂದೆ ಮಾಡತಕ್ಕ ಕಾರ್ಯಗಳ ಬಗ್ಗೆ ನಾವು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸುತ್ತೇವೆ...."

ಎಂದು ಹೇಳುತ್ತ ಷಟ್‌ಸ್ಥಲಶಾಸ್ತ್ರ, ಕರ್ನಾಟಕ ಆಂಧ್ರಪ್ರದೇಶಗಳ ಶಿಲಾಶಾಸನಗಳ ಅಧ್ಯಯನ, ದೇಸಗತಿ, ರಾಜವಂಶಗಳ ದಾಖಲೆಗಳ ಶೋಧ, ಶ್ರೀ ಶೈಲ ಪ್ರಾಂತ ಕೊಲ್ಲಿಪಾಕಿ ಪೊಟ್ಟಲಕೆರೆ, ಮುದನೂರು, ಕೆಳದಿ, ಇಕ್ಕೇರಿ. ತುಮಕೂರು, ಹಾಗಲವಾಡಿ, ಹರದನಹಳ್ಳಿ, ಮೈಸೂರು ಮುಂತಾದ ಒಂದು ಕಾಲದ ವೀರಶೈವ ಸಂಸ್ಕೃತಿಯ ಕೇಂದ್ರಗಳಾಗಿದ್ದ ಸ್ಥಳಗಳಲ್ಲಿ, ಅಧಿಕ ಸಂಶೋಧನೆಯ ಅಗತ್ಯ, ವೀರಶೈವ ವಾಙ್ಮಯದ ಹಿರಿಮೆಯನ್ನು ಇತರರಿಗೆ ತಿಳಿಸಲು ಇಂಗ್ಲಿಷ್ ಭಾಷಾ ಪತ್ರಿಕೆಯೊಂದರ ಅಗತ್ಯತೆ, ಸ್ತ್ರೀ ಸಮಾನತೆಯ ಪ್ರಕ್ರಿಯೆ, ಜಾತಿ ಭೇದಗಳು, ವಿವಿಧ ಪಂಗಡಗಳ ನಿವಾರಣೆ ಮುಂತಾದ ಹಲವು ಹತ್ತಾರು ದಿಸೆಯಲ್ಲಿ ಮುಂದೆ ನಡೆಯಬೇಕಾಗಿರುವ ಕಾರ್ಯದ ದಿಗ್ದರ್ಶನ ಮಾಡಿದ್ದಾರೆ.

ಪ್ರಪಂಚದ ದಾರ್ಶನಿಕ ಸಾಹಿತ್ಯ ಕೃತಿಗಳಿಗೆ ಸರಿಸಮನಾಗಿ ನಿಲ್ಲಬಲ್ಲ ಕನ್ನಡದ ಅಪೂರ್ವ ದಾರ್ಶನಿಕ ಕೃತಿ ***ಶೂನ್ಯ ಸಂಪಾದನೆ.*** ಅಂಥ ವಿರಳ ಕೃತಿಯನ್ನು ಮೊಟ್ಟಮೊದಲು ಪ್ರಕಟಿಸಿದ (೧೯೩೦) ಶ್ರೇಯಸ್ಸು ಹಳಕಟ್ಟಿಯವರದು. ವಚನ ಸಾಹಿತ್ಯ ವೀರಶೈವ ದರ್ಶನಗಳ ಪುನರುಜ್ಜೀವನಕ್ಕಾಗಿ ತಮ್ಮ ಸರ್ವಸ್ವವನ್ನು ಧಾರೆಯೆರೆದ ಸಾಧನೆ ಹಳಕಟ್ಟಿಯವರದು. ನಿರಂತರವಾದ ಪ್ರಾಮಾಣಿಕತೆ ಮತ್ತು ಕಾಯಕನಿಷ್ಠೆಗಳಿಂದ ಶ್ರಮಿಸಿ, ಸುಮಾರು ಇಪ್ಪತ್ತೈದು ಸಾವಿರ ಪುಟಗಳಿಗೂ ಮಿಕ್ಕಿದ ವಾಙ್ಮಯವನ್ನು ಬೆಳಕಿಗೆ ತಂದ ಏಕಾಂಗ ವೀರವ್ರತಿ ಹಳಕಟ್ಟಿಯವರು. ಅವರನ್ನು ಜನ ***ಕನ್ನಡ ಶರಣ*** ಎಂದು, ***ಕರ್ನಾಟಕದ ಮ್ಯಾಕ್ಸ್‌ಮುಲ್ಲರ್*** ಎಂದು (ವಿ. ಶಿವಾನಂದ, ಸಿಂಪಿ ಲಿಂಗಣ್ಣ) ಕರೆದದ್ದುಂಟು.

ಫ.ಗು. ಹಳಕಟ್ಟಿಯವರನ್ನು ದಿ. ೧೭.೧.೧೯೬೦ ರಂದು ಧಾರವಾಡದಲ್ಲಿ ಸತ್ಕರಿಸಿ ಹಮ್ಮಿಣಿ ಅರ್ಪಿಸಿದಾಗ, ಅವರನ್ನು ಅಭಿನಂದಿಸಿ ಮಾತನಾಡಿದವರು ಈ ಮೂವರು: ಕರ್ನಾಟಕ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಡಾ. ಡಿ.ಸಿ. ಪಾವಟೆ, ಡಾ. ಆರ್.ವೈ.ಧಾರವಾಡಕರ್ ಮತ್ತು ಶ್ರೀಮತಿ ಸರಸ್ವತಿದೇವಿ ಗೌಡರ. ಅನುಕ್ರಮವಾಗಿ ಅವರು ಹೇಳಿದ ಮಾತು ಹೀಗಿವೆ:

> "ಇಂದು ನಾವು ಹಳಕಟ್ಟಿಯವರಿಗೆ ಸಲ್ಲಿಸುತ್ತಿರುವ ಗೌರವ ಶಾರದಾದೇವಿಗೆ ಸಲ್ಲಿಸುವ ಗೌರವ."

> "ಸಮುದ್ರ ತಳದಲ್ಲಿ ಕುಳಿತ ವೇದಗಳನ್ನು ವಿಷ್ಣುವು ಕೂರ್ಮಾವತಾರ ತಾಳಿ ಮೇಲಕ್ಕೆ ತಂದನು. ಅದೇ ಪ್ರಕಾರ ಡಾ. ಹಳಕಟ್ಟಿಯವರು ಮರೆವು ಎಂಬ ಮಹಾಸಾಗರದಲ್ಲಿ ಮುಳುಗಿಹೋದ ವಚನ ಸಾಹಿತ್ಯವನ್ನು ಮೇಲಕ್ಕೆ ಎತ್ತಿರುವರು."

> "ಗೋಳಗುಮ್ಮಟದಲ್ಲಿ ಒಮ್ಮೆ ಮಾತನಾಡಿದರೆ ಏಳು ಸಲ ಪ್ರತಿಧ್ವನಿ ಕೇಳಿಬರುವುದು. ಆದರೆ ಹಳಕಟ್ಟಿಯವರು ಸಂಗ್ರಹಿಸಿದ ವಚನಗಳ ಪ್ರತಿಧ್ವನಿ ಪ್ರತಿಯೊಂದು ಹೃದಯದಲ್ಲಿ ಕೇಳಿಬರುವುದು."

ತಮ್ಮ ಸತ್ಕಾರಕ್ಕೆ ಆಡಿದ ಮಾತುಗಳಿಗೆ ಡಾ. ಹಳಕಟ್ಟಿ ನೀಡಿದ ಉತ್ತರ ಅವರ ಉದಾತ್ತ ವ್ಯಕ್ತಿತ್ವದ ಪ್ರತಿಬಿಂಬವಾಗಿದೆ:

> "......ಉಳಿದ ಸಂಪತ್ತನ್ನು ರಕ್ಷಿಸುವಂತೆ ಶರಣ ಸಾಹಿತ್ಯವನ್ನು ರಕ್ಷಿಸಿರಿ...... ವಿಶ್ವದ ವಿವಿಧ ಭಾಷೆಗಳಲ್ಲಿ ವಚನ ವಾಙ್ಮಯವು ಪರಿವರ್ತನೆಗೊಳ್ಳಲಿ....... ಸತತೋತ್ಸಾಹಿಗಳಾದ ತರುಣರು ಸಾಹಿತ್ಯಸೇವೆ ಮಾಡಲಿ...... ನನ್ನನ್ನು ಹೊಗಳುವುದಕ್ಕಿಂತ ಶರಣರ ಕಾರ್ಯಕ್ಕೆ ನೆರವಾದರೆ ನನಗೆ ಹೆಚ್ಚಿನ ಸಂತೋಷವಾಗುವುದು."

ಎಂಬತ್ತುನಾಲ್ಕು ವರ್ಷಗಳ ಸಾರ್ಥಕ ಜೀವನ ಬಾಳಿದ ಡಾ. ಹಳಕಟ್ಟಿ ಮರಣವನ್ನಪ್ಪಿದ್ದು ೧೯೬೪ ನೆಯ ವರ್ಷದ ಜೂನ್ ೨೯.

ಸುಮಾರು ಐದು ದಶಕದ ಮೊದಲು ೧೯೫೫ ರ ಫೆಬ್ರವರಿ ೧೫ ರಂದು ಅವರು ಮಾಡಿದ ಆಕಾಶವಾಣಿ ಭಾಷಣದ ನುಡಿಮುತ್ತು, ಜನತೆಯ ಹೃದಯದ ಚಿರಂತನ ದೀಪ್ತಿಗಳಾಗಿವೆ.

> "ವಚನಗಳೆಂದು ಪ್ರಸಿದ್ಧವಾದ ಈ ಬರೆಹಗಳ ಭಾಷೆ ಶೈಲಿ ಹಾಗೂ ಅಲ್ಲಿ ನಿರೂಪಿತ ತತ್ವಜ್ಞಾನ ಕನ್ನಡ ಸಾಹಿತ್ಯದಲ್ಲಿ ಅಪೂರ್ವವಾಗಿದೆ...... ಈ ಸಾಹಿತ್ಯದಲ್ಲಿ ಧರ್ಮಾಂಧತೆಯಿಲ್ಲ. ಅದು ವಿಶ್ವಧರ್ಮವಾಗಿದೆ. ಶರಣರು ಜಾತಿಯನ್ನು ಮನ್ನಿಸುವುದಿಲ್ಲ. ಪ್ರತಿಯೊಬ್ಬರೂ ಕಠಿಣ ಪರಿಶ್ರಮ ಮಾಡಬೇಕು. ಭಿಕ್ಷೆ ಬೇಡಬಾರದು.... ಅವರ ದೃಷ್ಟಿಯಲ್ಲಿ ಕಾಯಕವೇ ಪೂಜೆ. ನಿಜವಾಗಿ ಕಾಯಕವೇ ಕೈಲಾಸ. ಪುರುಷರಿಗೆ ಕೊಟ್ಟ ಸ್ಥಾನವನ್ನೇ ಅವರು ಸ್ತ್ರೀಯರಿಗೆ ಕೊಟ್ಟಿದ್ದಾರೆ...."

> "ರಚನಾತ್ಮಕ ಕಾರ್ಯಗಳಿಂದ ಆರೋಗ್ಯಮಯ ಹಾಗೂ ಉಪಯುಕ್ತ ಜೀವನವನ್ನು ಬದುಕಲು ಸಾಧ್ಯವೆಂಬುದನ್ನು ತೋರಿಸುವುದೇ ನನ್ನ ಉದ್ದೇಶವಾಗಿದೆ. ಅದು ಜೀವನವನ್ನು ಹಿಗ್ಗಿಸುತ್ತದೆ."

> "ಸಾಹಿತ್ಯವು ಸಮಾಜವನ್ನು ಕಟ್ಟಬಲ್ಲುದು ಎಂಬ ವಿಚಾರ ಮನಸ್ಸಿಗೆ ಸಮಾಧಾನ ತಂದುಕೊಳ್ಳಲು ಹಾಗೂ ಆ ಸಾಹಿತ್ಯಸೇವೆಯನ್ನು ಮುಂದುವರೆಸಲು ಸಾಕು. ಈ ಸಮಾಧಾನವೇ ಜೀವನವನ್ನು ಮುಂದುವರೆಸುತ್ತದೆ. ಮತ್ತು ಮುಪ್ಪಿನ ಕಾಲದಲ್ಲಿಯೂ ಸಹ ಬುದ್ಧಿಶಕ್ತಿಯನ್ನು ಕ್ರಿಯಾಶೀಲವಾಗಿಡುತ್ತದೆ. ಸಾಹಿತ್ಯದಲ್ಲಿ ಜೀವನವನ್ನು ಮುಂದುವರೆಸಿಕೊಂಡು ಹೋಗುವ ಶಕ್ತಿಯಿದೆ."

ಒಂದು ವಚನ (ಉರಿಲಿಂಗಪೆದ್ದಿ) ಶರಣನ ಇರವನ್ನು ಹೀಗೆ ಬಣ್ಣಿಸುತ್ತದೆ:

ಲೋಕದಂತೆ ಬಾರರು
ಲೋಕದಂತೆ ಇರರು
ಲೋಕದಂತೆ ಹೋಗರು ನೋಡಯ್ಯ
ನಿಮ್ಮ ಶರಣರು
ಪುಣ್ಯದಂತೆ ಬಪ್ಪರು
ಜ್ಞಾನದಂತೆ ಇಪ್ಪರು
ಮುಕ್ತಿಯಂತೆ ಮುಕ್ತರಾಗುವರು ನೋಡಯ್ಯ
ನಿಮ್ಮ ಶರಣರು.

ಪುಣ್ಯದಂತೆ ಬಂದು, ಜ್ಞಾನದಂತೆ ಇದ್ದು, ಮುಕ್ತಿಯಂತೆ ಬಯಲಾದ ಡಾ. ಹಳಕಟ್ಟಿ ನಮ್ಮೊಡನಿಲ್ಲ ಎಂದು ಹೇಗೆ ಹೇಳಲಾದೀತು?

"....................
ರುಮಾಲದ ಕಟ್ಟು ಬಿಚ್ಚಿಲ್ಲ, ತೆಗೆದಿಲ್ಲ ಇಟ್ಟ
ಕನ್ನಡಕ. ಉಡುಗಿಲ್ಲ ಉಟ್ಟ ಧೋತರ ಮಡಿಯು
ಮೆಲುದನಿ ಮಾತು ಭಕುತಿ ಬಳ್ಳಿಗೆ ಬಿಟ್ಟಕುಡಿಯು.
ಗೋಳಗುಮ್ಮಟ ತಾನೆ ತಲೆಬಾಗಿಸಿತು ನಿಮಗೆ,
ಏಳುಸಲ ಕರೆದರೂ ಎಚ್ಚರಾಗದು ನಮಗೆ."

(ಚೆನ್ನವೀರ ಕಣವಿ)

# ಗ್ರಂಥಋಣ


೧. ವಚನ ಶಾಸ್ತ್ರಸಾರ ಭಾಗ-೧
ಸಂ. ರಾ.ಸಾ.ಫ.ಗು. ಹಳಕಟ್ಟಿ, ಪ್ರ.ಮು. ೧೯೨೩.

೨. ಮಹಾದೇವಿಯಕ್ಕನ ವಚನಗಳು
ಸಂ. ಫ.ಗು. ಹಳಕಟ್ಟಿ, ಪ್ರ.ಮು. ೧೯೨೭.

೩. ಸಕಲೇಶ ಮಾದರಸನ ವಚನಗಳು
ಸಂ. ಫ.ಗು. ಹಳಕಟ್ಟಿ, ಪ್ರ.ಮು. ೧೯೨೯.

೪. ಶೂನ್ಯ ಸಂಪಾದನೆ (ಸಂಕಲನಕಾರ ಗೂಳೂರು ಸಿದ್ಧವೀರಣಾರ್ಯ)
ಸಂ. ಫ.ಗು. ಹಳಕಟ್ಟಿ, ಪ್ರ.ಮು. ೧೯೩೦.

೫. ಶಿವಾನುಭವ ಶಬ್ದಕೋಶ
ಸಂ. ಫ.ಗು. ಹಳಕಟ್ಟಿ, ಪ್ರ.ಮು.೧೯೩೧.

೬. ಪ್ರಭುದೇವರ ವಚನಗಳು
ಸಂ. ಫ.ಗು. ಹಳಕಟ್ಟಿ, ಪ್ರ.ಮು. ೧೯೩೧.

೭. ಚೆನ್ನಬಸವೇಶ್ವರನ ವಚನಗಳು
ಸಂ. ಫ.ಗು. ಹಳಕಟ್ಟಿ, ಪ್ರ.ಮು. ೧೯೩೨.

೮. ಸಿದ್ಧರಾಮೇಶ್ವರನ ವಚನಗಳು
ಸಂ. ಫ.ಗು. ಹಳಕಟ್ಟಿ, ಪ್ರ.ಮು. ೧೯೩೨.

೯. ಹರಿಹರನ ರಗಳೆಗಳು
ಭಾಗ-೧ ಸಂ. ಫ.ಗು. ಹಳಕಟ್ಟಿ, ಪ್ರ.ಮು. ೧೯೩೩,
ಭಾಗ-೨, ಪ್ರ.ಮು. ೧೯೩೩.

ಭಾಗ-೩, ಪ್ರ.ಮು. ೧೯೩೩.
ಭಾಗ-೪, ಪ್ರ.ಮು. ೧೯೩೩.
ಭಾಗ-೫, ಪ್ರ.ಮು. ೧೯೩೫.
ಭಾಗ-೬, ಪ್ರ.ಮು. ೧೯೩೭.
ಭಾಗ-೭, ಪ್ರ.ಮು. ೧೯೪೦.

೧೦. ವಚನಶಾಸ್ತ್ರಸಾರ ಭಾಗ-೨
ಸಂ. ರಾ.ಸಾ. ಫ.ಗು. ಹಳಕಟ್ಟಿ, ಪ್ರ.ಮು. ೧೯೩೮.

೧೧. ದೇವರ ದಾಸಿಮಯ್ಯನ ವಚನಗಳು
ಸಂ. ಫ.ಗು. ಹಳಕಟ್ಟಿ, ಪ್ರ.ಮು. ೧೯೩೯. (?)

೧೨. ಪರಮಾತ್ಮನ ಸ್ವರೂಪ (ವಚನಗಳು)
ಸಂ. ರಾ.ಸಾ. ಫ.ಗು. ಹಳಕಟ್ಟಿ, ಪ್ರ.ಮು. ೧೯೪೮.

೧೩. ಹಡಪದಪ್ಪಣ್ಣನ ವಚನಗಳು
ಸಂ. ಫ.ಗು. ಹಳಕಟ್ಟಿ, ಪ್ರ.ಮು. (?)

೧೪. ವಚನ ಪಿತಾಮಹ (ಡಾ. ಫ.ಗು. ಹಳಕಟ್ಟಿ ಸ್ಮಾರಕ ಸಂಪುಟ)
ಸಂ. ಸಂಗಮನಾಥ ಹಂಡಿ, ಪ್ರ.ಮು. ೧೯೬೮.

೧೫. ಭಾರತೀಯ ಪತ್ರಿಕೋದ್ಯಮ
ನಾಡಿಗ ಕೃಷ್ಣಮೂರ್ತಿ, ಪ್ರ.ಮು.೧೯೬೯.

೧೬. ಹಳಕಟ್ಟಿ ಫಕೀರಪ್ಪನವರು
ಸಂಗಮನಾಥ ಹಂಡಿ, ಪ್ರ.ಮು.೧೯೮೦.

೧೭. ತಮ್ಮಣ್ಣಪ್ಪನವರು ಚಿಕ್ಕೋಡಿ
ಡಾ. ಜಯವಂತ ಎಸ್. ಕುಳ್ಳಿ, ಪ್ರ.ಮು. ೧೯೮೩.

೧೮. ಫ.ಗು. ಹಳಕಟ್ಟಿ
ಪ್ರ.ಸಂ. ಎಲ್.ಎಸ್.ಶೇಷಗಿರಿರಾವ್, ಲೇಖಕ: ಡಾ. ವಿ. ಶಿವಾನಂದ,
ಪ್ರ.ಮು. ೧೯೭೪.

೧೯.ಮಣಿಹ (ಜನ್ಮಶತಮಾನೋತ್ಸವ ಸಂಸ್ಮರಣ ಸಂಪುಟ)
ಸಂ. ಪ್ರೊ. ಎಂ.ವಿ. ಸೀತಾರಾಮಯ್ಯ, ಡಾ. ಆರ್. ಶೇಷಶಾಸ್ತ್ರಿ
ಪ್ರ.ಮು.೧೯೮೨.

ಫ.ಗು. ಹಳಕಟ್ಟಿಯವರ ಸಂಪಾದಕತ್ವದ ಪತ್ರಿಕೆಗಳು:

ಶಿವಾನುಭವ ಸಂ.೧, ಸಂಚಿಕೆ ೩, ಆಗಸ್ಟ್ ೧೯೨೬.

ಶಿವಾನುಭವ ಪತ್ರಿಕೆಯ ೨೫ ನೆಯ ವಾರ್ಷಿಕ ವರದಿ, ೧೯೫೦-೫೧.

'ನವ ಕರ್ನಾಟಕ' ವಾರಪತ್ರಿಕೆಯ ಸಂ.೧, ಸಂಚಿಕೆ ೬, ಅಕ್ಟೋಬರ್ ೧೯೨೭ ರಿಂದ ೧೯೫೫ ರವರೆಗಿನ ಪತ್ರಿಕೆಗಳು.

ಡಾ. ಫ.ಗು. ಹಳಕಟ್ಟಿ ಜನ್ಮಶತಮಾನೋತ್ಸವ,
'ಕರ್ನಾಟಕ ಭಾರತಿ' ವಿಶೇಷಾಂಕ ೧೬-೧,೨ ೧೯೮೩
(ಪ್ರ.ಸಂಪಾದಕರು: ಡಾ. ಎಂ.ಎಂ. ಕಲಬುರ್ಗಿ
ಸಂಪಾದಕರು: ಡಾ. ಎಂ.ಬಿ. ಕೊಟ್ರಶೆಟ್ಟಿ)

Indian Institute ... SHIMLA
117211
10.12.04

ಕಾಲವಿಸ್ಮೃತಿಯಲ್ಲಿ ಹುದುಗಿದ್ದ ವಚನಸಾಹಿತ್ಯದ ಅಕ್ಷಯನಿಧಿಯನ್ನು ಅನ್ವೇಷಿಸಿ, ಸಂಪಾದಿಸಿ ಪ್ರಕಟಿಸಿ, ೧೨ ನೆಯ ಶತಮಾನದ ಶಿವಶರಣರ ಕಾಯಕ ತತ್ವಾಧಾರಿತ, ಸ್ವಾವಲಂಬಿ ಸಮಾಜನಿರ್ಮಾಣದ ಕ್ರಾಂತಿಯ ಸ್ವರೂಪದರ್ಶನ ಮಾಡಿಸಿದ ಡಾ. ಫ. ಗು. ಹಳಕಟ್ಟಿ, ಸಾಹಿತ್ಯ ಸಂಶೋಧನೆಗಳ ಸತ್ಯಪಥದ ದಣಿವರಿಯದ ಪಯಣಿಗ.

ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಆಲೋಚನೆಗಳ ವಸ್ತುನಿಷ್ಠ ಪ್ರಸರಣದಿಂದ ಮಾತ್ರ ಜನಸಮುದಾಯಗಳ ಜಾಗೃತಿ, ಮಾನವ ಕಲ್ಯಾಣ ಸಾಧ್ಯವೆಂದರಿತ ಡಾ. ಹಳಕಟ್ಟಿ ತಾನು ನಂಬಿದ ತತ್ತ್ವಗಳಿಗೆ ಬದ್ಧನಾಗಿ, ತನ್ನ ಶಕ್ತಿಸಾಮರ್ಥ್ಯಗಳನ್ನು ಧಾರೆಯೆರೆದ ಅವಿಸ್ಮರಣೀಯ ಸಂವಹನಕಾರ; ತ್ಯಾಗಸೇವೆಗಳ ಅನುಪಮ ಹರಿಕಾರ!

F. G. Halakatti (Kannada) Rs.15

ISBN 81-7201-587-9

Library IIAS, Shimla
K 891.481 409 2 H 128 H
00117211